# ಪಬ್ ಮತ್ತು ಬರ್ತ್‌ಡೇ ಪಾರ್ಟಿಗಳ ಮೇಲೆ ದಾಳಿ

# ಸಂಘ ಪರಿವಾರದ ಕೋಮು ಪೊಲೀಸ್‌ಗಿರಿ

## ಜಂಟಿ ಸತ್ಯಶೋಧನಾ ವರದಿ

**ನಾಗರಿಕ ಹಕ್ಕುಗಳಿಗಾಗಿ ಜನರ ಒಕ್ಕೂಟ–ಕರ್ನಾಟಕ (PUCL-K)**

**ಮತ್ತು**

**ಮಹಿಳಾ ದೌರ್ಜನ್ಯ ವಿರೋಧಿ ವೇದಿಕೆ ಮಂಗಳೂರು**

ಇಂಗ್ಲಿಷ್ ಮೂಲ
ಸೆಪ್ಟೆಂಬರ್ ೨೦೧೨, ಪ್ರತಿಗಳು: ೭೫೦

**ಕನ್ನಡ ಆವೃತ್ತಿ**

ನವಂಬರ್ ೨೦೧೨

ಮುದ್ರಣ
ನವಂಬರ್ ೨೦೧೨

ಪ್ರತಿಗಳು
೫೦೦

ಪ್ರಕಾಶನ
ನಾಗರಿಕ ಹಕ್ಕುಗಳಿಗಾಗಿ ಜನರ ಒಕ್ಕೂಟ–ಕರ್ನಾಟಕ(PUCL-K)
ಮತ್ತು
ಮಹಿಳಾ ದೌರ್ಜನ್ಯ ವಿರೋಧಿ ವೇದಿಕೆ ಮಂಗಳೂರು, ನವಂಬರ್ ೨೦೧೨

ಸೂಚಿತ ಕೊಡುಗೆ
೩೦ ರೂಪಾಯಿಗಳು

ಅನುವಾದಕರು
ಶ್ರೀನಿವಾಸ ಕಾರ್ಕಳ
ಅಸಫ್ ಅಬ್ದುಲ್ಲ
ಮತ್ತು
ಶಾಂತರಾಜು ಎಸ್

ವಿನ್ಯಾಸ ಮತ್ತು ಮುದ್ರಣ
ಆಕೃತಿ ಪ್ರಿಂಟ್ಸ್
ಮಂಗಳೂರು–೫೭೫೦೦೧

ಈ ಪುಸ್ತಕದ ಯಾವುದೇ ಭಾಗವನ್ನು ಅವಶ್ಯಕತೆಗೆ ತಕ್ಕಂತೆ ಮರುಮುದ್ರಣ ಅಥವಾ
ನಕಲು, ಪ್ರತಿ ವರ್ಗಾವಣೆ ಮಾಡಬಹುದಾಗಿದೆ.

# ಪರಿವಿಡಿ


I. ಪರಿಚಯ ೫

II. ಬರ್ತ್‌ಡೇ ಪಾರ್ಟಿ ಮೇಲೆ ದಾಳಿ ೭

- ದಾಳಿಗೊಳಪಟ್ಟ ಸಂತ್ರಸ್ತರ ಸಾಕ್ಷ್ಯ
- ಮಾಧ್ಯಮದವರ ಸಾಕ್ಷ್ಯ
- ಹಿಂದುತ್ವ ಪ್ರತಿಪಾದಿಸುವ ಸಂಘಟನೆಗಳ ಪ್ರತಿಕ್ರಿಯೆ
- ಪೋಲೀಸರ ಪ್ರತಿಕ್ರಿಯೆ
- ಹುಟ್ಟು ಹಬ್ಬದ ದಾಳಿ ವಿಮರ್ಶೆ

III. ಹುಟ್ಟುಹಬ್ಬದ ಪಾರ್ಟಿಯ ಮೇಲಣ ದಾಳಿಯು ಬಯಲಿಗೆ ಬಂದಿರುವ ಒಂದು ಅತಿ ಸಣ್ಣ ಭಾಗವಷ್ಟೇ: ದಕ್ಷಿಣ ಕನ್ನಡದಲ್ಲಿ ಕೋಮು ಪೋಲಿಸ್‌ಗಿರಿ ೩೩

IV. ಕೋಮು ಪೋಲಿಸ್‌ಗಿರಿಯ ಪರಿಣಾಮಗಳು: ಒಂದು ಅಸಾಂವಿಧಾನಿಕ ಭೇದಭಾವ ೪೧

V. ಸ್ಥಾಪಿತ ಸಾಂವಿಧಾನಿಕ ಸ್ವಾತಂತ್ರ್ಯಗಳ ಮೇಲಣ ನಿರಂತರ ಹಲ್ಲೆಗೆ ದಕ್ಷಿಣಕನ್ನಡವನ್ನು ಏಕೆ ಈಡುಮಾಡಲಾಗುತ್ತದೆ? ೪೫

VI. ಬೇಡಿಕೆಗಳು ೪೭

# ಪರಿಚಯ

ಹಿಂದೂ ಸಂಸ್ಕೃತಿಗೆ ವಿರುದ್ಧವಾಗಿ ಹುಡುಗಿಯರು ಮದ್ಯವನ್ನು ಕುಡಿಯುತ್ತಿದ್ದಾರೆಂದು ಆಪಾದಿಸಿ ೨೦೦೯ರ ಜನವರಿ ೨೪ರಂದು ಶ್ರೀರಾಮಸೇನೆಯ ಪ್ರಮೋದ್ ಮುತಾಲಿಕ್ ಪಡೆ ಮಂಗಳೂರಿನ ಒಂದು ಪಬ್‌ಗೆ ನುಗ್ಗಿ ಹುಡುಗಿಯರನ್ನು ಹಿಗ್ಗಾಮುಗ್ಗಾ ಬಡಿದು ಮೂರು ವರ್ಷ ತುಂಬುವಷ್ಟರಲ್ಲಿ ಸುಭಾಷ್ ಪಡೀಲ್ ಮತ್ತು ಅವನ ಪಡೆ ಜುಲೈ ೨೮, ೨೦೧೨ ರಂದು ಹುಟ್ಟುಹಬ್ಬ ಆಚರಿಸುತ್ತಿದ್ದ ಹುಡುಗ ಹುಡುಗಿಯರ ಮೇಲೆ ದಾಳಿ ಮಾಡಿ ಮುತಾಲಿಕ್ ಮಾಡಿದ ಅನಾಗರಿಕ ವರ್ತನೆಯನ್ನು ಪುನರಾವರ್ತಿಸಿದರು. ಇದು ನಡೆದದ್ದು ಮಂಗಳೂರಿನ ಹೃದಯಭಾಗದಲ್ಲಿರುವ ಪಡೀಲ್ ಎಂಬಲ್ಲಿ.

ಈ ಎರಡು ದಾಳಿಗಳೂ ರಾಷ್ಟ್ರೀಯವಾಗಿಯಲ್ಲದೆ ಅಂತರರಾಷ್ಟ್ರೀಯವಾಗಿಯೂ ಕುಖ್ಯಾತಿ ಹೊಂದಿದರೂ, ಅವರ ಉದ್ದೇಶವೇನಿತ್ತೋ ಅದರಲ್ಲೇನೂ ವಿಶೇಷತೆ ಇರಲಿಲ್ಲ. ಇವರಿಗೆ ಮಾಧ್ಯಮ ಪ್ರಚಾರ ಸಿಕ್ಕಿರುವುದು ಮಾತ್ರ ವಿಶೇಷ. ಈ ಎರಡೂ ದಾಳಿಗಳು ನಡೆದ ಅವಧಿಯ ಮಧ್ಯೆ ಸರಿಸುಮಾರು ೧೧೨ ದಾಳಿಗಳು ಒಟ್ಟಿಗೇ ಇದ್ದ ಯುವಕ ಯುವತಿಯರ ಮೇಲೆ ಅಥವಾ ಪ್ರತ್ಯೇಕವಾಗಿ ಹುಡುಗಿಯರ ಮೇಲೆ ನಡೆದಿದೆ. ಈ ದಾಳಿಗಳನ್ನು ಮಾಧ್ಯಮದವರು ಸುದ್ದಿ ಮಾಡಲಿಲ್ಲ, ದಿನಪತ್ರಿಕೆಗಳು ವರದಿ ಮಾಡಿದರೂ, ಅದು ಸಣ್ಣ ವರದಿಗಳಾಗಿತ್ತಲ್ಲದೇ ಮುಖ್ಯವಾಗಿ ಸ್ಥಳೀಯ ಪತ್ರಿಕೆಗಳಲ್ಲಾಗಿತ್ತು. ಕೆಲವೊಮ್ಮೆ ಮಾತ್ರ ರಾಷ್ಟ್ರೀಯ ಸುದ್ದಿಯಾಗುತ್ತಿತ್ತು.

ಈ ವರದಿಯು ಮೊದಲಿಗೆ ದಾಳಿಗೊಳಗಾದವರ ಮತ್ತು ಮಾಧ್ಯಮದವರ ದೃಷ್ಟಿಯಿಂದ ಬರ್ತ್‌ಡೇ ಪಾರ್ಟಿಯ ಮೇಲೆ ನಡೆದ ದಾಳಿಯಲ್ಲಿ ಏನು ನಡೆದಿದೆಯೆಂದು ದಾಖಲಿಸಿದೆ. ನಂತರ ದಾಳಿಯ ಬಗ್ಗೆ ಹಿಂದುತ್ವ ಸಂಘಟನೆಗಳು, ರಾಜ್ಯ ಮಹಿಳಾ ಆಯೋಗದ ತರಹದ ಸರ್ಕಾರಿ ಸಂಸ್ಥೆಗಳು ಮತ್ತು ಮಂಗಳೂರಿನ ವಿದ್ಯಾರ್ಥಿಗಳು ಇವರೆಲ್ಲರ ಅಭಿಪ್ರಾಯವನ್ನು ದಾಖಲಿಸಲಾಗಿದೆ. ದಕ್ಷಿಣಕನ್ನಡ ಜಿಲ್ಲೆ ಅಂದರೆ ಮಂಗಳೂರು, ಪುತ್ತೂರು, ಬೆಳ್ತಂಗಡಿ, ಸುಳ್ಯ, ಬಂಟ್ವಾಳ, ಕಾರ್ಕಳ ಮತ್ತು ಉಡುಪಿ ತಾಲೂಕುಗಳನ್ನು ಒಳಗೊಂಡ ಅವಿಭಜಿತ ದ.ಕ. ಜಿಲ್ಲೆ ಎಂದು ಇಲ್ಲಿ ಗಣನೆಗೆ ತೆಗೆದುಕೊಳ್ಳಲಾಗಿದೆ. ಕರಾವಳಿ ಕರ್ನಾಟಕದ ಈ ಭಾಗವನ್ನು ತುಳುನಾಡು ಎಂದೂ ಕರೆಯಲಾಗಿದೆ. ಈ ವರದಿಯು ದಕ್ಷಿಣಕನ್ನಡ ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆಯ ತೀವ್ರ ಕುಸಿತವನ್ನು ಈ ಪ್ರಸಂಗದ ಮೂಲಕ ಎತ್ತಿ ತೋರಿಸುತ್ತಿದೆ. ಈ ಘಟನೆಯು ಜಿಲ್ಲೆಯ ಕಾನೂನು ಪಾಲನೆಯಲ್ಲಿ ಆಗಬೇಕಾದ ಅಗತ್ಯ ಬದಲಾವಣೆಯನ್ನು ತೋರಿಸುತ್ತದೆ. ಆದುದರಿಂದ ಇಂತಹವುಗಳು ಮರುಕಳಿಸದಂತೆ ಸರ್ಕಾರವು ತೀವ್ರ ಎಚ್ಚರಿಕೆಯ ಕ್ರಮ ಕೈಗೊಳ್ಳಬೇಕಿದೆ.

ಈ ಘಟನೆಯ ಹಿಂದಿನ ಸತ್ಯಾಂಶವನ್ನು ಬಯಲಿಗೆಳೆಯುವುದು ಮತ್ತು ನಿರ್ದಿಷ್ಟವಾಗಿ ಪ್ರಕರಣದ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲು ಆಗ್ರಹಿಸುವುದು ಮಾತ್ರ ಈ ವರದಿಯ ಉದ್ದೇಶವಲ್ಲ. ಇದರ ಗಂಭೀರತೆಯನ್ನರಿತು ಇಂತಹ ಘಟನೆಗಳು ಭವಿಷ್ಯದಲ್ಲಿ ಮರುಕಳಿಸದಂತೆ, ಪ್ರಭುತ್ವವು ಹೊಣೆಯರಿತು ಕ್ರಮ ಕೈಗೊಳ್ಳಬೇಕಾಗಿದೆ.

ಈ ಹಿಂದೆ ಪಬ್ ಮೇಲೆ ದಾಳಿ ನಡೆದಿದ್ದಾಗ (PUCL-K) "ದಕ್ಷಿಣಕನ್ನಡದಲ್ಲಿ ಸಾಂಸ್ಕೃತಿಕ ಪೊಲೀಸ್‌ಗಿರಿ, ಮಹಿಳೆಯರು ಮತ್ತು ಅಲ್ಪಸಂಖ್ಯಾತರ ಮೇಲೆ ನೈತಿಕ ಪೊಲೀಸರ ದಾಳಿಗಳು ೨೦೦೮-೦೯" ಎಂಬ ಹೆಸರಿನಲ್ಲಿ ವರದಿಯೊಂದನ್ನು ತಯಾರಿಸಿತ್ತು. ಪ್ರಸಕ್ತ ವರದಿಯಲ್ಲಿ ಹಿಂದಿನ ವರದಿಯ ಮಾಹಿತಿಗಳಿಗೆ ಮತ್ತು ವಿಶ್ಲೇಷಣೆಗಳಿಗೆ ಹೊಸ ಅಂಶಗಳನ್ನು ಸೇರಿಸಲು ಪ್ರಯತ್ನಿಸಲಾಗಿದೆ ಮತ್ತು ಅಂದು ನಾವು "ಸಾಂಸ್ಕೃತಿಕ ಪೊಲೀಸ್‌ಗಿರಿ" ಎಂದು ಹೆಸರಿಸಿದ್ದನ್ನು ಈಗ "ಕೋಮು ಪೊಲೀಸ್‌ಗಿರಿ" ಎಂದು ಕರೆಯಲು ಯಾಕೆ ನಿರ್ಧರಿಸಿದೆವು ಎಂಬುದು ಪುಸ್ತಕದ ಮುಂದಿನ ವಿಭಾಗಗಳಲ್ಲಿ ಸ್ಪಷ್ಟವಾಗಲಿದೆ.

ನಾಗರಿಕ ಹಕ್ಕುಗಳಿಗಾಗಿ ಜನರ ಒಕ್ಕೂಟ-ಕರ್ನಾಟಕ (PUCL-K) ಮತ್ತು ಮಂಗಳೂರಿನ ಆತಂಕಿತ ಮಹಿಳೆಯರ ಸಂಘಟನೆಯಾದ ಮಹಿಳಾ ದೌರ್ಜನ್ಯ ವಿರೋಧೀ ವೇದಿಕೆಯ ತಂಡಗಳ ಜಂಟಿ ಸಾಹಸ, ಈ ಸತ್ಯ ಶೋಧನೆ.

## ಸತ್ಯಶೋಧನ ತಂಡದಲ್ಲಿದ್ದವರು

೧. ಮಹಿಳಾ ದೌರ್ಜನ್ಯ ವಿರೋಧಿ ವೇದಿಕೆ ಮಂಗಳೂರು

೨. ಸುರೇಶ್ ಭಟ್ - PUCL-K

೩. ರಾಮ್‌ದಾಸ್ ರಾವ್ - PUCL-K

೪. ಅರವಿಂದ ನಾರಾಯಣ- ALF (ಪರ್ಯಾಯ ಕಾನೂನು ವೇದಿಕೆ)

# ಬರ್ತ್‌ಡೇ ಪಾರ್ಟಿ ಮೇಲೆ ದಾಳಿ

ಮಾರ್ನಿಂಗ್ ಮಿಸ್ಟ್ ಹೋಂಸ್ಟೇ ಅಥವಾ ಗೆಸ್ಟ್ ಹೌಸ್ ನಗರದ ವಾರ್ಡ್ ನಂ.೫೧ (ಪಡೀಲ್ ಉತ್ತರ)ರಲ್ಲಿದೆ. ಜುಲೈ ೨೮, ೨೦೧೨ ರ ಸಂಜೆ ೭ರ ಹೊತ್ತಿಗೆ ಹುಟ್ಟು ಹಬ್ಬದ ಆಚರಣೆಯಲ್ಲಿ ತೊಡಗಿದ್ದ ಐದು ಹುಡುಗಿಯರು ಮತ್ತು ಎಂಟು ಹುಡುಗರ ಮೇಲೆ ಹಿಂದೂ ಜಾಗರಣ ವೇದಿಕೆ ಕಾರ್ಯಕರ್ತರು ದಾಳಿಮಾಡಿದರು. ಸತ್ಯಶೋಧನಾ ತಂಡದ ಸದಸ್ಯರು ದಾಳಿಗೆ ಒಳಗಾದ ಸಂತ್ರಸ್ತರು ಮತ್ತು ಅವರ ಕುಟುಂಬದವರನ್ನು ಸಂದರ್ಶಿಸಿ ಅವರಿಂದ ಘಟನೆಯ ಬಗ್ಗೆ ಸವಿವರವಾದ ಮಾಹಿತಿಯನ್ನು ಕಲೆ ಹಾಕಿದರು.

## ದಾಳಿಗೊಳಪಟ್ಟ ಸಂತ್ರಸ್ತರ ಸಾಕ್ಷ್ಯ

### ವಿಜಯ ಕುಮಾರ್

ನಾನು ೨೩ ವರ್ಷದಿಂದ ಉರ್ವದಲ್ಲಿ ವಾಸವಾಗಿದ್ದೇನೆ. ನಾನು ಇವೆಂಟ್ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದೇನೆ. ಪಾರ್ಟಿಗಳಿಗೆ ಬೇಕಾದ ಎಲ್ಲಾ ವ್ಯವಸ್ಥೆಯನ್ನು ಮತ್ತು ಸಂಗೀತ ಕಾರ್ಯಕ್ರಮವನ್ನು ನೀಡುತ್ತೇನೆ. ಆದರೆ ಆ ದಿವಸ ಯಾವುದೇ ಪಾರ್ಟಿ ನಡೆಸುವ ಇರಾದೆ ಇರಲಿಲ್ಲ. ನನ್ನಲ್ಲಿ ಅಷ್ಟು ಹಣವೂ ಇರಲಿಲ್ಲ. ನನ್ನ ಹುಟ್ಟುಹಬ್ಬದ ದಿನದಂದು ಪರಿಚಯದ ಹುಡುಗಿಯೊಬ್ಬಳು ನನ್ನಲ್ಲಿ "ಇವತ್ತಿನ ಪಾರ್ಟಿಯ ಆತಿಥ್ಯವನ್ನು ನಾನು ವಹಿಸುತ್ತೇನೆ. ನೀನು ನನ್ನೊಂದಿಗೆ ಹುಟ್ಟುಹಬ್ಬವನ್ನು ಆಚರಿಸು. ಮಧ್ಯಾಹ್ನದಿಂದ ಸಂಜೆಯವರೆಗೆ ನನ್ನ ಬರ್ತ್‌ಡೇ ಪಾರ್ಟಿ ಆಚರಿಸಿದರೆ, ಸಂಜೆಯಿಂದ ರಾತ್ರಿಯವರೆಗೆ ನೀನು ನಿನ್ನ ಪಾರ್ಟಿಯನ್ನು ಮಾಡಬಹುದು" ಎಂದಳು. ಅದೇ ಶನಿವಾರ ಮಧ್ಯಾಹ್ನ ಒಂದು ಗಂಟೆಯ ಹೊತ್ತಿಗೆ ನಾವು ಹೋಂಸ್ಟೇ ಇದ್ದಲ್ಲಿಗೆ ಹೋಗಿ ಅದನ್ನು ಬಾಡಿಗೆಗೆ ಪಡೆದೆವು. ಅವರು "ನೀವು ಒಂದು ಸಾವಿರ ಅಡ್ವಾನ್ಸ್ ಮತ್ತು ಐದು ಸಾವಿರ ಬಾಡಿಗೆಯನ್ನು ನೀಡಬೇಕು. ರಸೀದಿ ಮತ್ತು ಅಡ್ವಾನ್ಸ್ ಮೊತ್ತವನ್ನು ನಾಳೆ ಹಿಂತಿರುಗಿಸುತ್ತೇವೆ" ಎಂದು ಹೇಳಿದರು. "ಹಣವನ್ನು ನಾವು ಶೇರ್ ಮಾಡುವ" ಎಂದು ಅವಳು (ಗೆಳತಿ) ಹೇಳಿದಳು. ಮಧ್ಯಾಹ್ನ ಎರಡು ಗಂಟೆಯ ಹೊತ್ತಿಗೆ ಅಲ್ಲಿ(ಪಡೀಲ್)ಗೆ ಹೋದಾಗ ಅಲ್ಲಿಯ ಸಿಬ್ಬಂದಿಯವರು(ಕೆಲಸದವರು) ನಮಗಾಗಿ ಎಲ್ಲಾ ವ್ಯವಸ್ಥೆಯನ್ನು ಮಾಡಿದ್ದರು. ಸಂಜೆ

ಸುಮಾರು ಗಂಟೆ ೩ ಅಥವಾ ೪ರ ವರೆಗೆ ನಾವು ಮಾತನಾಡುತ್ತಾ ಕಾಲ ಕಳೆದೆವು. ಕೇಕನ್ನು ಕತ್ತರಿಸಿಯೂ ಆಗಿತ್ತು. ಮತ್ತೆ ನಾವು ಮನೆಗೆ ಹೋಗಿ ಕೋಳಿ ಪದಾರ್ಥವನ್ನು ರೆಡಿ ಮಾಡಿ ಸಂಜೆ ಐದರ ಹೊತ್ತಿಗೆ ಮರಳಿದೆವು. ನಾನು ಕೋಲ್ಡ್‌ಡ್ರಿಂಕ್ಸ್ ಮತ್ತು ಚಿಕನ್ ಫ್ರಿಡ್ಜ್‌ನಲ್ಲಿ ಇಟ್ಟು, ಮೇಲಂತಸ್ತಿನಲ್ಲಿದ್ದ ಬಾತ್ ರೂಂಗೆ ಹೋಗಿ ಫ್ರೆಶ್ ಅಪ್ ಆಗ್ತಾ ಇದ್ದೆ. ಕುಡಿಯಲು ಅಲ್ಲಿ ನೀರು ಇಲ್ಲದೆ ಇದ್ದುದರಿಂದ ಗುರು ನೀರು ತರಲು ಹೊರಗೆ ಹೋಗಿದ್ದ. ಆಗಲೇ ನೆಲ ಅಂತಸ್ತಿನಿಂದ ನನಗೆ ಗದ್ದಲದ ಶಬ್ದ ಕೇಳಿಸಿತು. ಹುಡುಗಿಯರು ಹೆದರಿ ಗೊಂದಲದಿಂದ ಕಿರುಚುತ್ತಿದ್ದರು. ನಾನು ಹೊರಬಂದೆ. ಅಲ್ಲಿ ಕೆಲವು ಯುವಕರು ಹುಡುಗಿಯರನ್ನು ಹೊಡೆಯುತ್ತಿದ್ದರು. ನಾನು ಮೆಟ್ಟಿಲಿನಿಂದ ಕೆಳಗಿಳಿಯಲು ಪ್ರಾರಂಭಿಸಿದಾಗ ಐದರಿಂದ ಆರು ಜನ ನನ್ನನ್ನು ಹಿಂಬಾಲಿಸಿದರು. ನಾನು ಓಡಿಹೋಗಿ ಬಾಗಿಲನ್ನು ಹಾಕಿದೆ. ಅವರು ಬಾಗಿಲನ್ನು ಒಡೆದು, ನನ್ನನ್ನು ಹೊರಗೆಳೆದು, ತುಳಿದರು. ನನ್ನ ಬಟ್ಟೆಯನ್ನು ಬಿಚ್ಚಿ ಚೆನ್ನಾಗಿ ಹೊಡೆದರು. ನಂತರ ನನ್ನನ್ನು ಕೆಳಕ್ಕೆ ಎಳೆದು ತಂದರು. ಇದೆಲ್ಲವೂ ವೀಡಿಯೋದಲ್ಲಿ ತೋರಿಸಲಿಲ್ಲ. ನೆಲ ಅಂತಸ್ತಿನಲ್ಲಿಯೂ ನನಗೆ ಹೊಡೆದರು. ನಾನಾಗ ಅವರಲ್ಲಿ “ಇದು ರೇವ್ ಪಾರ್ಟಿ ಅಲ್ಲ. ನನ್ನ ಮತ್ತು ಗೆಳತಿಯ ಬರ್ತ್‌ಡೇ” ಎಂದಾಗ ಅವರು "ನೀನು ರೇವ್ ಪಾರ್ಟಿ ಮಾಡುತ್ತೀಯ" ಅಂತ ಹೇಳಿ ಕೆಟ್ಟ ಪದಗಳಿಂದ ನಿಂದಿಸಿದರು. ಅವರು ಹುಡುಗಿಯರ ಬಟ್ಟೆಗಳನ್ನು ಬಿಚ್ಚಿ ಅವರ ಮೈ ಮೇಲೆಲ್ಲಾ ಕೈಹಾಕುತ್ತಿದ್ದರು.

ಕ್ಯಾಮರಾದವನು ನನಗೆ ನೋಡಿ ಪರಿಚಯವಿದ್ದವನಾಗಿದ್ದ. ಅವನಲ್ಲಿ ಕೇಳಿದೆ "ನಿನಗೆ ನನ್ನ ಬಗ್ಗೆ ಗೊತ್ತಿಲ್ಲವೆ(ಪರಿಚಯವಿಲ್ಲವೇ)?" ಅವನು ಅದಕ್ಕೆ ಏನೂ ಹೇಳಲಿಲ್ಲ. ಮೂರರಿಂದ ನಾಲ್ಕು ಜನ ಬಂದು ನನಗೆ ಹೊಡೆಯಲು ಪ್ರಾರಂಭಿಸಿದರು. “ನಿನಗೆ ಬರ್ತ್‌ಡೇ ಪಾರ್ಟಿಯನ್ನು ಆಚರಿಸಲು ಹುಡುಗಿಯರೇ ಬೇಕಾ?” ಅಂತ ಕೇಳುತ್ತಿದ್ದರು. ಅಲ್ಲೇ ಬಲ ಭಾಗದಲ್ಲಿ ಇದ್ದ ರೂಮಿನಲ್ಲಿ ಕೂಡಿ ಹಾಕಿ ಫೋಟೋ ತೆಗೆದರು. ಹುಡುಗಿಯರ ಬಟ್ಟೆಗಳನ್ನು ಹರಿಯಲಾಗಿತ್ತು. ನನ್ನ ಟೀಶರ್ಟ್ ಸಹ ಕಾಣೆಯಾಗಿತ್ತು. ಅವರು ನನ್ನನ್ನು ಹಾಸಿಗೆಯಲ್ಲಿ ಕುಳ್ಳಿರಿಸಿ ಫೋಟೋ(ವಿಡಿಯೋ) ತೆಗೆದರು. ಆದರೂ ಅಲ್ಲಿಯವರೆಗೆ ಪೋಲೀಸರು ಬಂದಿರಲೇ ಇಲ್ಲ. ಸುಮಾರು ೧೦ ರಿಂದ ೧೫ ನಿಮಿಷದ ವರೆಗೆ ನಮ್ಮ ಮೇಲೆ ಹಲ್ಲೆ ಮಾಡಿದರು. ನಂತರ ಪೋಲೀಸರು ಬಂದರು. ನನ್ನಲ್ಲಿ ಹೇಳಿದರು, "ನೀವು ತಲೆಬಿಸಿ ಮಾಡಬೇಡಿ ನಿಮ್ಮೊಂದಿಗೆ ನಾವಿದ್ದೇವೆ". ಮತ್ತೆ ಅವರು ನಮಗೆ ರಕ್ಷಣೆ ನೀಡಿದರು. ನಂತರ ಅವರು ನಮ್ಮ ವಿಳಾಸವನ್ನು ಕೇಳಿ ವಿಚಾರಣೆಯನ್ನು ಆರಂಭಿಸಿದರು. ಅವರು ನಮ್ಮಲ್ಲಿ ಕೇಳಿದರು, "ಈ ಮನೆಯಲ್ಲಿ ಏನೆಲ್ಲ ಇದೆ". ನಮ್ಮಲ್ಲಿ ಆರು ಬಿಯರ್ ಮತ್ತು ಸ್ವಲ್ಪ ಚಿಕನ್ ಇತ್ತು ಅಷ್ಟೆ.

ನಮ್ಮ ಮೇಲೆ ಹಲ್ಲೆ ಮಾಡಿದವರು ನಮ್ಮನ್ನು ದೋಚಿದರು. ಗುರುವಿನ, ಮತ್ತೊಬ್ಬ ಗೆಳೆಯನ ಮತ್ತು ಇನ್ನೊಂದು ಹುಡುಗಿಯ ಚೈನ್‌ಗಳನ್ನು ಕದ್ದುಕೊಂಡು ಹೋಗಿದ್ದಾರೆ. ಅವರು ಬರ್ತ್‌ಡೇಯನ್ನು ಆಚರಿಸುತ್ತಿದ್ದ ಹುಡುಗಿಯ ಮೇಲೆ ತೀವ್ರವಾಗಿ ಹಲ್ಲೆ ಮಾಡಿದರು ಮತ್ತು ಅವಳನ್ನು ದರದರನೆ ಎಳೆದುಕೊಂಡು ಹೋಗಿದ್ದರು. ಅವಳ ಕಾಲನ್ನು ಬ್ಲೇಡಿನಿಂದ ಗೀರಿದ್ದರು. ಹುಡುಗಿಯರನ್ನು ಮುಟ್ಟಬಾರದ ಕಡೆಯಲ್ಲೆಲ್ಲಾ ಮುಟ್ಟುತ್ತಿದ್ದರು. ನೀವೊಬ್ಬ ಜಾಕೆಟ್ ಧರಿಸಿದ ಕರ್ರಗಿನ ವ್ಯಕ್ತಿಯನ್ನು ನೋಡಿರಬಹುದು. ಅವನು ಧರಿಸಿದ್ದು ಒಬ್ಬಳು ಹುಡುಗಿಯ ಜಾಕೆಟನ್ನು. ಅವರು ನನ್ನ ಪರ್ಸ್ ಮತ್ತು ಮೊಬೈಲ್, ಹುಡುಗಿಯರ ಚಿನ್ನದ ಸರವನ್ನು ಕದ್ದಿದ್ದರು. ಅವರನ್ನೆಲ್ಲಾ ನಾನು ಗುರುತು ಹಿಡಿಯಬಲ್ಲೆ. ನನಗೆ ಸುಭಾಷ್ ಪಡೀಲ್ ಮತ್ತು ಮುನ್ನನ ಮುಖ ಪರಿಚಯ ಚೆನ್ನಾಗಿದೆ. ಮತ್ತೆ ಕೆಲವರ ಹೆಸರು ಗೊತ್ತಿಲ್ಲ.

ಪೋಲೀಸರು ವೀಡಿಯೋವನ್ನು ನೋಡಿ ಅವರ ಹೆಸರುಗಳನ್ನು FIRನಲ್ಲಿ ದಾಖಲಿಸಿದ್ದಾರೆ. ನಾವೂ ಮಾಹಿತಿಯನ್ನು ಕೊಟ್ಟಿದ್ದೇವೆ. ನಮ್ಮ ನೆರೆಯ ಅನೇಕ ಗೆಳೆಯರು ಮಾಹಿತಿಯನ್ನು ನೀಡಿದ್ದಾರೆ. ನಾವು ಒಟ್ಟಿಗೆ ಐದು ಜನ ಹುಡುಗಿಯರು ಮತ್ತು ಎಂಟು ಜನ ಹುಡುಗರಿದ್ದೆವು. ಏಳು ಜನ ಹುಡುಗರಲ್ಲಿ ಇಬ್ಬರು ರೂಮಿನಲ್ಲಿ ಅಡಗಿ ಕೂತಿದ್ದರು. ಅವರು ಪೋಲೀಸರಿಗೆ ಮಾಹಿತಿ ನೀಡಲು ಪ್ರಯತ್ನಿಸಿದ್ದರು. ಕರೆ ಮಾತ್ರ ಬೆಂಗಳೂರಿಗೆ ಹೋಗಿತ್ತು. ಅದಕ್ಕೆ ಅವರ ಗೆಳೆಯರಿಗೆ ಕರೆಮಾಡಿ ಪೋಲೀಸರಿಗೆ ತಿಳಿಸಲು ಹೇಳಿದ್ದರು. ಹುಡುಗಿಯರ ಮನೆಯವರು ಸಂಜೆ ೬ ಗಂಟೆಯೊಳಗೆ ಮನೆ ತಲುಪಲು ಅವರಿಗೆ ಗಡುವು ನೀಡಿದ್ದರು.

ಪಾರ್ಟಿ ಮಾಡುವುದು ತಪ್ಪೇ? ನಾನು ಬಜರಂಗದಳದ ಹದಿನೈದಕ್ಕೂ ಅಧಿಕ ಪಾರ್ಟಿಗಳಲ್ಲಿ ಡಿಜೆಯಾಗಿ ಕಾರ್ಯ ನಿರ್ವಹಿಸಿದ್ದೇನೆ. ಆದರೆ ನಮ್ಮ ಪಾರ್ಟಿಯಲ್ಲಿ ಮ್ಯೂಸಿಕ್ ಇರಲಿಲ್ಲ. ನಾವೆಲ್ಲರೂ ಹತ್ತೊಂಬತ್ತು ವರ್ಷಕ್ಕಿಂತ

ಮೇಲ್ಪಟ್ಟವರು. ನಾವ್ಯಾರೂ ಅಶ್ಲೀಲ ಬಟ್ಟೆಗಳನ್ನು ಧರಿಸಿರಲಿಲ್ಲ. ಒಂದು ಹುಡುಗಿ ಧರಿಸಿದ ಜಾಕೆಟನ್ನು ಅವರು ಬಿಚ್ಚಿದರು. ಹುಟ್ಟುಹಬ್ಬವಿದ್ದ ಹುಡುಗಿ ತೀವ್ರ ಆಘಾತಗೊಂಡಿದ್ದಳು.

ಆದಿತ್ಯವಾರ ನಾವೆಲ್ಲರೂ ನಮ್ಮ ಹೇಳಿಕೆಯನ್ನು ನೀಡಲು ಪೋಲೀಸ್ ಠಾಣೆಗೆ ಹೋದಾಗ ಪೋಲೀಸರು ನಮ್ಮನ್ನು ಕೆಟ್ಟದಾಗಿ ಬಯ್ದರು. ನಮ್ಮನ್ನು ಸಂತೈಸುವ ಬದಲಾಗಿ ಕೆಟ್ಟ ಪದಗಳಿಂದ ನಿಂದಿಸಿದರು.

ದಾಳಿಕೋರರು ಬಂದ ಕೆಲವೇ ಕ್ಷಣಗಳಲ್ಲಿ ಪೋಲೀಸರು ಬಂದಿದ್ದಾರೆಂದು ನನ್ನ ಗೆಳೆಯ ಹೇಳಿದ್ದ. ಪೋಲೀಸರು ಬಂದು, ಆ ದಾಳಿಕೋರರೊಂದಿಗೆ ಅಲ್ಲಿಂದ ತೆರಳಲು ಹೇಳಿ, ಅವರ ವಿರುದ್ದ ಕ್ರಮ ಕೈಗೊಳ್ಳದೆ ಅವರಷ್ಟಕ್ಕೆ ಬಿಟ್ಟಿದ್ದರು. ಎರಡನೆಯ ತಂಡದೊಂದಿಗೆ ಸ್ಥಳೀಯ ಕಾರ್ಪೊರೇಟರ್ ಮೋಹನ್ ಪಡೀಲ್ ಸಹ ಬಂದಿದ್ದ. ಅವನು ಕಾರ್ಪೊರೇಟರ್ ಆಗಿ ದಾಳಿಯನ್ನು ನಿಲ್ಲಿಸುವ ಬದಲು ನಮ್ಮ ವಿರುದ್ಧ ಘೋಷಣೆಗಳನ್ನು ಕೂಗಿ ಅವರನ್ನು ಹುರಿದುಂಬಿಸುತ್ತಿದ್ದ.

ದಾಳಿ ನಡೆಯುತ್ತಿದ್ದ ಸಂದರ್ಭದಲ್ಲಿ, ಎರಡರಿಂದ ಮೂರು ಜನ ಕ್ಯಾಮರಾದವರು ಶೂಟ್ ಮಾಡುತ್ತಿದ್ದರು. ಮತ್ತೆ ಕೆಲವರು ಮೊಬೈಲ್‌ನಲ್ಲಿ ಕ್ಲಿಕ್ಕಿಸುತ್ತಿದ್ದರು. ಸಹಾಯ ಟಿವಿಯ ಶರಣ್ ಪರಿಚಯ ನನಗೆ ಮೊದಲೇ ಇತ್ತು. ಅವನು ಅವರೊಟ್ಟಿಗೆ ಬಂದಿದ್ದ. ಪಬ್ ದಾಳಿ ಆದ ಸಂದರ್ಭದಲ್ಲಿಯೂ ಅವನು ಇದ್ದ. ಶರಣ್ ತುಂಬಾ ಸಮಯದ ಹಿಂದೆಯೇ ಗೂಂಡಾಗಳೊಂದಿಗೆ ಗುರುತಿಸಿಕೊಂಡಿದ್ದ. ದಾಳಿಯ ಸಂದರ್ಭ 'ಭಾರತ್ ಮಾತಾ ಕೀ ಜೈ' ಅನ್ನುತ್ತಿದ್ದರು. ನಮಗೆ ದಾಳಿ ಮಾಡಿದವರ್‍ಯಾರು ಅಂತ ಗೊತ್ತಿರಲಿಲ್ಲ. ಆದರೆ ಪೋಲೀಸರು ಹೇಳಿದರು, ಅವರೆಲ್ಲರೂ ಹಿಂದೂ ಜಾಗರಣ ವೇದಿಕೆ ಕಾರ್ಯಕರ್ತರು ಅಂತ ಪೊಲೀಸರು ಹೇಳಿದರು.

ಮಾಧ್ಯಮದವರು ಇಲ್ಲದೆ ಇರುತ್ತಿದ್ದರೆ ಗೂಂಡಾಗಳು ಹುಡುಗಿಯರನ್ನು ಅತ್ಯಾಚಾರ ಮಾಡುತ್ತಿದ್ದರು. ಘಟನೆಯ ನಂತರ ನಾವು ನಮ್ಮ ಹೇಳಿಕೆಯನ್ನು ಪೋಲೀಸರಿಗೆ ತಿಳಿಸಿದ್ದೆವು. ಒಂದು ಕಾಗದದಲ್ಲಿ ನಮ್ಮ ಸಹಿಯನ್ನು ತೆಗೆಸಿಕೊಂಡು, FIRನಲ್ಲಿ ನಾವು ಒಪ್ಪದೇ ಇದ್ದ ಕೆಲವೊಂದು ವಾಕ್ಯಗಳನ್ನು ನಮೂದಿಸಿದ್ದರು. ಬಂಧಿತರೆಲ್ಲರೂ ನಮ್ಮ ಮೇಲೆ ದಾಳಿ ಮಾಡಿದವರು. ದಾಳಿಯ ನಂತರ ಇಬ್ಬರು ಪೋಲೀಸರು ನನ್ನನ್ನು ಹಿಡಿದು ನನಗೆ ಥಳಿಸಿದರು. ಒಬ್ಬ ಪೋಲೀಸ್ ನಾನು ಹೆಸರು ಹೇಳಲಿಲ್ಲವೆಂದು ಕೆನ್ನೆಗೆ ಹೊಡೆದಿದ್ದ. ನಮ್ಮನ್ನು ರಾತ್ರಿ ೧.೩೦ ಗಂಟೆಯವರೆಗೆ ಪೋಲೀಸ್ ಠಾಣೆಯಲ್ಲಿ ಇರಿಸಿದ್ದರು. ದಾಳಿ ಮಾಡಿದವರನ್ನು ಆಗಲೇ ಬಿಟ್ಟಿದ್ದರು. ಟಿವಿಯಲ್ಲಿ ಅವರ ಮುಖ ಕಂಡ ಮೇಲೆ ಅವರ ಬಂಧನವಾಯಿತು.

ನಾನು ಮತ್ತು ಗುರುದತ್ತ್ ಇಬ್ಬರೂ ಹೋಂ ಸ್ಟೇ ದಾಳಿಯ ವಿರುದ್ಧ ನಡೆದ ರ್‍ಯಾಲಿ, ಪ್ರತಿಭಟನೆಗಳಲ್ಲಿ ಭಾಗವಹಿಸಿ, ಅಲ್ಲಿ ನಿಜವಾಗಿ ಏನು ನಡೆದಿದೆ ಎಂದು ತಿಳಿಸಿದೆವು.

**ಗುರುದತ್ ಕಾಮತ್** (ವಿಜಯ್ ಕುಮಾರ್‌ನ ಗೆಳೆಯ)

ನಾನು, ವಿಜಯ್‌ನ ಮತ್ತು ಇನ್ನೊಬ್ಬಳು ಗೆಳತಿಯ ಬರ್ತ್‌ಡೇ ಪಾರ್ಟಿಗೆ ಮಧ್ಯಾಹ್ನ ೨.೩೦ರ ಹೊತ್ತಿಗೆ ಮಾರ್ನಿಂಗ್ ಸ್ಟೇ ಗೆಸ್ಟ್ ಹೌಸ್‌ಗೆ ಹೋಗಿದ್ದೆ. ಅಲ್ಲಿಯ ಕೇರ್ ಟೇಕರ್ ಕೆಲಸವನ್ನು ಮುಗಿಸಿ ಹೋಗಿದ್ದರು. ನಾನು, ವಿಜಯ್ ಸಂಜೆ ೩.೩೦ರ ಹೊತ್ತಿಗೆ ಕೇಕ್ ಕಟ್ ಮಾಡಿದ ನಂತರ ಅಲ್ಲಿಂದ ಹೊರಟು ಹೋಗಿದ್ದೆವು. ನನ್ನ ಮಮ್ಮಿ (ತಾಯಿ) ಚಿಕನ್ ತಯಾರಿಸಿದ್ದರು. ನಾವು ಅದನ್ನು ತರಲು ಹೋಗಿದ್ದೆವು. ಐದರ ಹೊತ್ತಿಗೆ ಹೋಂಸ್ಟೇಗೆ ಮರಳಿದೆವು. ತಂದಿದ್ದ ಫುಡ್‌ಅನ್ನು ಒಳಗೆ ಇರಿಸಿ, ಮಾತಾಡುತ್ತಾ ಇದ್ದೆವು. ಸಂಜೆ ಸುಮಾರು ೬ ರ ಹೊತ್ತಿಗೆ, ಅಲ್ಲಿ ಕುಡಿಯುವ ನೀರು ಇಲ್ಲದಿದ್ದರಿಂದ ಬಿಸ್ಲೆರಿ ನೀರು ತರಲು ನಾನು ಪಡೀಲ್‌ಗೆ ಹೋಗಿದ್ದೆ. ನಾನು ಹಿಂತಿರುಗಿ ಬಂದಾಗ ಪೋಲೀಸ್ ಜೀಪ್ ಸಹ ನಿಂತಿತ್ತು. ನಾನು ಒಳಗೆ ಹೋಗಿ ಏನಾಗುತ್ತಿದೆಯೆಂದು ಕೇಳಿದಾಗ ನಾಲ್ಕೈದು ಜನ ನನ್ನನ್ನು ಸುತ್ತುವರೆದು ನನ್ನ ಚೈನನ್ನು ಎಳೆದು, ನನ್ನ ಮೇಲೆ ದೈಹಿಕ ಹಲ್ಲೆ ಮಾಡಿದರು. ನಾನು "ಅದು ನನ್ನ ಚೈನ್" ಎಂದು ಹೇಳಿದಾಗ "ನಿನಗ್ಯಾಕೆ ಆ ಚೈನ್" ಎಂದು ಕಿರುಚುತ್ತಿದ್ದರು. ಮತ್ತು ನನ್ನನ್ನೂ ಒಳಕ್ಕೆಳೆದುಕೊಂಡು ಹೋದರು. ಒಳಗೇನು ನಡೆಯುತ್ತಿದೆಯೆಂದು ನನಗೆ ತಿಳಿದಿರಲಿಲ್ಲ. "ಸರ್ ಇವನು ಈ ಪಾರ್ಟಿಯಲ್ಲಿ ಇದ್ದ" ಅಂತ ಹೇಳಿದರು. ಪೋಲೀಸರು ಸಹ ಇದ್ದರು. "ಹೌದು ನನ್ನ ಗೆಳೆಯನ ಪಾರ್ಟಿ" ಎಂದು ನಾನು ಒಳಗೆ ಹೋದಾಗ

ಎಲ್ಲರೂ "ಅವನು ಮುಸ್ಲಿಂ, ಅವನು ಮುಸ್ಲಿಂ" ಅಂತ ಕಿರುಚುತ್ತಿದ್ದರು. ಆಗ "ನಾನು ಗುರುದತ್ ಕಾಮತ್" ಅಂತ ಹೇಳಿದೆ. ಒಳಗೆ ಎಲ್ಲರೂ ಅಳುತ್ತಿದ್ದರು. ಇನ್ಸ್‌ಪೆಕ್ಟರ್ ಮತ್ತು ಕಮೀಷನರ್ ಸ್ಥಳಕ್ಕೆ ಬಂದರು. ಅವರೆಲ್ಲರೂ ನಮ್ಮ ಹೆಸರುಗಳನ್ನು ತೆಗೆದುಕೊಂಡರು. ಸುಮಾರು ಸಂಜೆ ೭.೩೦ರ ಹೊತ್ತಿಗೆ ನಮ್ಮನ್ನು ವ್ಯಾನಿನಲ್ಲಿ ಕುಳ್ಳಿರಿಸಿ, ಠಾಣೆಗೆ ಕರೆದುಕೊಂಡು ಹೋದರು. ನಮ್ಮನ್ನು ರೂಮಿನಿಂದ ಹೊರತರುವಾಗ ಮುಖವನ್ನು ಮುಚ್ಚಲು ಹೇಳಿದರು. "ನಾವೇನು ತಪ್ಪು ಮಾಡಿಲ್ಲವಾದ್ದರಿಂದ ನಾವು ಮುಖ ಮುಚ್ಚುವುದಿಲ್ಲ" ಎಂದು ಹೇಳಿದೆ. ನನ್ನನ್ನು ನಿಂದಿಸಿ ಬಲವಂತವಾಗಿ ಮುಖ ಮುಚ್ಚಿದ ನಂತರ ವ್ಯಾನಿಗೆ ಹತ್ತಿಸಿದರು. ನಾವು ರಾತ್ರಿ ೧.೩೦ರವರೆಗೆ ಠಾಣೆಯಲ್ಲಿದ್ದೆವು. ಅವರು ನಮ್ಮನ್ನು ವೆನ್ಲಾಕ್ ಆಸ್ಪತ್ರೆಗೆ ಕರೆತಂದು, ಗಾಯಗಳಿಗೆ ಚಿಕಿತ್ಸೆ ಮಾಡಿಸಿ ನಮ್ಮನ್ನು ಮನೆಗೆ ಕಳುಹಿಸಿದರು. ಪೋಲೀಸರು ಬಂದಾಗ ಹಲ್ಲೆಕೋರರು ನಮ್ಮ ಮೇಲೆ ದಾಳಿ ಮಾಡುತ್ತಿದ್ದರೂ ಪೋಲೀಸರು ಅವರನ್ನು ಹಿಡಿಯಲೇ ಇಲ್ಲ.

## ಜೈಸನ್ ಲೋಬೋ

ಸುಮಾರು ಸಂಜೆ ೬.೩೦ರ ಹೊತ್ತಿಗೆ ನಾವು ಮಾತಾಡುತ್ತಿದ್ದೆವು. ನನ್ನ ಗೆಳೆಯ ಹೇಳಿದ, "ಮೂವತ್ತರಿಂದ ನಲವತ್ತರಷ್ಟು ಜನ ಈ ಕಡೆ ಬರುತ್ತಿದ್ದಾರೆ. ಅವರೊಂದಿಗೆ ಕ್ಯಾಮೆರಾ ಸಹ ಇದೆ". ನಾವು ಅವರನ್ನು ನೋಡಲು ಹೋದಾಗ ಅವರು ನಮ್ಮನ್ನು ಬೆನ್ನಟ್ಟಲು ಪ್ರಾರಂಭಿಸಿದರು. ನಾವು ಓಡಿ ಒಂದು ರೂಮಿನಲ್ಲಿ ಅಡಗಿ ಕೂತೆವು. ನಮಗೆ ಹೊಡೆಯುವ ಶಬ್ದ ಕೇಳುತ್ತಿತ್ತು. ಅದರೊಂದಿಗೆ "ಹೊಡೆಯಿರಿ, ಅವರನ್ನು ಬಿಡಬೇಡಿ" ಎಂದು ಬೊಬ್ಬಿರಿಯುತ್ತಿದ್ದರು. ಅವರು ನಮ್ಮ ರೂಮಿನ ಬಾಗಿಲ ಹೊರಗಿನಿಂದ ಚಿಲಕ ಹಾಕಿದ್ದರು. ನಾವು ಪೋಲೀಸ್ ಕಂಟ್ರೋಲ್ ರೂಂಗೆ ಫೋನಾಯಿಸಿದಾಗ ಅದು ಬೆಂಗಳೂರಿಗೆ ಹೋಯಿತು. ಅದು ತುಂಬಾ ಸುದೀರ್ಘವಾದ ಕೆಲಸವಾದ್ದರಿಂದ ಕರೆಯನ್ನು ಕಟ್ ಮಾಡಿ ಗೆಳೆಯರಿಗೆ ಫೋನಾಯಿಸಿ ಪೋಲೀಸರಿಗೆ ಕರೆ ಮಾಡಲು ತಿಳಿಸಿದೆವು. "ನನಗೆ ಹೊಡೆಯಬೇಡಿ, ಇವತ್ತು ನನ್ನ ಹುಟ್ಟಿದ ಹಬ್ಬ" ಎಂದು ಹುಡುಗಿ ಹೇಳುತ್ತಿದ್ದದ್ದು ಕೇಳಿಸಿತು ಮತ್ತು ಅದರೊಟ್ಟಿಗೆ ಹೊಡೆಯುವ ಶಬ್ದವೂ ಕೇಳುತ್ತಿತ್ತು. ಅರ್ಧ ಗಂಟೆಯ ನಂತರ ಪೋಲೀಸರು ಬಂದು ನಮ್ಮ ರೂಮಿನ ಬಾಗಿಲನ್ನು ತೆರೆದರು ಮತ್ತು ನಮ್ಮನ್ನೆಲ್ಲಾ ಒಂದು ರೂಮಿನಲ್ಲಿ ಕೂಡಿ ಹಾಕಿದರು. ಅವರು ಯಾರಿಗೆಲ್ಲಾ ಹೊಡೆದಿದ್ದಾರೆಂದು ತಿಳಿಯಲಿಲ್ಲ. ನಾನು ರೂಮಿನಿಂದ ಹೊರಬಂದ ನಂತರ ದಾಳಿಕೋರರು ಪೋಲೀಸರೆದುರೇ "ನೀನು ಹಿಂದುವೊ ಮುಸ್ಲಿಮನೋ?" ಅಂತ ಕೇಳಿದರು ಆಗ "ನಾನು ಕ್ರಿಶ್ಚಿಯನ್" ಎಂದು ಹೇಳಿದೆ. ಅವರ ಕೈಯ್ಯಲ್ಲಿ ಹರಿತವಾದ ಬ್ಲೇಡ್ ಇತ್ತು. ನನ್ನ ಗೆಳೆಯ ಅವನ ಕಾಲನ್ನು ರಕ್ಷಣಾತ್ಮಕವಾಗಿ ಎತ್ತಿದಾಗ ಕಾಲಿಗೆ ತಾಗಿ ಗಾಯವಾಯಿತು. ಪೋಲೀಸರು ಠಾಣೆಯಲ್ಲಿ ರಾತ್ರಿ ೧೧ರವರೆಗೆ ಕಾಯಿಸಿದರು. ಮತ್ತೆ ನಮ್ಮಲ್ಲಿ ನಮ್ಮ ಹೆಸರು ಮತ್ತು ವಿಳಾಸವನ್ನು ವಿಚಾರಿಸಿದರು.

## ಆವ್ರೋನ್ (ಸಂತ್ರಸ್ತನ ಗೆಳೆಯ)

ಪಡೀಲ್‌ನ ಮಾರ್ನಿಂಗ್ ಮಿಸ್ಟ್ ಘಟನೆಯನ್ನು ನಾನು ಕಂಡ ಹಾಗೆ ಹೇಳಲು ಇಚ್ಚಿಸುತ್ತೇನೆ. ನನ್ನ ಗೆಳೆಯ ವಿಜಯ ತನ್ನ ಬರ್ತ್‌ಡೇ ಪಾರ್ಟಿಗೆ ನನ್ನನ್ನು ಆಹ್ವಾನಿಸಿದ್ದ. ನಾನು ನನ್ನ ಮನೆಯಿಂದ ಸ್ವಲ್ಪ ತಡವಾಗಿಯೇ ಹೊರಟಿದ್ದೆ ಮತ್ತು ನನಗೆ ಆ ಸ್ಥಳದ ಬಗ್ಗೆ ಮಾಹಿತಿಯೂ ಇರಲಿಲ್ಲ. ಕೊನೆಗೆ ಹೇಗೋ ನನಗೆ ಆ ಸ್ಥಳ ಸಿಕ್ಕಿತು. ನಾನು ಪಾರ್ಟಿಗೆ ಹೋಗುವಾಗ ಪೆಪ್ಸಿ ಮತ್ತು ಕೋಕ್ ತೆಗೆದುಕೊಂಡು ಹೋಗಿದ್ದೆ. ನಾನು ಆ ಸ್ಥಳಕ್ಕೆ ಮುಟ್ಟಿದಾಗ ಅಲ್ಲೊಂದು ಸ್ಕೋರ್ಪಿಯೋ ಮತ್ತು ಆಲ್ಟೋ ಕಾರ್ ಇತ್ತು. ಕೆಲವು ಜನ ಆ ಕಾರಿನಿಂದ ಇಳಿದಿದ್ದರು. ಆದರೆ ಅವರ್‍ಯಾರೂ ನನಗೆ ಗೊತ್ತಿದ್ದವರಲ್ಲ. ಅವರು ನನ್ನ ಗೆಳೆಯರ ಬಳಗದವರ ಹಾಗೆ ನನಗೆ ತೋರಲಿಲ್ಲ. ನಾನವರನ್ನು ನೋಡಿದಾಗ ಏನೋ ಅಪಾಯದ ಮುನ್ಸೂಚನೆಯಂತೆ ತೋರಿತ್ತು. ಅವರು ಮಾರ್ನಿಂಗ್ ಮಿಸ್ಟ್ ಹೋಂ ಸ್ಟೇಗೆ ನೇರವಾಗಿ ಪ್ರವೇಶಿಸಿದರು. ಆನಂತರ ನನ್ನ ಗೆಳೆಯನೊಬ್ಬ ಆ ಮನೆಯಿಂದ ಹೊರಗೆ ಓಡಿಕೊಂಡು ಬಂದಿದ್ದ. ಅವನೆಷ್ಟು ಭಯಭೀತನಾಗಿದ್ದನೆಂದರೆ ಹತ್ತಿರದಲ್ಲಿದ್ದ ಆವರಣದ ಗೋಡೆಗೆ ಡಿಕ್ಕಿ ಹೊಡೆದು ಆ ಗೋಡೆಯನ್ನು

ಹಾರಿ, ಓಮ್ನಿ ಕಾರಿಗೆ ಡಿಕ್ಕಿ ಹೊಡೆದು ಅಲ್ಲಿಂದ ಮರೆಯಾದ.

ಕೆಲವೇ ಕ್ಷಣಗಳಲ್ಲಿ(ಮೂರು ನಿಮಿಷಗಳಲ್ಲಿ) ಒಂದು ಪೋಲೀಸ್ ಜೀಪ್ ಬಂದು ಗೇಟಿನ ಹತ್ತಿರ ನಿಂತಿತು. ಅದರೊಳಗೆ ಐದರಿಂದ ಆರು ಜನ ಪೋಲೀಸರಿದ್ದರು. ಪೋಲೀಸ್ ಜೀಪ್‌ಗೆ ದಾರಿ ತೋರಿಸಿದ್ದು ಕಪ್ಪು ಬಣ್ಣದ ವೈ ಬಿ ಎಕ್ಸ್ (YBX) ಯಮಹಾ ಬೈಕ್. ಬೈಕ್ ಜೀಪಿನ ಮುಂಭಾಗದಲ್ಲಿತ್ತು. ಅವರು ಜೀಪನ್ನು ನಿಲ್ಲಿಸಿ, ಆವರಣ ಗೋಡೆಯೊಳಗೆ ಹೋದರು. ಬೈಕ್‌ನಲ್ಲಿದ್ದ ಯುವಕರು ಅವರೊಂದಿಗೆ (ಪೋಲೀಸ್) ತುಳುವಿನಲ್ಲಿ ಹೇಳಿದರು "ಅವರು ಒಳಗಿದ್ದಾರೆ!". ಮತ್ತೆ ಅವರು ಒಳಗೆ ಹೋದರು. ಪೋಲೀಸರು ಅಲ್ಲಿ ಒಂದು ಘಟನೆ ನಡೆಯುತ್ತಿದೆ ಅನ್ನುವುದನ್ನು ಮರೆತವರ ಹಾಗೆ ಮನೆಯ ಹೊರಗೆ ನಿಂತಿದ್ದರು. ನಂತರ ಸಾವಧಾನದಿಂದ ಮನೆಯ ಒಳಗೆ ಹೋದರು.

ನಾನು ಮನೆಯ ಹೊರಗಿದ್ದೆ. ನನ್ನ ಗೆಳೆಯರು ಒಳಗಿದ್ದರು. ನಾನು ಭಯಭೀತನಾಗಿದ್ದೆ ಮತ್ತು ದುರ್ಘಟನೆಯ ನಿರೀಕ್ಷೆಯಲ್ಲಿದ್ದೆ. ನಾನು ಪಾರ್ಟಿಗೆ ಬಂದವನು ಅಂತ ಆ ದೊಡ್ಡ ತಂಡಕ್ಕೆ ಗೊತ್ತಾಗಿದ್ದರೆ ಅವರು ನನ್ನ ಮೇಲೆ ಹಲ್ಲೆ ಮಾಡುತ್ತಿದ್ದರು. ನಾನು ಅಸಹಾಯಕನಾಗಿ ಹೊರಗೆ ನಿಂತಿದ್ದೆ. ಅರ್ಧ ಗಂಟೆ ಕಳೆದ ನಂತರ ಇನ್ನೊಂದು ಪೋಲೀಸರ ತಂಡ ತವೇರಾದಲ್ಲಿ ಬಂದರು. ಅವರು ಬಂದ ಕೂಡಲೇ (ದಾಳಿಗೀಡಾದವರಿಗೆ ಸಹಾಯ ಮಾಡಲೆಂದು) ಮನೆಯೊಳಗೆ ಹೋಗಲಿಲ್ಲ. ಅವರು ಹೊರಗಡೆ ನಿಂತೇ ಇದ್ದರು. ಮತ್ತೆ ಸಾವಕಾಶವಾಗಿ ಒಳಗೆ ಹೋದರು. ಹಿಂದೂ ಜಾಗರಣ ವೇದಿಕೆ ಕಾರ್ಯಕರ್ತರು ವಿಜಯದ ಘೋಷಣೆಯೊಂದಿಗೆ ಜೈಕಾರ ಹಾಕುತ್ತಾ ಹೊರಗೆ ಬಂದರು. ಅವರೊಟ್ಟಿಗೆ ಪೋಲೀಸರೂ ಇದ್ದರು. ಪೋಲೀಸರು ಸುಮ್ಮನಿದ್ದು, ಅವರನ್ನು ಬೆಂಬಲಿಸುವವರಂತೆ ಕಾಣುತ್ತಿತ್ತು. ಅವರ ಜೈಕಾರಗಳು, ಅವರ್‍ಯಾವುದೋ ಒಂದು ವಿಜಯ ಸಾಧಿಸಿದಂತಿತ್ತು. ಇವರ ಘರ್ಜನೆ, ಘೋಷಣೆಗಳ ಗದ್ದಲ ಕೇಳಿ ಅಕ್ಕಪಕ್ಕದವರು ಸೇರಲಾರಂಭಿಸಿದರು. ಕತ್ತಲಾಗಲು ಆರಂಭಿಸಿತು. ಆದರೂ ನನ್ನ ಗೆಳೆಯರು ಯಾರೂ ಹೊರಗೆ ಬರುವ ಹಾಗೆ ಕಾಣಲಿಲ್ಲ. ಯಾವಾಗ ಪೋಲೀಸ್ ಕಮಿಷನರ್ ಬಂದರೋ ಎಲ್ಲರೂ "ದಾರಿ ಬಿಡಿ, ದಾರಿಬಿಡಿ" ಎಂದು ಅವರನ್ನು ಒಳಗೆ ಕರಕೊಂಡು ಹೋದರು. ಆಗ ಅಲ್ಲಿದ್ದ ಹಿಂದೂ ಜಾಗರಣ ವೇದಿಕೆ ಕಾರ್ಯಕರ್ತರು ಗಡಿಬಿಡಿಯಲ್ಲಿ ಅಲ್ಲಿಂದಿಲ್ಲಿಗೆ, ಇಲ್ಲಿಂದಲ್ಲಿಗೆ ಓಡಲು ಪ್ರಾರಂಭಿಸಿದರು. ಆದರೂ ಅವರು ನನ್ನ ಗೆಳೆಯರನ್ನು ಹೊರಗೆ ಕರೆತರುವಂತೆ ಕಾಣಲಿಲ್ಲ.

ಪೋಲೀಸರು ಅವರ್‍ಯಾರನ್ನು ಬಂಧಿಸುವುದನ್ನು ನಾನು ನೋಡಿಲ್ಲ. ಮಾತ್ರವಲ್ಲ ಅಲ್ಲಿದ್ದವರ ಮೇಲೆ ಯಾವುದೇ ಕ್ರಮ ಕೈಗೊಂಡದ್ದನ್ನು ಸಹ ನೋಡಿಲ್ಲ. ಮತ್ತೆ ನಾನು ಬೈಕಿನಲ್ಲಿ ನನ್ನ ಮನೆಗೆ ಹೋದೆ. ಒಳಗಿದ್ದ ಗೆಳೆಯರಿಗೆ ಏನು ಸಹಾಯ ಮಾಡಲಿಕ್ಕಾಗಲಿಲ್ಲವೆಂದು ಬೇಸರವಾಯಿತು.

ಪೋಲೀಸರು ಅಲ್ಲಿದ್ದ ಉದ್ರೇಕಗೊಂಡ ಜನರನ್ನು ನಿಯಂತ್ರಿಸಲೂ ಇಲ್ಲ, ವೇದಿಕೆಯವರನ್ನು ತಡೆಯುತ್ತಲೂ ಇರಲಿಲ್ಲ. ಒಳಗೇನು ನಡೆಯುತ್ತಿದೆಯೆಂದು ನನಗೆ ತಿಳಿಯುತ್ತಿರಲಿಲ್ಲ. ನನಗೆ ಪೋಲೀಸರು ವೇದಿಕೆಯ ಜನರನ್ನೂ ಬೆಂಬಲಿಸಿದಂತೆ ಕಾಣುತಿತ್ತು. ಅದು ಒಂದು ದುಃಖದಾಯಕ ಮತ್ತು ಬೇಸರದ ವಿಷಯವಾಗಿತ್ತು.

**ಕುಮುದಾ ಕಾಮತ್**

ಗುರುದತ್ ನನ್ನ ಮಗ. ಅವತ್ತು ಬೆಳಗ್ಗೆ ನನ್ನ ಮಗ ನನ್ನಲ್ಲಿ ಹೇಳಿದ, "ಇವತ್ತು ವಿಜಯ್‌ನ ಹುಟ್ಟುಹಬ್ಬ. ಅವನು ಇವತ್ತು ಪಾರ್ಟಿ ಏರ್ಪಡಿಸಿದ್ದಾನೆ". ಅದಕ್ಕೆ ನಾನೂ ಒಪ್ಪಿದ್ದೆ. ನನಗೆ ನನ್ನ ಮಗನ ಬಗ್ಗೆ ಚೆನ್ನಾಗಿ ಗೊತ್ತು. ನಾನು ಅವನನ್ನು ಹೇಗೆ ಬೆಳೆಸಿದ್ದೇನೆಂದು ಸಹ ಗೊತ್ತು. ಅವನು MBA ಮುಗಿಸಿದ್ದಾನೆ. ಅವನು ಪಾರ್ಟಿಗೆ ಹೋಗುತ್ತೇನೆ ಎಂದಾಗ ನಾನು ಹೇಳಿದೆ, ನಾನೇ ಅಲ್ಲಿಗೆ ನಿನ್ನನ್ನು ಬಿಟ್ಟು ಬರುತ್ತೇನೆಂತ ಮತ್ತು ಸ್ವತಃ ನಾನೇ ಅವನನ್ನು ಪಾರ್ಟಿಗೆ ಬಿಟ್ಟು ಬಂದಿದ್ದೇನೆ. ಮತ್ತು ಅಲ್ಲಿಯ ಪರಿಸ್ಥಿತಿಯನ್ನು ನೋಡಿದ್ದೇನೆ. ಅಲ್ಲಿ ಕೆಲವು ಹುಡುಗಿಯರೂ ಇದ್ದರು. ಸಮಯ ಮಧ್ಯಾಹ್ನ ೨ ರಿಂದ ೨.೩೦ ಆಗಿರಬಹುದು. ನನಗೆ ಸ್ಪಷ್ಟವಾಗಿ ಆಗ ಎಷ್ಟು ಸಮಯವಾಗಿದೆಯೆಂದು ತಿಳಿಯದು. ಆ ಹುಡುಗಿಯರೆಲ್ಲ ಪ್ಯಾಂಟ್ ಮತ್ತು ಜಾಕೆಟ್ ತೊಟ್ಟಿದ್ದರು. ಟಿವಿಯಲ್ಲಿ ತೋರಿಸಿದ ಹಾಗೇನೂ ಅವರ ಡ್ರೆಸ್ ಇರಲಿಲ್ಲ. ಕೆನ್ನೆಗೆ ಹೊಡೆತ ತಿಂದ ಹುಡುಗಿಯ ಬಟ್ಟೆ ಸರಿಯಾಗಿರಲಿಲ್ಲವೇ?

ಟಿವಿಯಲ್ಲಿ ಬಟ್ಟೆ ತೊಟ್ಟ ಹುಡುಗಿ ಮೈಮೇಲೆ ಒಂದು overcoat ಇತ್ತು. ಅದಕ್ಕೆ ಒಂದು ಪಟ್ಟಿ ಸಹ ಇತ್ತು. ಅದನ್ನು ದಾಳಿಕೋರರು ಎಳೆದು ತುಂಡರಿಸಿರಬೇಕು.

ನನ್ನ ಮಗ ಹೇಳಿದ್ದು "ನಾನು ರಾತ್ರಿ ೭ರಿಂದ ೭.೩೦ ರ ಒಳಗೆ ಹಿಂದಿರುಗಿ ಬರುತ್ತೇನೆ. ಇನ್ನೂ ತಡವಾದರೆ ೮ ಗಂಟೆಯಾಗಬಹುದು". ಆಮೇಲೆ ನಮಗೆ ಈ ವಿಷಯ ತಿಳಿದದ್ದು. ನನ್ನ ಮಗ ಮಾದಕ ವ್ಯಸನಿಯಾಗಿರಲಿಲ್ಲ. ಸಿಗರೇಟ್, ಕುಡಿತದ ಚಟ ಇವು ಯಾವುದೂ ಇರಲಿಲ್ಲ. ನಾನು ಬೇಕಾದರೆ ಪ್ರಮಾಣ ಮಾಡಬಲ್ಲೆ. ಹಿಂದೂಜಾಗರಣ ವೇದಿಕೆಯವರು ಹುಡುಗಿಯರ ಮೇಲೆ ನಡೆಸಿದ ಅಸಭ್ಯ ವರ್ತನೆ ನನ್ನನ್ನು ಅತೀವ ದುಃಖಕ್ಕೀಡು ಮಾಡಿತು. ನನಗೆ ನನ್ನ ಮಗನ ಬಗ್ಗೆ ಚಿಂತೆ ಇಲ್ಲ. ಅವನು ಹುಡುಗ. ಆದರೆ ಅವರು ಹುಡುಗಿಯರೊಂದಿಗೆ ಆ ರೀತಿ ವರ್ತಿಸಿದ್ದು ಖೇದಕರ. ನನ್ನ ಮಗನ ಎಲ್ಲಾ ಗೆಳೆಯರೂ ಸಹ ತುಂಬಾ ಒಳ್ಳೆಯವರು. ಅವರೆಲ್ಲಾ ಸದ್ಗೃಹಸ್ಥ ಕುಟುಂಬದವರು. ಕೆಲವರು ವ್ಯಾಪಾರಸ್ಥರಾದರೆ ಮತ್ತೆ ಕೆಲವರು ವಿದ್ಯಾರ್ಥಿಗಳು. ಒಮ್ಮೊಮ್ಮೆ ಅವರು ನಮ್ಮ ಮನೆಗೆ ಬಂದು ಟೀ ಕುಡಿದು ಹೋಗುತ್ತಿದ್ದರು. ನಾನವರನ್ನು ಯಾವಾಗಲೋ ಒಮ್ಮೆ ಭೇಟಿಯಾಗಿದ್ದರೆ ಅವರ ಬಗ್ಗೆ ಗೊತ್ತಿರುತ್ತಿರಲಿಲ್ಲ. ಆದರೆ ಅವರೆಲ್ಲರೂ ಒಳ್ಳೆಯವರು.

ನಾನು ಕಮಿಷನರ್ ಕಛೇರಿಗೆ ಹೋದಾಗ ಅವರು ಹೇಳಿದರು "ಮಾಧ್ಯಮದವರ ಮುಂದೆ ಹೋಗುವುದು ನಿಮ್ಮ ವೈಯಕ್ತಿಕ ವಿಚಾರ. ಆದರೆ ನಾವು ಮಾತ್ರ ತನಿಖೆಯನ್ನು ಮುಂದುವರೆಸುತ್ತೇವೆ. ನಾವು ನಿಮಗೆ ನ್ಯಾಯ ಒದಗಿಸುತ್ತೇವೆ. ನಾವು ದಾಳಿಕೋರರನ್ನು ಹಿಡಿದೇ ತೀರುತ್ತೇವೆ. ಅವರು ದೊಡ್ಡ ತಪ್ಪು ಮಾಡಿದ್ದಾರೆ".

ಎಲ್ಲ ಮಕ್ಕಳ ಹೆತ್ತವರು ಅಲ್ಲಿದ್ದರು. ಅವರೆಲ್ಲರೂ "ನಾವೂ ಇದನ್ನು ಗಮನಿಸುತ್ತಿದ್ದೇವೆ. ಹೆಣ್ಣುಮಕ್ಕಳು ಏನೂ ತಪ್ಪು ಸಹ ಮಾಡಲಿಲ್ಲ" ಎಂದರು. ನಾನಾಗ ಹೇಳಿದೆ "ನಾನು ನಿಮಗಾಗಿ ಟಿವಿಯ ಮುಂದೆ ಹಾಜರಾದೆ. ನನ್ನ ಮಗ, ಟಿವಿ ಮುಂದೆ ಹೋಗಿರುವುದರಿಂದ ನಾವು ತುಂಬಾ ತೊಂದರೆಗೊಳಪಟ್ಟಿದ್ದೇವೆ. ನನಗೇನು ಹೆದರಿಕೆಯಿಲ್ಲ. ಎಲ್ಲರೂ ಒಂದಲ್ಲ ಒಂದು ದಿನ ಸಾಯುತ್ತೇವೆ. ನಾವು ಏನಾದರೂ ಒಳ್ಳೆಯ ಕೆಲಸಗಳನ್ನು ಮಾಡಿ ಸಾಯುವ. ನಾನು ಯಾವುದೇ ಆರೋಪಕ್ಕೆ ಹೆದರುವುದಿಲ್ಲ. ನಾನೇನು ತಪ್ಪು ಮಾಡಿಲ್ಲ. ಬೇರೆಯವರ ಅನಿಸಿಕೆಯು ಅದೇ ತರವಿತ್ತು. ಆಗ ಅವರು ಹೇಳಿದರು "ಹುಡುಗಿಯರನ್ನು ಮುಂದೆ ತರುವುದರಿಂದ ದೊಡ್ಡ ಸಮಸ್ಯೆಯಾಗಬಹುದು. ಅಗತ್ಯ ಬಿದ್ದರೆ ನಾವು ಬರುತ್ತೇವೆ. ನಮ್ಮನ್ನೂ ಮಾಧ್ಯಮದವರು ಕರೆದು ಚರ್ಚಿಸಲಿ. ನಮ್ಮ ಮಕ್ಕಳನ್ನು ಕರೆ ತರುವುದಿಲ್ಲ. ಆದರೆ ನಾವು ಖಂಡಿತಾ ಬರುತ್ತೇವೆ".

### ಸಂತ್ರಸ್ತನ ತಾಯಿ (ವಿಜಯ ಕುಮಾರ್‌ನ ತಾಯಿ)

ನಾನು ಅಂಗನವಾಡಿ ಶಿಕ್ಷಕಿ. ವಿಜಯ ನನ್ನ ಎರಡನೇ ಮಗ. ಅವನು ಪಿಯುಸಿ ಮುಗಿಸಿ ಈಗ ಡಿಜೆ ಆಗಿ ಕೆಲಸ ಮಾಡುತ್ತಿದ್ದಾನೆ. ಅವತ್ತು ಬೆಳಗ್ಗೆ ಮಾರಿಗುಡಿ ದೇವಸ್ಥಾನಕ್ಕೆ ಹೋಗಿ ಬಂದವನು ನನ್ನಲ್ಲಿ ಹೇಳಿದ "ಇವತ್ತು ಬರ್ತ್‌ಡೇ ಪಾರ್ಟಿ ನೀಡುತ್ತೇನೆ". ಎಲ್ಲಿ ಅಂತ ಕೇಳಿದಾಗ "ನಾವೊಂದು ಮನೆಯ ರೂಮನ್ನು ಬುಕ್ ಮಾಡಿದ್ದೇವೆ" ಎಂದು ಹೇಳಿದ. ನಾನು ಅದಕ್ಕೆ ಒಪ್ಪಿದೆ. ಅಂಗನವಾಡಿಯವರಿಗೆ ತುಂಬಾ ಕೆಲಸವಿದೆಯೆಂದು ನಿಮಗೂ ಗೊತ್ತಿರಬಹುದು. ಸಂಜೆ ನಾನು ಅಡುಗೆ ಮಾಡುತ್ತಿದ್ದಾಗ ಪರಿಚಯದವರೊಬ್ಬರು ಹೇಳಿದರು "ನೋಡಿ, ನೋಡಿ, ನಿಮ್ಮ ಮಗನಿಗೆ ಯಾರೋ ಹೊಡೆಯುತ್ತಿದ್ದಾರೆ ನೀವು ಹೋಗಿ ಅವನನ್ನು ಬಿಡಿಸಿಕೊಂಡು ಬರುವುದು ಒಳ್ಳೆಯದು" ನಾನು ಹೋಗಿ ಟಿವಿ ಆನ್ ಮಾಡಿದೆ. ನಾನು ನನ್ನ ಮಗನ ಮೇಲೆ ಹಲ್ಲೆ ನಡೆಯುತ್ತಿದ್ದದನ್ನು ನೋಡಿದೆ. ಬಂದ ವ್ಯಕ್ತಿ ಹೇಳಿದ "ಆಂಟಿ, ನೀವು ಪೋಲೀಸ್ ಠಾಣೆಗೆ ಹೋಗಿ ಮಗನನ್ನು ಬಿಡಿಸಿಕೊಂಡು ಬರುವುದು ಒಳ್ಳೆಯದು". ಯಾರಾದರೂ ತಪ್ಪು ಮಾಡಿದರೆ ತಾನೆ ಶಿಕ್ಷೆಗೊಳಪಡುವುದು. ಅವನು ಅಂಥದ್ದೇನು ಮಾಡಲಿಲ್ಲ. ಅವನು ಹೇಳುತ್ತಿದ್ದಾನೆ ತನ್ನ ಬರ್ತ್‌ಡೇ ಅಂತ, ಆದರೂ ಅವರು ಹೊಡೆಯುತ್ತಿದ್ದಾರೆ. ನನಗೇನು ಮಾಡಬೇಕೆಂದು ತೋಚಲಿಲ್ಲ. ಅವನಿಗೆ ಕರೆ ಮಾಡಲು ಪ್ರಯತ್ನಿಸಿದಾಗ ಸ್ವಿಚ್ಡ್ ಆಫ್ ಅಂತ ಬಂತು. ಬೇರೆಯವರಿಗೆ ಕರೆ ಮಾಡಿದರೆ ಅವರ ಮೊಬೈಲ್ ಕರೆ ಸಿಗುತ್ತಿರಲಿಲ್ಲ. ಬಹುಶಃ ಹೊಡೆತದ ರಭಸಕ್ಕೆ ಅವನ ಮೊಬೈಲ್ ಎಲ್ಲಾದರು ದೂರ ಬಿದ್ದಿರಬಹುದು. ನಾನೇನು ಮಾಡಬೇಕೆಂದು ತೋಚದೆ ಇದ್ದಾಗ ನನ್ನ ಇನ್ನೊಬ್ಬ ಮಗನೂ

ಬಂದ. ಆಗ ನನ್ನ ಮಗ ಕರೆ ಮಾಡಿ ಹೇಳಿದ "ಮಮ್ಮಿ! ತಲೆ ಬಿಸಿ ಮಾಡಬೇಡಿ, ಅವರು ನಮ್ಮನ್ನು ಬಿಟ್ಟು ಹೋಗಿದ್ದಾರೆ. ನಾನು ಮುಸ್ಲಿಮನೆಂದು ತಿಳಿದು ನನ್ನನ್ನು ಹೊಡೆದಿದ್ದಾರೆ".

ನಾನು ಮತ್ತು ನನ್ನ ಚಿಕ್ಕ ಮಗ ಮನೆಯಲ್ಲಿದ್ದೆವು. ನನ್ನ ಗಂಡ ಮನೆಗೆ ಬಂದಾಗ ತುಂಬಾ ತಡವಾಗಿತ್ತು. ನಾವು ಸ್ಟೇಷನ್‌ಗೆ ಹೋಗಲು ಸಾಧ್ಯವಾಗಲಿಲ್ಲ. ಕೊನೆಗೆ ಅವನೇ ಮನೆಗೆ ಬಂದ. ನಾನು ತುಂಬಾ ಹೆದರುತ್ತೇನೆಂದು ತಿಳಿದು ಅವನು ನನಗೆ ಯಾವ ವಿಷಯವನ್ನು ಹೇಳಲಿಲ್ಲ. ಆದರೆ ಅವರು ಅವನಿಗೆ ಚೆನ್ನಾಗಿ ಹೊಡೆದಿದ್ದರು.

## ಇನ್ನೊಬ್ಬ ಸಂತ್ರಸ್ತೆಯ ಹೆತ್ತವರು

ಕಳೆದ ವರ್ಷ ಸಹ ಅವಳು ಬೇರೆ ಕಡೆ ಹೋಗಿ ತನ್ನ ಬರ್ತ್‌ಡೇಯನ್ನು ಆಚರಿಸಿದ್ದಳು. ಈ ವರ್ಷವೂ ಅವಳು ಹೊರಗೆ ತನ್ನ ಬರ್ತ್‌ಡೇಯನ್ನು ಆಚರಿಸುತ್ತೇನೆಂದು ಹೇಳಿದಳು. ನನಗೆ ಎಲ್ಲಿ ಅಂತ ಗೊತ್ತಿರಲಿಲ್ಲ. ನಾನು ಅವಳಿಗೆ ಧೈರ್ಯದಿಂದ ಜೀವಿಸಲು ಹೇಳಿಕೊಟ್ಟಿದ್ದೇನೆ. ಅವಳು ತುಂಬಾ ಧೈರ್ಯವಂತಳಾಗಿದ್ದಾಳೆ.

ಅವತ್ತಿನ ದಿವಸ ನಮ್ಮ ಫ್ಯಾಮಿಲಿ ಫ್ರೆಂಡ್ ಒಬ್ಬರು ಕರೆ ಮಾಡಿ ಈ ವಿಷಯ ಹೇಳಿದರು. ಕೂಡಲೇ ನಾನು ಪೋಲಿಸ್ ಸ್ಟೇಷನ್‌ಗೆ ಹೋದೆ. ನನ್ನ ಜಾಗದಲ್ಲಿ ಬೇರೆ ಯಾರಾದರೂ ಇದ್ದಿದ್ದರೆ, ಅವರು ನೇಣು ಹಾಕಿಕೊಳ್ಳುತ್ತಿದ್ದರು. ಅವಳು ಬಾಲ್ಕನಿಯಿಂದ ಹಾರಿದ್ದಳೆಂದು ಹೇಳಿದಳು. ಅಲ್ಲೊಂದು ಆವರಣ ಗೋಡೆ ಇತ್ತು. ಅವಳು ಅಲ್ಲಿಂದಲೂ ಹಾರಿದ್ದಳು. ಅವಳು ಎರಡರಿಂದ ಮೂರು ಗೋಡೆಗಳನ್ನು ಹಾರಿರಬೇಕು. ಮತ್ತೆ ಓಡಿದ್ದಾಳೆ. ನಂತರ ಅವರು ಅವಳನ್ನು ಒಳಗೆ ಎಳೆದುಕೊಂಡು ಬಂದಿದ್ದರು. ಅವಳ ಕಾಲಿಗೆ ಗಿಡಗಂಟಿಗಳಿಂದ ತರಚು ಗಾಯವಾಗಿತ್ತು. ಅವಳ ದೇಹದ ನೂರಾರು ಸ್ಥಳಗಳಲ್ಲಿ ಗಾಯವಾಗಿತ್ತು. ನಾನು ಅದನ್ನು ಮರೆಯಲು ಪ್ರಯತ್ನಿಸುತ್ತಿದ್ದೇನೆ. ಇದೆಲ್ಲವೂ ಅವರು ಬಿಜೆಪಿಯನ್ನು ರಕ್ಷಿಸಲು ಮಾಡಿದ್ದು.

"ನಿಮ್ಮ ಮನೆಗೆ ಯಾರಾದರೂ ಬಂದರೆ ನಮಗೆ ತಿಳಿಸಿ" ಅಂತ ಕಮಿಷನರ್ ಹೇಳಿದ್ದಾರೆ. ಎಲ್ಲಾ ಹುಡುಗಿಯರು ಸಹ ನನಗೆ ಚೆನ್ನಾಗಿ ಗೊತ್ತು. ಅವರೆಲ್ಲರೂ ಮುಗ್ಧರು. ಮಗಳು ನನ್ನಲ್ಲಿ ಯಾವಾಗಲೂ ಸತ್ಯವನ್ನೇ ಹೇಳುತ್ತಾಳೆ. ಈಗ ಅವಳು ಕಾಲೇಜಿಗೆ ಹೋಗುತ್ತಿದ್ದಾಳೆ. ಅವಳಿಗೆ ಸ್ವಲ್ಪ ಬದಲಾವಣೆ ಬೇಕಾಗಿದೆ. ಅವಳನ್ನು ನಾನು ಮುಕ್ತವಾಗಿ ಬೆಳೆಸಿದ್ದೇನೆ. ಬರ್ತ್‌ಡೇ ಪಾರ್ಟಿಯಲ್ಲಿ ಹುಡುಗಿಯರಿಗೆ ಹುಡುಗರೇನೂ ಮಾಡಿರಲಿಲ್ಲ. ಆದರೆ ಹಿಂದೂ ಜಾಗರಣ ವೇದಿಕೆ ಕಾರ್ಯಕರ್ತರೇ ಎಲ್ಲವೂ ಮಾಡಿದ್ದು. ನಾವು ಈಗ ಟಿವಿ ನೋಡುವುದನ್ನೇ ಬಿಟ್ಟಿದ್ದೇವೆ. ಟಿವಿ ಆನ್ ಮಾಡಿದ ಕೂಡಲೇ ಅವಳು ಆಘಾತದಿಂದ ತಲೆ ತಿರುಗಿ ಬೀಳುತ್ತಾಳೆ. ಫೋನ್ ರಿಂಗಣಿಸಿದಾಗಲೂ ಹೆದರುತ್ತಾಳೆ. ಅದರಿಂದಾಗಿ ನಾವು ಟೆಲಿಫೋನ್ ಡಿಸ್‌ಕನೆಕ್ಟ್ ಮಾಡಿದ್ದೇವೆ. ಈಗಲೂ ಅವಳ ದೇಹದ ಉಷ್ಣಾಂಶ, ಜ್ವರ ಬಂದವರ ಹಾಗೆ ಇರುತ್ತದೆ.

ಹುಡುಗಿಯರ ಬರ್ತ್‌ಡೇ ಪಾರ್ಟಿ ಮತ್ತು ಹುಡುಗರ ಪಾರ್ಟಿ ಬೇರೆ ಬೇರೆಯೇ ಆಗಿತ್ತು. ನನ್ನ ಮಗಳಿಗೆ ೬೦ ರಿಂದ ೭೦ ಪ್ರಶಸ್ತಿ ಪತ್ರಗಳು ಸಿಕ್ಕಿವೆ. ಅಂತಹ ಪ್ರತಿಭಾವಂತೆ ಹುಡುಗಿಗೆ ೩–೪ನೇ ಕ್ಲಾಸ್ ಕಲಿತ ಹುಡುಗರು ಹೊಡೆಯುವುದೆಂದರೆ? ಅವರಿಗೆ ಈ ಅಧಿಕಾರ ಕೊಟ್ಟವರ್ಯಾರು? ಈಗಿನ ಕಾಲದಲ್ಲಿ ಹೆತ್ತವರೇ ತಮ್ಮ ಮಕ್ಕಳಿಗೆ ಹೊಡೆಯುವುದಿಲ್ಲ. ನನಗೆ ಈ ಧರ್ಮವನ್ನು ಬಿಟ್ಟು ಬಿಡುವಷ್ಟು ಬೇಸರವಾಗಿದೆ. ಇಂಥ ಘಟನೆಗಳು ಮುಂದೆ ನಡೆಯಬಾರದು. ಅವಳ ಜೀವನ ಅಪಾಯಕಾರಿಯಾಗಿರುವುದಕ್ಕೆ ಯಾರು ಹೊಣೆ?

## ಇನ್ನೊಬ್ಬ ಸಂತ್ರಸ್ತೆಯ ಹೆತ್ತವರು

ನಾವು ಅವಳನ್ನು ಮುಕ್ತವಾಗಿ ಬೆಳೆಸಿದ್ದೇವೆ. ಅವಳು ತನ್ನ ಗೆಳತಿಯ ಬರ್ತ್‌ಡೇ ಪಾರ್ಟಿಗೆ ಹೋಗಿದ್ದಳು. "ಅವಳಿಗೆ ಗಿಫ್ಟ್ ಕೊಡು" ಅಂತ ನಾನು ಹೇಳಿದ್ದೆ. ಅವಳು ಕಾಲೇಜಿನಿಂದ ಫೋನ್ ಮಾಡಿ ಹೇಳಿದಳು. "ನನಗೆ ಹುಷಾರಿಲ್ಲ. ನಾನು ಪಾರ್ಟಿಗೆ ಹೋಗುವುದಿಲ್ಲ". ಅದಕ್ಕೆ ನಾನು "ಬರ್ತ್‌ಡೇ ಪಾರ್ಟಿ ಕಾಲೇಜಿಗೆ ಹತ್ತಿರವಿರುವುದರಿಂದ

ಅಲ್ಲಿಗೆ ಹೋಗಿಯೇ ಮನೆಗೆ ಬಾ" ಹೇಳಿದೆ. ಅಲ್ಲದಿದ್ದರೆ ಅವಳು ಸೋಮವಾರ ಗೆಳತಿಗೆ ಗಿಫ್ಟ್ ಕೊಡಲು ಹೋಗಬೇಕಾಗಿತ್ತು. ಅವಳೂ ಅದಕ್ಕೆ ಒಪ್ಪಿದಳು. ಸಂಜೆ ೬.೩೦ರಿಂದ ೭ ಗಂಟೆಯ ಒಳಗೆ ಮುಗಿಯಬಹುದೆಂದು ಅವಳು ಹೇಳಿದ್ದಳು. ಅದಕ್ಕೆ ನಾನು ಓಕೆ ಅಂತ ಹೇಳಿದ್ದೆ. ನಾವು ಅವಳ ಕರೆಗಾಗಿ ಕಾಯುತ್ತಿದ್ದೆವು. ಅವಳ ತಂದೆ ಕ್ರಿಕೆಟ್ ನೋಡುತ್ತಾ ಕಾರಿನ ಕೀಯನ್ನು ಕೈಯಲ್ಲಿ ಹಿಡಿದು ಅವಳಿಗಾಗಿ ಕಾಯುತ್ತಿದ್ದರು. ಅನಂತರ ಅವಳ ಗೆಳತಿಯ ಮನೆಯವರ ಕರೆ ಬಂತು. "ನಿಮ್ಮ ಮಗಳು ಸಮಸ್ಯೆಯಲ್ಲಿದ್ದಾಳೆ". ಅವರು ಹೆದರಿಕೊಂಡು ಕೇಳಿದರು "ನಿಮಗೇನಾದರೂ ತಿಳಿದಿದೆಯಾ?" ಅಂತ. ಮತ್ತೆ ಯಾರೋ ಕರೆ ಮಾಡಿ ಟಿ.ವಿ ನೋಡಲಿಕ್ಕೆ ಹೇಳಿದರು. ನಾವು ಟಿವಿ ಆನ್ ಮಾಡಿದಾಗ ಆಘಾತಗೊಂಡೆವು. ನಮ್ಮ ಮಗಳು ನಮಗೆ ತಿಳಿಸಿಯೇ ಹೋಗಿದ್ದಳು. ಅವಳು ನಮಗೆ ಸಂಜೆ ೭ ಗಂಟೆಗೆ ಹಿಂತಿರುಗುತ್ತೇನೆಂದು ಹೇಳಿದ್ದಳು. "ನಾನೇನು ತಪ್ಪು ಮಾಡಿಲ್ಲವಾದ್ದರಿಂದ ಮತ್ಯಾಕೆ ಅಲ್ಲಿಂದ ಓಡಬೇಕು?" ಎಂದು ಹೇಳಿದಳು. "ಅವರು ಹೊರ ಓಡುತ್ತಿದ್ದವರನ್ನು ಎಳೆದುಕೊಂಡು ಬರುತ್ತಿದ್ದರು. ಅದಕ್ಕಾಗಿ ನಾನು ತಪ್ಪಿಸಿಕೊಳ್ಳಲು ಪ್ರಯತ್ನಿಸಲಿಲ್ಲ". ಅವರು ಎಲ್ಲರನ್ನು ಒಳಗೆ ಕರೆದುಕೊಂಡು ಬಂದರು. ಅವಳು ಏನಾಗುತ್ತಿದೆಯೆಂದು ಕೇಳಿದಾಗ ಅವರು ಅವಳ ಕೆನ್ನೆಗೆ ಹೊಡೆದರು. ಅವರು ಕೆಲವರ ಜಾಕೆಟನ್ನು ಹರಿದರು ಮತ್ತು ಕೆಲವು ಅನಪೇಕ್ಷಿತ ಕೃತ್ಯಗಳನ್ನು ಮಾಡಿದರು. ಹುಟ್ಟುಹಬ್ಬ ಆಚರಿಸುತ್ತಿದ್ದ ಹುಡುಗಿಯು ಶಾರದಾ ಕಾಲೇಜಿನಲ್ಲಿರುವಾಗ ನನ್ನ ಮಗಳ ಸಹಪಾಠಿಯಾಗಿದ್ದಳು. ಅದಕ್ಕಾಗಿ ನಾನು ಅವಳಿಗೆ ಆಸಕ್ತಿ ಇಲ್ಲದಿದ್ದರೂ ಅವಳನ್ನು ಹೋಗುವಂತೆ ಒತ್ತಾಯಪಡಿಸಿದ್ದು.

ಹುಟ್ಟುಹಬ್ಬ ಆಚರಿಸುತ್ತಿದ್ದ ಹುಡುಗ ಮತ್ತು ಹುಡುಗಿಯರು ಸ್ನೇಹಿತರು. ನನ್ನ ಮಗಳು ಮನೆಗೆ ವಾಪಾಸ್ ಬಂದಾಗ ಹೇಳಿದ್ದು "ನಾನೇನು ತಪ್ಪು ಮಾಡಿಲ್ಲ. ನನಗೆ ನನ್ನ ತಂದೆಯ ಮುಖವನ್ನು ನೋಡಲು ಕಷ್ಟವಾಗುತ್ತದೆ. ನಿಮಗೆ ನನ್ನ ಸಹೋದರ ಇದ್ದಾನೆ. ಆದ್ದರಿಂದ ನನಗೆ ಒಂದು ತೊಟ್ಟು ವಿಷ ಕೊಟ್ಟು ಬಿಡಿ".

ಅವಳಿಗೆ ಹೊಡೆದ ರಭಸದಿಂದಾಗಿ ಅವಳ ಕಿವಿ ಇನ್ನೂ ನೋಯುತ್ತಿದೆ. ಅದು ಸಂಪೂರ್ಣವಾಗಿ ಗುಣಮುಖವಾಗಬೇಕಾದರೆ ನಾಲ್ಕು ತಿಂಗಳು ಬೇಕಾಗಬಹುದೆಂದು ವೈದ್ಯರು ಹೇಳಿದ್ದಾರೆ. ವೈದ್ಯರ ಪ್ರಮಾಣ ಪತ್ರ ತಿಳಿಸುತ್ತದೆ "ಎಡಕಿವಿಯು ಸಣ್ಣ (ಲಘು ಮತ್ತು ಲಘುತರ) ಪ್ರಮಾಣದಲ್ಲಿ ಶ್ರವಣಶಕ್ತಿಯನ್ನು ಕಳಕೊಂಡಿದೆ".

ಅವಳು ಕಾಲೇಜಿಗೆ ಹೋಗಲು ಪ್ರಾರಂಭಿಸಿದ್ದಾಳೆ. ಇಡೀ ಕಾಲೇಜು ಅವಳನ್ನು ಬೆಂಬಲಿಸಿದೆ. ಅವಳು ಕಾಲೇಜಿನಲ್ಲಿ ನೆಮ್ಮದಿಯಿಂದಿದ್ದಾಳೆ. ಅವರೆಲ್ಲರೂ ಅವಳ ಪರವಾಗಿದ್ದಾರೆ. ಅವಳ ಪ್ರಾಂಶುಪಾಲರು ನಮ್ಮ ಮನೆಗೂ ಭೇಟಿ ನೀಡಿದ್ದಾರೆ.

ದಾಳಿ ಮಾಡಿದವರೆಲ್ಲರೂ ಜಾಮೀನಿನಿಂದ ಹೊರ ಬಂದಿರಬಹುದು. ಎಲ್ಲವೂ ಜಾಮೀನು ಸಿಗುವಂತಹುದು. ನೀವೂ ವಿಚಾರಣೆ ಬೇಗ ನಡೆಯುವಂತೆ ಮಾಡಿ. ಮಕ್ಕಳೂ ಎಲ್ಲ ರೀತಿಯ ಸ್ಥಳಗಳಿಗೆ ಭೇಟಿ ಕೊಡಬಹುದು. ನಾವು ನಮ್ಮ ಮಕ್ಕಳಿಗೆ ಹೊಡೆಯುವುದಿಲ್ಲ. ಇವರ್ಯಾರು ನಮ್ಮ ಮಕ್ಕಳಿಗೆ ಹೊಡೆಯಲು? ಬೇರೆಯವರ ಬಟ್ಟೆ ಕಳಚುವುದು ಇವರ ಸಂಸ್ಕೃತಿಯೇ?

## ಮಾಧ್ಯಮದವರ ಸಾಕ್ಷ್ಯ

ಈ ಘಟನೆಯಲ್ಲಿ ಮಾಧ್ಯಮದವರ ಪಾತ್ರ ಬಹುಮುಖ್ಯವಾದುದು. ಮಾಧ್ಯಮದವರು ಈ ದಾಳಿ ನಡೆಯುತ್ತಿದ್ದಾಗ ಸ್ಥಳದಲ್ಲೇ ಇದ್ದರು ಮತ್ತು ಘಟನೆಯು ಸಂಪೂರ್ಣವಾಗಿ ಚಿತ್ರೀಕರಿಸಲ್ಪಟ್ಟಿದೆ.

ಈ ಘಟನೆ ಸಮಯದಲ್ಲಿ ಕನಿಷ್ಠ ಮೂರು ಮಾಧ್ಯಮ ಮಂದಿ ಇದ್ದರು. ಇಬ್ಬರು ಸುದ್ದಿ ಮೂಲದಿಂದ ಅಲ್ಲಿಗೆ ಹೋಗಿದ್ದಾರೆ. ಒಬ್ಬನಿಗೆ ನೇರವಾಗಿ ದಾಳಿಯ ಸಂಘಟಕನಾದ ಸುಭಾಷ್ ಪಡೀಲ್‌ನ ಕರೆ ಬಂದಿದ್ದರಿಂದ ಹೋಗಿದ್ದ. ವರದಿಯ ಮುಂದಿನ ಭಾಗದಲ್ಲಿ ಮಾಧ್ಯಮದವರು ತಾವು ಚಿತ್ರೀಕರಿಸಿದ ಘಟನೆಯ ಬಗ್ಗೆ ಅನಿಸಿಕೆ ವ್ಯಕ್ತಪಡಿಸಿದ್ದಾರೆ.

**ನವೀನ್ ಸೂರಿಂಜೆ, ಪತ್ರಕರ್ತರು ಕಸ್ತೂರಿ ನ್ಯೂಸ್ ೨೪ (ಕನ್ನಡ ನ್ಯೂಸ್ ಚಾನೆಲ್)**

ಜುಲೈ ೨೮, ೨೦೧೨ ರ ಸಂಜೆ ೬.೩೦ ರ ಹೊತ್ತಿಗೆ ನನ್ನ ಸುದ್ದಿಮೂಲದ ಹುಡುಗ ನನಗೆ ಕರೆ ಮಾಡಿದ್ದ. ಅವನು ಪಡೀಲಿನ ನಿವಾಸಿಯಾಗಿದ್ದ. ಅವನು ಹೇಳಿದ್ದು "ನವೀನಣ್ಣ ಪಡೀಲಿನ ಟಿಂಬರ್‌ಯಾರ್ಡ್ ಸಮೀಪ ಸುಮಾರು ಮೂವತ್ತರಷ್ಟು ಜನ ಗುಂಪು ಸೇರಿದ್ದಾರೆ. ಅವರು ತಮ್ಮ ಜನರೊಂದಿಗೆ ಬೈಕ್ ರೆಡಿಮಾಡಿ ಇಡಲು ಹೇಳುತ್ತಿದ್ದಾರೆ. ಅವರು ಬಹುಶಃ ಪಡೀಲಿನ ಗುಡ್ಡೆಯಲ್ಲಿರುವ ಗೆಸ್ಟ್ ಹೌಸ್‌ಗೆ ದಾಳಿ ಮಾಡುವವರ ಹಾಗೆ ಇದ್ದಾರೆ. ಮುಸ್ಲಿಂ ಹುಡುಗ ಮತ್ತು ಹಿಂದು ಹುಡುಗಿ ಎಂದು ಹೇಳುತ್ತಿರುವುದನ್ನು ನಾನು ಕೇಳಿದೆ". ನಾನು ಅವನಲ್ಲಿ ಅವರು ಯಾವ ಸಂಘಟನೆಗೆ ಸೇರಿದವರೆಂದು ವಿಚಾರಿಸಲು ತಿಳಿಸಿದೆ. ಅವನಿಗೆ ಅವರು ಯಾವ ಸಂಘಟನೆಯವರೆಂದು ಗೊತ್ತಿರಲಿಲ್ಲ. ಯಾವುದೋ ಹಿಂದೂ ಸಂಘಟನೆಯ ಗುಂಪಿನವರೆಂದು ಮಾತ್ರ ಗೊತ್ತು. ಕೂಡಲೇ ನನ್ನ ತಲೆಗೆ ಬಂದ ವಿಚಾರವೆಂದರೆ "ನಾನು ಈಗಲೇ ಇದನ್ನು ಪೋಲೀಸರಿಗೆ ತಿಳಿಸುವುದೇ ಬೇಡವೇ?" ನನಗೆ ಈ ದಾಳಿ ಯಾವ ಸಂಘಟನೆಯವರು ಮಾಡುತ್ತಿದ್ದಾರೆಂಬ ಸಂಪೂರ್ಣ ಮಾಹಿತಿ ಇರಲಿಲ್ಲ. ಯಾರ ಮೇಲೆ ದಾಳಿ ಮಾಡುತ್ತಿದ್ದಾರೆ ಮತ್ತು ದಾಳಿ ನಡೆಯಲ್ಪಡುವ ಸ್ಥಳ ಯಾವುದು ಎಂಬುವುದರ ಬಗ್ಗೆ ಖಚಿತ ಮಾಹಿತಿಯೂ ಇರಲಿಲ್ಲ. ನನಗೆ ಸಿಕ್ಕಿದ ಮಾಹಿತಿ ಆ ಸಂಘಟನೆಯವರೇ ಕರೆ ಮಾಡಿ ತಿಳಿಸಿದ್ದರೆ ನಾನು ಪೋಲೀಸ್‌ನವರಿಗೆ ತಿಳಿಸಬಹುದಿತ್ತು. ನನಗೆ ನನ್ನ ಸುದ್ದಿ ಮೂಲದಿಂದ ಸಿಕ್ಕಿದ ಮಾಹಿತಿಯಾಗಿರುವುದರಿಂದ ನಾನು ಖಚಿತ ಪಡಿಸಿದ ಮೇಲೆಯೇ ಪೋಲೀಸರಿಗೆ ತಿಳಿಸುವೆ ಅಂತ ಅಂದುಕೊಂಡೆ. ಆ ಥರ ಯೋಚಿಸಿ ನಾನು ಮತ್ತು ನನ್ನ ಕ್ಯಾಮರಾಮೆನ್ ಬೈಕ್‌ನಲ್ಲಿ ಪಡೀಲ್ ಗೆಸ್ಟ್ ಹೌಸ್ ಕಡೆ ಹೊರಟೆವು. ಕೆಲವೇ ಹೊತ್ತಿನಲ್ಲಿ ನಾನು ಮತ್ತು ಕ್ಯಾಮರಾಮೆನ್ ಪಡೀಲ್ ಗುಡ್ಡೆಯಲ್ಲಿರುವ 'ಮೋರ್ನಿಂಗ್ ಮಿಸ್ಟ್' ಎಂದು ಹೆಸರಿದ್ದ ಗೆಸ್ಟ್ ಹೌಸ್‌ಗೆ ತಲುಪಿದೆವು. ಆಗ ಯಾವ ದಾಳಿಕೋರರೂ ಅಲ್ಲಿರಲಿಲ್ಲ. ನಾವು ಹೊರಗೆ ಐದು ನಿಮಿಷ ಕಾದೆವು. ಆದರೆ ನಮಗೆ ತಿಳಿಯದೇ ಇದ್ದದ್ದು ಪಡೀಲ್‌ನ ರಾಷ್ಟ್ರೀಯ ಹೆದ್ದಾರಿಯಿಂದ ಸುಮಾರು ಅರ್ಧ ಕಿಲೋ ಮೀಟರ್ ದೂರವಿರುವ ಈ ಗೆಸ್ಟ್ ಹೌಸ್‌ಗೆ ದಾಳಿ ಮಾಡಲು ಕಾರಣವೇನಿರಬಹುದು. ಕಟ್ಟಡಕ್ಕೆ ನಾಲ್ಕು ಕಡೆ ಎತ್ತರವಾದ ಆವರಣ ಗೋಡೆ ಇದೆ. ಅದಕ್ಕೆ ಒಂದೇ ಒಂದು ಬಾಗಿಲು ಇದ್ದು, ಕಟ್ಟಡವು ಗೇಟಿನಿಂದ ೬೦ಮೀಟರ್‌ನಷ್ಟು ದೂರದಲ್ಲಿದೆ. ನಾನು ಗೇಟಿನ ಬಳಿ ನಿಂತು ಬಂಗಲೆ ಮತ್ತು ಅದರ ಪರಿಸರವನ್ನು ಒಂದು ಸಲ ಅವಲೋಕಿಸಿದೆ. ಅಲ್ಲಿ ಅಂತಹದ್ದೇನು ನಡೆಯುತ್ತಿರಲಿಲ್ಲ. ಮಾತ್ರವಲ್ಲ. ದಾಳಿ ಮಾಡಲು ಕಾರಣವೂ ಇರಲಿಲ್ಲ. ಒಂದು ಹುಡುಗಿ ಮನೆಯ ಹೊರಗೆ ವರಾಂಡದಲ್ಲಿದ್ದ ಕುರ್ಚಿಯ ಮೇಲೆ ಕೂತಿದ್ದಳು ಮತ್ತು ಇನ್ನೊಂದು ಮೂಲೆಯಲ್ಲಿ ಇಬ್ಬರು ಹುಡುಗರು ಕೂತು ಮೊಬೈಲ್‌ನಲ್ಲಿ ಆಡುತ್ತಿದ್ದರು. ಅವರ್‍ಯಾರೂ ಕಾನೂನು ಬಾಹಿರ (ಅನೈತಿಕ) ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದಾರೆಂದು ಭಾವಿಸುವ ಹಾಗೆಯೇ ಇರಲಿಲ್ಲ. ದಾಳಿಕೋರರಿಗೆ ಅಲ್ಲಿ ದಾಳಿ ಮಾಡಲು ಯಾವುದೇ ಕಾರಣವಿರಲಿಲ್ಲ. ಈ ಕಾರಣದಿಂದಾಗಿ ಇಲ್ಲಿಯೂ ನಾನು ಪೋಲೀಸರಿಗೆ ಮಾಹಿತಿ ನೀಡಲು ಯೋಚಿಸಿರಲಿಲ್ಲ. ನನಗೆ ಸಿಕ್ಕಿದ ಮಾಹಿತಿ ಸುಳ್ಳಾಗಿದ್ದರೆ, ಆ ಮಾಹಿತಿಯಿಂದ ಇಡೀ ಪೋಲೀಸ್ ಇಲಾಖೆಯನ್ನು ತಪ್ಪುದಾರಿಗೆಳೆಯುತ್ತಿದ್ದೆ. ಅದು ಸುಮ್ಮನೆ ಹೋಂಸ್ಟೇಯ ಒಳಗಿರುವವರನ್ನು ಪೋಲೀಸರಿಂದ ದೌರ್ಜನ್ಯಕ್ಕೆ ಒಳಪಡಿಸುತ್ತಿತ್ತು ಎನ್ನುವ ಸಂಶಯವೇ ನನ್ನನ್ನು ಆ ಹೊತ್ತಿನಲ್ಲಿ ಪೋಲೀಸರನ್ನು ಸಂಪರ್ಕಿಸದಂತೆ ಮಾಡಿತು. ಈ ಯೋಚನೆಯಲ್ಲಿರುವಾಗಲೇ ಸುಮಾರು ಮೂವತ್ತರಷ್ಟು ಜನ ಹೋಮ್ ಸ್ಟೇಯತ್ತ ಹೋಗುತ್ತಿದ್ದರು. ಆಗ ಸಮಯ ಸುಮಾರು ೭.೦೫ ಆಗಿತ್ತು. (ಇದನ್ನು ನಮ್ಮ ಕ್ಯಾಮರಾದಲ್ಲಿ ಚಿತ್ರೀಕರಿಸಲಿಲ್ಲ.) ಕುತೂಹಲಗೊಂಡು ನಾನು ಅವರಲ್ಲಿ ಕೇಳಿದೆ "ಏನು ವಿಷಯ? ಅಲ್ಲಿ ಏನು ನಡೆಯುತ್ತಿದೆ?" ಅದರಲ್ಲೊಬ್ಬ ಯುವಕ ತಟ್ಟನೆ ಉತ್ತರಿಸಿದ. "ಮುಸ್ಲಿಂ ಹುಡುಗರು ನಮ್ಮ ಹಿಂದೂ ಹುಡುಗಿಯರನ್ನು ಈ ಸ್ಥಳಕ್ಕೆ ಕರಕೊಂಡು ಬಂದಿದ್ದಾರೆ. ಅವರನ್ನು ನಾವು ಹಾಗೆಯೇ ಬಿಡಬಾರದು".

ನಾನು ಅವರಲ್ಲಿ "ನೀವು ಶ್ರೀ ರಾಮಸೇನೆಯವರೇ"? ಎಂದು ಕೇಳಿದಾಗ ಅವರು ಹೇಳಿದರು "ಅಲ್ಲ, ನಾವು ಹಿಂದೂ ಜಾಗರಣ ವೇದಿಕೆಯವರು". ಈ ಮಧ್ಯೆ ಕೆಲವು ಯುವಕರು ಹೊರಗೆ ಕುಳಿತಿದ್ದ ಹುಡುಗಿಯತ್ತ ಕೈ ತೋರಿಸಿ ಹೇಳುತ್ತಿದ್ದರು "ಅಲ್ಲಿ ಹುಡುಗಿಯರು ಮತ್ತು ಹುಡುಗರು ಇದ್ದಾರೆ" ಹೀಗೆ ಹೇಳುತ್ತಾ ಅವರು ಅವಳ ಮೇಲೆ ದಾಳಿ ಮಾಡಲು, ಮುಗಿಬಿದ್ದು ಅವಳತ್ತ ಓಡಲು ಪ್ರಾರಂಭಿಸಿದರು. ಆ ಹುಡುಗಿಗೆ ಇವರು ತನ್ನ ಮೇಲೆ ದಾಳಿ ಮಾಡಲು ಬರುತ್ತಿದ್ದಾರೆಂದು ತಿಳಿದು ಬಂಗಲೆಯ ಒಳಗೆ ಓಡಿ ಬಾಗಿಲನ್ನು ಭದ್ರಪಡಿಸುವ ವಿಫಲ

ಯತ್ನವನ್ನು ಮಾಡಿದಳು. ಮೂವತ್ತು ಜನರ ಗುಂಪು ಅವಳು ಬಾಗಿಲು ಹಾಕುವ ಮೊದಲೇ ಅದನ್ನು ದೂಡಿ ತೆರೆದು ಒಳನುಗ್ಗಿದರು. ಆಗ ಸಮಯ ಸರಿಯಾಗಿ ೭:೧೨:೩೮. ಆ ಸಮಯ ನಾನು ಸಂಪೂರ್ಣ ಎಚ್ಚರವಾಗಿದ್ದೆ. ತಕ್ಷಣ ನಾನು ನನ್ನ ಕಚೇರಿ ಮೊಬೈಲ್‌ನಿಂದ (+೯೧ –೯೯೭೨೫೭೦೦೪೪) ಮಂಗಳೂರು ಗ್ರಾಮಾಂತರ ಠಾಣೆಯ ಇನ್ಸ್‌ಪೆಕ್ಟರ್ ರವೀಶ್ ನಾಯಕ್‌ರ ನಂಬರಿಗೆ (+೯೧ –೯೪೮೦೮೫೩೩೦) ಕರೆ ಮಾಡಿದೆ. ಆಗ ಸುಮಾರು ೧೯:೧೫ ಆಗಿರಬಹುದು. ಆದರೆ ರವೀಶ್ ನಾಯಕ ನನ್ನ ಕರೆ ಸ್ವೀಕರಿಸಲಿಲ್ಲ. ಆಗಷ್ಟೇ ಹಲ್ಲೆ ಪ್ರಾರಂಭವಾಯಿತು. ಆದರೆ ಆ ಸನ್ನಿವೇಶಕ್ಕೆ ಏನು ಮಾಡಬೇಕೆಂದು ತೋಚದೆ ಹೆದರಿದ್ದ ಹುಡುಗಿಯರು ಅಡ್ಡಾದಿಡ್ಡಿ ಓಡಲು ಪ್ರಾರಂಭಿಸಿದರು. ನಾನು ಕರೆ ಮಾಡಿದ್ದನ್ನು ಪೋಲೀಸರು ಸ್ವೀಕರಿಸುತ್ತಿರಲಿಲ್ಲ. ನಾನೇನು ಮಾಡಬೇಕೆಂದು ತಿಳಿಯದೆ ಗೆಳೆಯ, ಟಿವಿ ೯ ವರದಿಗಾರ ರಾಜೇಶ್ ರಾವ್‌ಗೆ ಕರೆಮಾಡಿ ಇನ್ಸ್‌ಪೆಕ್ಟರ್ ರವೀಶ್ ನಾಯಕ್‌ಗೆ ತಿಳಿಸಲು ಹೇಳಿದ್ದೆ (ಆದರೂ ರಾಜೇಶ್ ರಾವ್‌ನ ಕರೆಯನ್ನು ಸಹ ರವೀಶ್ ನಾಯಕ್ ಸ್ವೀಕರಿಸಲಿಲ್ಲ).

ನಾನು ಪೋಲೀಸ್ ಇನ್ಸ್‌ಪೆಕ್ಟರ್‌ರನ್ನು ಸಂಪರ್ಕಿಸುವ ಪ್ರಯತ್ನ ಮಾಡುತ್ತಿರುವಾಗ ಕ್ಯಾಮೆರಾಮೆನ್ ದಾಳಿಕೋರರ ಹಿಂದೆಯೇ ಓಡಿ ಚಿತ್ರೀಕರಿಸಲು ಪ್ರಾರಂಭಿಸಿದ್ದ. ನಂತರ ನಾವು ಸ್ಥಳೀಯ 'ಸಹಾಯ ಟಿವಿ'ಯ ಕ್ಯಾಮೆರಾಮೆನ್ ಶರಣ್ ಮತ್ತು ಛಾಯಗ್ರಾಹಕ ವಿನಯ್ ಕೃಷ್ಣನ್ ಜತೆಗೂಡಿದೆವು. ನಾನು ಈ ಎಲ್ಲ ಘಟನೆಗಳಿಗೆ ಮೂಕ ಪ್ರೇಕ್ಷಕನಾದೆ ಮತ್ತು ಈ ದಾಳಿಯು ನಡೆಯುತ್ತಿರುವಾಗ ನನಗೇನು ಮಾಡಲಾಗುತ್ತಿಲ್ಲವಲ್ಲ ಎಂಬ ಪಾಪ ಪ್ರಜ್ಞೆ ಕಾಡುತಿತ್ತು. ದಾಳಿಕೋರರಲ್ಲಿ ಶೇ ೫೦ರಷ್ಟು ಜನ ಕುಡಿದ ಮತ್ತಿನಲ್ಲಿದ್ದರು ಮತ್ತು ನನ್ನ ಮಾತನ್ನು ಕೇಳುವ ಸ್ಥಿತಿಯಲ್ಲಿರಲಿಲ್ಲ. ಇಂತಹ ಅದೆಷ್ಟು ಹಿಂಸಾ ಕೃತ್ಯಗಳು ಪ್ರಪಂಚದಲ್ಲಿ ನಡೆದಿರಬಹುದು. ಆದರೆ ನಾನು ನನ್ನ ಜೀವನದಲ್ಲಿ ಇಂತಹ ಒಂದು ಘಟನೆ ಕಂಡೇ ಇಲ್ಲ. ನನ್ನ ಕ್ಯಾಮರಾಮೆನ್, ದಾಳಿಕೋರರು ಎಲ್ಲೆಲ್ಲೋ ಓಡಿ ಅಲ್ಲಿದ್ದವರಿಗೆ ಹಲ್ಲೆ ಮಾಡುತ್ತಿದ್ದರೋ ಅವರನ್ನೇ ಹಿಂಬಾಲಿಸುತ್ತಿದ್ದ. ನಾನು ಅದನ್ನು ನೋಡಿ ಬೊಬ್ಬಿರಿದು ಅವರಲ್ಲಿ ವಿನಂತಿಸುತ್ತಿದ್ದೆ "ಹುಡುಗಿಯರಿಗೆ ಹೊಡೆಯಬೇಡಿ". ನನ್ನ ವಿನಂತಿ ಕ್ಯಾಮರಾದಲ್ಲಿ ಮಾತ್ರ ರೆಕಾರ್ಡ್ ಆಗುತ್ತಿತ್ತೇ ವಿನಹ ಅವರ ಹೃದಯವನ್ನು ಮುಟ್ಟುತ್ತಿರಲಿಲ್ಲ. ಕ್ಯಾಮರಾವನ್ನು ಹುಡುಗಿಯರಿಗೆ ಫೋಕಸ್ ಮಾಡಿ ತಮ್ಮ ಅವರ ಮೇಲೆ ಮಾಡಬೇಡಿ ಎನ್ನುವುದು ಮಾತ್ರ ಅವರ ಪ್ರತಿಕ್ರಿಯೆ ಆಗಿತ್ತು.

ಹಲ್ಲೆಗೊಳಗಾದ ಹುಡುಗರು "ದಯವಿಟ್ಟು ಬಿಟ್ಟುಬಿಡಿ ನಾವು ಹುಟ್ಟುಹಬ್ಬವನ್ನು ಆಚರಿಸುತ್ತಿದ್ದೇವೆ. ಪ್ಲೀಸ್ " ಎಂದು ದಾಳಿಕೋರರ ಕಾಲಿಗೆ ಬಿದ್ದು ಬೇಡುತ್ತಿದ್ದರು. ಆದರೆ ಕ್ರೂರ ಹಲ್ಲೆಕೋರರ ಮನಸ್ಸು ಕರಗಲಿಲ್ಲ. ಇದು ಇಷ್ಟೇ ಆಗಿದ್ದರೆ ಈ ಘಟನೆಯನ್ನು ಮರೆಯಬಹುದಾಗಿತ್ತು. ಆದರೆ ನಾನು ಅದಕ್ಕಿಂತ ಭಯಂಕರ ಮತ್ತು ಅಸಹ್ಯಕರವಾದದ್ದು ಅಲ್ಲಿ ಕಂಡೆ.

ಹುಡುಗರನ್ನು ನಾಲ್ಕು ಜನರು ಥಳಿಸುತ್ತಿದ್ದ ರೀತಿಯನ್ನು ಕಂಡ ಹುಡುಗಿಯರು ಆಘಾತಗೊಂಡು ನಾಲ್ಕು ದಿಕ್ಕಿಗೆ ಓಡಲು ಪ್ರಾರಂಭಿಸಿದರು. ಕೆಲವು ದಾಳಿಕೋರರು ಬಂಗ್ಲೆಯೊಳಗೆ ಆ ಹುಡುಗಿಯರನ್ನು ಬೆನ್ನಟ್ಟಲು ಪ್ರಾರಂಭಿಸಿದರು. ನೀವು ನಂಬಲಿಕ್ಕಿಲ್ಲ. ಒಬ್ಬಳು ಮೊದಲ ಮಹಡಿಯಿಂದ ಹಾರಿದಳು. ಅವಳು ಇಪ್ಪತ್ತರಷ್ಟು ಸಂಖ್ಯೆಯಲ್ಲಿದ್ದ ದಾಳಿಕೋರರ ಕೈಗೆ ಸಿಕ್ಕಿಬಿದ್ದಳು. ಅವರು ಅವಳ ಬಟ್ಟೆಯನ್ನು ಹರಿದು ತೆಗೆದರು (ಬಿಚ್ಚಿದರು). ಅವರು ಅವಳ ಕೆನ್ನೆಗೆ ಹೊಡೆದು ಗೋಡೆಯತ್ತ ದೂಡಿದರು. ಆಗ ಇನ್ನೊಬ್ಬಳು ಹುಡುಗಿ ಓಡಲು ಪ್ರಾರಂಭಿಸಿದಳು. ದಾಳಿಕೋರರು ಅವಳನ್ನು ಹಿಡಿದು ಅವಳ ಬಟ್ಟೆಯನ್ನು ಬಿಚ್ಚಿದರು. ಅವಳು ಕೇವಲ ಒಂದು ತುಂಡು ಬಟ್ಟೆಯಲ್ಲಿರುವಂತೆ ದೌರ್ಜನ್ಯ ಎಸಗಿದರು. ಈ ದೃಶ್ಯ ನನ್ನಲ್ಲಿ ನಡುಕ ಹುಟ್ಟಿಸಿತು. ಇಂತಹ ಭಯಾನಕ ದೃಶ್ಯವನ್ನು ನಾನು ಕೇಳಿದ್ದೇ ವಿನಹ ಇದುವರೆಗೆ ಕಂಡಿರಲಿಲ್ಲ. ಈ ದೃಶ್ಯಗಳು ಟಿವಿ ನ್ಯೂಸ್‌ಗೆ ಹಾಕಲು ಸಾಧ್ಯವಿರದಷ್ಟು ಅಸಹ್ಯವಾಗಿತ್ತು. ಅಲ್ಲಿ ನಡೆದ ಘಟನೆಯಲ್ಲಿ ಸ್ವಲ್ಪ ಭಾಗವಷ್ಟೇ ಕ್ಯಾಮರಾದಲ್ಲಿ ಚಿತ್ರೀಕರಿಸಿದ್ದು. ಆ ಹುಡುಗಿಯರ ಮೇಲೆ ದಾಳಿಕೋರರು ಎಸಗುತ್ತಿದ್ದ ದೌರ್ಜನ್ಯ ಎಷ್ಟು ಮಿತಿಮೀರಿತ್ತೆಂದರೆ, ಅಲ್ಲಿ ನ್ಯೂಸ್ ಚಾನೆಲ್‌ನವರ ಕ್ಯಾಮರಾ ಇಲ್ಲದೆ ಇದ್ದಿದ್ದರೆ ಏನೆಲ್ಲಾ ನಡೆಯುತ್ತಿದೆಂದು ಊಹಿಸಲಸಾಧ್ಯ. ಕೆಲವು ದಾಳಿಕೋರರು ಘಟನೆಯನ್ನು ತಮ್ಮ ಮೊಬೈಲ್‌ಗಳಲ್ಲಿ ಚಿತ್ರೀಕರಿಸುತ್ತಿದ್ದರು. ನಂತರ ಅಲ್ಲಿ ಪಾರ್ಟಿ ನಡೆಸುತ್ತಿದ್ದ ಹುಡುಗ ಹುಡುಗಿಯರನ್ನು ಒಂದು ರೂಮ್‌ನಲ್ಲಿ ಕೂಡಿ ಹಾಕಿ ಒಳಗಿನಿಂದ ಚಿಲಕ ಹಾಕಲಾಯಿತು. ಇದೆಲ್ಲವು ಮಿಂಚಿನ ವೇಗದಲ್ಲಿ ನಡೆಯಿತು. ಸುಮಾರು ಹದಿನೈದು ನಿಮಿಷ ನಡೆದಿರಬಹುದು.

ಒಳಗೆ ನಡೆಯುತ್ತಿದ್ದ ಘಟನೆಗಳನ್ನು ವೀಕ್ಷಿಸಿ ಆಘಾತಗೊಂಡ ನಾನು ಹೊರಗೆ ಹೋದೆ. ಅಲ್ಲಿ ಏರಿಯಾ ಕಾರ್ಪೊರೇಟರ್ ಆಗಿರುವ ಮೋಹನ್ ಪಡೀಲ್ ಅಲ್ಲಿದ್ದ ಉದ್ವಿಗ್ನ ಗುಂಪಿನೊಂದಿಗೆ ಮನೆಯೆದುರು ಮಾತನಾಡುತ್ತಿದ್ದರು. ದಾಳಿಕೋರರು ತಾವು ಯೋಜಿಸಿದ್ದ ದಾಳಿ ಸಂಪೂರ್ಣಗೊಂಡ ನಂತರ, ಪೋಲೀಸ್ ಇನ್ಸ್‌ಪೆಕ್ಟರ್ ರವೀಶ್ ನಾಯಕ್, ಪಿ.ಎಸ್.ಐ ಮುನಿಕಂಠ ನೀಲ ಸ್ವಾಮಿ ಮತ್ತು ಪೋಲೀಸ್ ಕಾನ್ಸ್ ಟೇಬಲ್‌ನವರು ಸ್ಥಳಕ್ಕೆ ಧಾವಿಸಿದರು. ಆಗ ಸಮಯ ೭.೨೫ ಆಗಿತ್ತು. ಯಾವಾಗಲೂ ಒಂದು ಗುಂಪನ್ನು ನಿಯಂತ್ರಿಸಲು ಪೋಲೀಸರು ಲಾಠಿಯೊಂದಿಗೆ ಹಾಜರಾಗುತ್ತಾರೆ. ಆದರೆ ಈ ಪೋಲೀಸರ್‍ಯಾರು ಲಾಠಿಯನ್ನು ಹಿಡಿದುಕೊಂಡು ಬಂದಿರಲೇ ಇಲ್ಲ. ಇದರಿಂದ ದಾಳಿಕೋರರಿಗೆ ಪೋಲೀಸರೊಂದಿಗೆ ಪೂರ್ವಯೋಜಿತ ನಂಟಿದೆ ಎಂದು ತೋರುತ್ತದೆ. ಸುಮಾರು ಅರ್ಧ ಗಂಟೆ ಪೋಲೀಸರು ದಾಳಿಕೋರರೊಂದಿಗೆ ಸಮಾಲೋಚಿಸುತ್ತಿದ್ದರು. ದಾಳಿಕೋರರನ್ನು ಬಂಧಿಸುವ ಬದಲು ಅವರೊಂದಿಗೆ ಮಾತುಕತೆಯನ್ನು ನಡೆಸುತ್ತಿದ್ದ ಪೋಲೀಸರ ಕಾರ್ಯದ ಬಗೆಗೆ ನನಗೆ ಆಶ್ಚರ್ಯವಾಗಿದೆ. ಕಾರ್ಪೊರೇಟರ್ ಮೋಹನ್ ಪಡೀಲ್ ಸಹ ದಾಳಿಕೋರರೊಂದಿಗಿದ್ದು, ದಾಳಿಕೋರರ ಕೃತ್ಯದ ಬಗ್ಗೆ ಹೆಮ್ಮೆಯಿಂದಿದ್ದ. ಅವರು ಮಾತುಕತೆ ನಡೆಸುತ್ತಿದ್ದಾಗ ಹಲ್ಲೆ ಗೊಳಗಾದ ಒಬ್ಬ ಹುಡುಗ ಹಲ್ಲೆಕೋರರಿಂದ ತಪ್ಪಿಸಿ ಓಡಲು ಯತ್ನಿಸಿದಾಗ, ಪೋಲೀಸರು ಅವನನ್ನು ಹಿಡಿದರು. ಪೋಲೀಸರ ಎದುರೇ ಆ ಹುಡುಗನಿಗೆ ಹಲ್ಲೆಕೋರರು ಬಡಿದರು.

ಆ ನಂತರ ತುಂಬಾ ಜನ ಕ್ಯಾಮರಾದವರು ಸ್ಥಳಕ್ಕೆ ಧಾವಿಸಿದರು. ನಾನು ಮತ್ತು ನನ್ನ ಕ್ಯಾಮರಾಮೆನ್ ಆಫೀಸ್‌ಗೆ ಮರಳಿ ಬೆಂಗಳೂರಿನ ಆಫೀಸಿಗೆ ಎಲ್ಲಾ ವೀಡಿಯೋ ಕ್ಲಿಪ್ಪಿಂಗ್ ಅನ್ನು ಅಪ್ ಲಿಂಕ್ ಮಾಡಿದೆವು. ೭.೪೫ ಕ್ಕೆ ವೀಡಿಯೋ ಕ್ಲಿಪ್ಪಿಂಗ್ ನ್ಯೂಸ್ ಚಾನೆಲ್‌ನಲ್ಲಿ ಪ್ರಸಾರವಾಗಿತ್ತು. ಸ್ವಲ್ಪ ಹೊತ್ತಿನಲ್ಲಿ ಆ ಕ್ಲಿಪ್ಪಿಂಗ್ ಅನ್ನು ರಾಷ್ಟ್ರೀಯ ಸುದ್ದಿ ಸಂಸ್ಥೆಯವರೂ ಪ್ರಸಾರ ಮಾಡಿದರು ಮತ್ತು ಇದೊಂದು ರಾಷ್ಟ್ರೀಯ ಸುದ್ದಿಯಾಗಿತ್ತು. ಇದರಿಂದ ಕುಪಿತಗೊಂಡ ಪೋಲೀಸ್ ಕಮೀಷನರ್ ಸೀಮಂತ್ ಕುಮಾರ್ ನನ್ನೊಂದಿಗಿದ್ದ ನನ್ನ ಗೆಳೆಯ ರಾಜೇಶ್ ರಾವ್ (ಟಿವಿ೯)ಗೆ ಕರೆಮಾಡಿದರು. ರಾಜೇಶ್ ಆ ಕರೆಯನ್ನು ಲೌಡ್ ಸ್ಪೀಕರ್‌ನಲ್ಲಿ ಇಟ್ಟಾಗ ಸೀಮಂತ್‌ಕುಮಾರ್ ಧ್ವನಿ ಸ್ಪಷ್ಟವಾಗಿ ಕೇಳುತ್ತಿತ್ತು. “ನವೀನ ಯಾಕೆ ಈ ಸುದ್ದಿಯನ್ನು ರಿಪೋರ್ಟ್ ಮಾಡಿದ್ದು? ಅವನಿಗೆ ಸಹೋದರಿಯರಿಲ್ಲವೇ? ಅವನು ಅವರಿಗೆ ಹೊಡೆಯುವುದಿಲ್ಲವೇ? ಯಾರಾದರೂ ಅದನ್ನು ಟಿವಿಯಲ್ಲಿ ತೋರಿಸುತ್ತಾರೆಯೇ?. ನಾನು ಅವನಿಗೆ ಪಾಠ ಕಲಿಸುತ್ತೇನೆ. ಅವನು ಹೇಳಿದ್ದಾನೆ ಮಂಗಳೂರಿನಲ್ಲಿ ತಾಲಿಬಾನ್ ಸಂಸ್ಕೃತಿ ಇದೆ. ಅವನು ಈ ಘಟನೆಯನ್ನು ಅಸ್ಸಾಮಿನ ಘಟನೆಯೊಂದಿಗೆ ಸಮೀಕರಿಸಿದ್ದಾನೆ. ಈ ಸಲ ಅವನನ್ನು ಸುಮ್ಮನೆ ಬಿಡುವುದಿಲ್ಲ. ನಾವು ಅವನನ್ನು ಫಿಕ್ಸ್ ಮಾಡುತ್ತೇವೆ. ಎಷ್ಟೇ ಸಂಖ್ಯೆಯ ಜನರು ಅವನೊಂದಿಗೆ ಇರಲಿ, ಖಂಡಿತವಾಗಿಯೂ ಅವನನ್ನು ಫಿಕ್ಸ್ ಮಾಡಿಯೇ ತೀರುತ್ತೇವೆ”. ಇದರಿಂದ ಸ್ಪಷ್ಟವಾಗಿ ತಿಳಿಯುವುದೇನೆಂದರೆ ಸೀಮಂತ್ ಕುಮಾರ್‌ರವರಿಗೆ, ಆ ಹಲ್ಲೆಕೋರರು ಹುಡುಗ ಮತ್ತು ಹುಡುಗಿಯರ ಮೇಲೆ ದಾಳಿ ಮಾಡಿದುದು ತಪ್ಪೇ ಅನಿಸುವುದಿಲ್ಲ ಮತ್ತು ಅದನ್ನು ಚಿತ್ರೀಕರಿಸಿದ್ದು, ವರದಿಮಾಡಿದ್ದು ಅಪರಾಧ.

ಜುಲೈ ೩೦ ರ ಬೆಳಿಗ್ಗೆ ನನಗೆ ಇನ್ನೊಂದು ಆಘಾತ! ನಾನು ವರದಿ ಮಾಡಿ ಯಾರನ್ನು ಬೆಂಬಲಿಸಿದೆನೋ ಅವರೇ ಮಂಗಳೂರು ಪೋಲೀಸ್ ಠಾಣೆಯಲ್ಲಿ ನನ್ನ ವಿರುದ್ಧ ಹೇಳಿಕೆಯನ್ನು ನೀಡಿದರು. ಹಲ್ಲೆಗೊಳಗಾದ ಯುವಕ ಮತ್ತು ಯುವತಿಯರು ಅವರ ಸ್ವ–ಇಚ್ಛೆಯಿಂದ ಹೇಳಿಕೆಯನ್ನು ನೀಡಿರಲಿಕ್ಕಿಲ್ಲ ಅನ್ನುವುದು ಖಂಡಿತವಾಗಿಯೂ ನನಗೆ ತಿಳಿದಿದೆ. ನಾನು ಹಲ್ಲೆಕೋರರಲ್ಲಿ ಹುಡುಗ ಹುಡುಗಿಯರಿಗೆ ಹೊಡೆಯದಂತೆ ಬೇಡುವುದನ್ನು ಅವರು ಕೇಳಿಸಿಕೊಂಡಿದ್ದಾರೆಂದು ಭಾವಿಸಿದ್ದೇನೆ. ಸಂಜೆಯಾಗುವಷ್ಟೊತ್ತಿಗೆ ನನ್ನ ಸಂಶಯ ನಿವಾರಣೆಯಾಯಿತು. ದಾಂಧಲೆಗೊಳಗಾದ ಯುವಕ ಯುವತಿಯರು ಸಂಜೆ ಮಾಧ್ಯಮದವರೊಂದಿಗೆ ಹೇಳುತ್ತಿದ್ದರು. "ನಾವು ಮಾಧ್ಯಮದವರ ವಿರುದ್ಧ ಯಾವುದೇ ಕೇಸನ್ನು ಹಾಕಲಿಲ್ಲ. ಅವರು ನಮ್ಮ ಪರವಾಗಿದ್ದರು". ಮಂಗಳೂರು ಗ್ರಾಮೀಣ ಪೋಲೀಸ್ ಠಾಣೆಯಲ್ಲಿ ಭಾರತೀಯ ದಂಡ ಸಂಹಿತೆ ಮತ್ತು ಕಾನೂನು ವಿರೋಧಿ ಚಟುವಟಿಕೆಗಳ ತಡೆ ಆ್ಯಕ್ಟ್ (Unlawful Activities Prevention Act)ಅನ್ನು ನನ್ನ ವಿರುದ್ಧ ದಾಖಲಿಸಲಾಗಿದೆ. ಪೋಲೀಸರು ನಮ್ಮ ವೀಡಿಯೋದ ಸಹಾಯದಿಂದ ದಾಂಧಲೆಕೋರರಲ್ಲಿ ಅನೇಕರನ್ನು ಬಂಧಿಸಿದ್ದಾರೆ. ನಾವು ಪ್ರಶ್ನಾರ್ಹ ಘಟನೆಯನ್ನು ವರದಿ ಮಾಡಿದ್ದೇವೆಯೋ ಹೊರತು ಪ್ರಶ್ನಾರ್ಹ ವೀಡಿಯೋವನ್ನಲ್ಲ. ಜುಲೈ ೨೮ರ ಘಟನೆ

ಅದೊಂದು ಅಪರೂಪದ (ಪ್ರತ್ಯೇಕ) ಘಟನೆಯಲ್ಲ. ಅಂತಹ ಘಟನೆಗಳು ಪ್ರತಿವಾರವೂ ನಡೆಯುತ್ತಿರುತ್ತದೆ. ಮೂಲಭೂತವಾದಿಗಳು ಹಿಂದೂ ಹುಡುಗಿಯರೊಂದಿಗಿದ್ದ ಹುಡುಗರಿಗೆ ಹೊಡೆಯುವುದು ಮಾತ್ರವಲ್ಲ ಅವರನ್ನು ಹೊಡೆದ ನಂತರ ಪೋಲೀಸ್ ಠಾಣೆಗೆ ಒಪ್ಪಿಸುತ್ತಾರೆ. ಪೋಲೀಸರು ಆ ಯುವಕ ಯುವತಿಯರ (ಗೆಳತಿಯರು ಅಥವಾ ಪ್ರೇಮಿಗಳು) ಹೆತ್ತವರನ್ನು ಕರೆದು ಎಚ್ಚರಿಕೆ ನೀಡಿ ಕಳುಹಿಸುತ್ತಾರೆ. ನಾನು ವೀಡಿಯೋ ಚಿತ್ರೀಕರಿಸದೆ ಇದ್ದಿದ್ದರೆ, ಹುಡುಗಿಯರು ದೌರ್ಜನ್ಯಕ್ಕೊಳಗಾಗಿದ್ದದನ್ನು ಪೋಲೀಸರು ಒಪ್ಪುತ್ತಲೇ ಇರಲಿಲ್ಲ. ಇಂತಹ ಅನೇಕ ಪ್ರಕರಣಗಳು ಇದೇ ದಾರಿ ಹಿಡಿದಿದೆ.

ನಮ್ಮ ವೀಡಿಯೋ ಚಿತ್ರೀಕರಣ ಕೋಮುವಾದಿಗಳ ಕ್ರೂರ ಮುಖವನ್ನು ತೋರಿಸಿದೆ ಮತ್ತು ದಾಳಿಕೋರರನ್ನು ಬಂಧಿಸಲು ಸಹಾಯಕವಾಗಿದೆ. ಯಾರು ಏನೇ ಹೇಳಿದರೂ, ನನ್ನ ಮೇಲೆ ಕೇಸ್ ಹಾಕಿದರೂ ನಾನು ವರದಿಗಾರನಾಗಿ ನನ್ನ ಕೆಲಸವನ್ನು ಮಾಡಿದ್ದೇನೆ ಮತ್ತು ನನ್ನ ಸಮಾಜಕ್ಕೆ ನ್ಯಾಯ ಒದಗಿಸಿದ್ದೇನೆಂದು ನಂಬುತ್ತೇನೆ. ಇದೊಂದೇ ನನ್ನ ನೊಂದ ಮನಸ್ಸಿಗೆ ತೃಪ್ತಿ ತಂದುಕೊಟ್ಟದ್ದು.

**ರಾಜೇಶ್ ಶ್ರೀನಿವಾಸ್, (ಕ್ಯಾಮರಾಮೆನ್ ಟಿವಿ ೯)**

ನಾನು ಒಂದು ವರ್ಷದಿಂದ ಕನ್ನಡ ನ್ಯೂಸ್ ಚಾನೆಲ್‌ಗಾಗಿ ದುಡಿಯುತ್ತಿದ್ದೇನೆ. ಅವತ್ತು ನನಗೆ ನವೀನ್ ಕರೆ ಮಾಡಿದ್ದ. ಅವನಲ್ಲಿ ಲೈಟ್ ಇರದೇ ಇದ್ದುದರಿಂದ ನನಗೆ ಕರೆ ಮಾಡಿದ್ದ. ನಾನು ಕ್ಯಾಮರಾ ಮತ್ತು ಲೈಟ್‌ನ್ನು ಹಿಡಿದುಕೊಂಡು ಅವನಿದ್ದಲ್ಲಿಗೆ ಹೋದೆ. ನಾನು ಒಳಗೆ ಹೋದೆ. ಒಬ್ಬಳು ಹುಡುಗಿ ಅಲ್ಲಿಯೇ ಒಂದು ಕಡೆ ಇದ್ದಳು. ಇನ್ನೊಬ್ಬಳು ಮಾತನಾಡುತ್ತಿದ್ದಳು. ಯಾವಾಗ ಒಂದು ಗುಂಪು ಜನ ಅಲ್ಲಿಗೆ ಬಂದರೋ ಅವರು ಹೆದರಿ ಒಳಗೆ ಓಡಿದರು. ಒಬ್ಬಳು ಬೊಬ್ಬಿಡುತ್ತಾ ನೆಲ ಅಂತಸ್ತಿನತ್ತ ಓಡಿದಳು. ನಾನು ಓಡಿದೆ. ನನಗೇನು ಕಾಣದೆ ಬಿದ್ದೆ. ಮತ್ತೆ ಮೇಲೆ ಬಂದೆ. ಅವರು ೨೫ರಷ್ಟು ಜನ ಇದ್ದರು. ಹೊರಗೆ ಎಷ್ಟು ಮಂದಿ ಇದ್ದರೆಂದು ನನಗೆ ಗೊತ್ತಿರಲಿಲ್ಲ. ಅವರು ಒಬ್ಬ ಹುಡುಗನನ್ನು ಮೇಲಿನ ಅಂತಸ್ತಿನಿಂದ ಎಳೆದುಕೊಂಡು ಬಂದರು. ಅವನು ಹೇಳುತ್ತಿದ್ದ ಅವನ ಹುಟ್ಟಿದ ಹಬ್ಬವೆಂದು. ಆಗ ಅವರು "ನಿನಗೆ ಹುಟ್ಟಿದ ಹಬ್ಬ ಆಚರಿಸಲು ಇದೇ ಸ್ಥಳ ಬೇಕಾ"? ಎಂದು ಹೇಳಿ ಅವನನ್ನು ನಿಂದಿಸಿದರು. "ಒಬ್ಬಳು ಮೇಲಿನಿಂದ ಹಾರಿದಳು" ಎಂದು ಹೇಳುತ್ತಿದ್ದರು. ಅವರಲ್ಲಿ ಕೆಲವರು ಒಬ್ಬಳು ಹುಡುಗಿಯನ್ನು ಕರೆತಂದು ಇವಳೇ ಹಾರಿದವಳೆಂದು ಹೇಳಿದರು. ಅವರು ಅವಳನ್ನು ಒಳಕ್ಕೆ ಎಳೆದುಕೊಂಡು ಹೋದರು. ಅವರು ಅವಳನ್ನು ಎಳೆದುಕೊಂಡು ಹೋಗುವಾಗ ಮೆಟ್ಟಿಲುಗಳ ಮೇಲೆ ಬಿದ್ದಳು. ಮತ್ತೊಬ್ಬಳ ಬಟ್ಟೆ ಕೆಳಗೆ ಬಿತ್ತು. ಅವರಲ್ಲೊಬ್ಬ ದಾಳಿಕೋರ ಅವಳ ಮುಖವನ್ನು ತೋರಿಸಲು ಯತ್ನಿಸುತ್ತಿದ್ದ. ಅವಳು ಹಾಗೆ ಮಾಡಲು ಬಿಡುತ್ತಿರಲಿಲ್ಲ. ಅವರು ಅವಳನ್ನು ರೂಮಿನೊಳಗೆ ತಳ್ಳಿದರು. ಆ ರೂಮಿನಲ್ಲಿ ಬೆಡ್ ಶೀಟ್ ಮತ್ತು ತಲೆದಿಂಬು ಇತ್ತು. ಇಬ್ಬರು ಹುಡುಗಿಯರು ತಲೆದಿಂಬನ್ನು ತಮ್ಮ ಮುಖಕ್ಕೆ ಅಟ್ಟವಾಗಿ ಮತ್ತೊಬ್ಬಳು ಬೆಡ್ ಶೀಟ್‌ನ್ನು ಹೊದ್ದುಕೊಂಡಳು. ಅವರು ಬೆಡ್ ಶೀಟ್‌ನ್ನು ಎಳೆದರು. ಅವರಲ್ಲೊಬ್ಬ ಹೇಳಿದ "ಆ ರೀತಿ ಅವರನ್ನು ಉಪದ್ರವಿಸಬೇಡಿ". ಅವನ್ಯಾರು ಎಂದು ನನಗೆ ಗೊತ್ತಿಲ್ಲ. ಅವರು ಹುಡುಗಿಯನ್ನು ಹೊಡೆಯುವಾಗ ನಾನು ಬೊಬ್ಬಿಡುತ್ತಾ ಹೇಳಿದೆ "ಹೊಡೆಯಬೇಡಿ". ಹುಡುಗಿ ಪೆಟ್ಟಿನ ಆಘಾತಕ್ಕೆ ಕುಸಿದು ಬಿದ್ದಳು. ಅವಳು ಎದ್ದಾಗ ಅವಳನ್ನೂ ದೂಡಿ "ನಿಮ್ಮಲ್ಲಿ ಎಷ್ಟು ಸಲ ಹೇಳುವುದು ಇಲ್ಲಿಗೆ ಬರಬೇಡಿ? ಎಂದು". ಒಂದು ಕಡೆ ನನಗೆ ಬೇಸರವಾಗುತ್ತಿದ್ದರೆ, ಇನ್ನೊಂದು ಕಡೆ ನಾನು ವೀಡಿಯೋ ತೆಗೆಯುತ್ತಿದ್ದೆ. ನವೀನ್ ಆಗ ಹೊರಗೆ ಇದ್ದ. ಅವರು ಎಡಗಡೆಗೆ ಓಡಿದವರನ್ನು, ಬಾಗಿಲ ಹತ್ತಿರ ಇದ್ದವರನ್ನೂ ಮತ್ತು ಒಳಗೆ ಇದ್ದವರನ್ನೆಲ್ಲಾ ಒಂದೇ ರೂಮಿನಲ್ಲಿ ಇಟ್ಟರು. "ಅಲ್ಲಿ ಇನ್ನೂ ಕೆಲವರಿದ್ದಾರೆ. ಅವರನ್ನೂ ಕರೆ ತನ್ನಿ" ಎಂದು ಅವರು ಹೇಳಿದರು. ನಂತರ ಪೋಲೀಸರು ಬಂದರು. ಪೋಲೀಸರು ಹಲ್ಲೆಗೊಳಗಾದ ಇಬ್ಬರು ಹುಡುಗರನ್ನು ಹಿಡಿದರು. ಮತ್ತೆ ನಾನು ಹೊರಗೆ ಬಂದೆ. ಮೋಹನ್ ಪಡೀಲ್ ಬಂದು ಹಲ್ಲೆಗೊಳಗಾದ ಯುವಕರಲ್ಲಿ "ನಿಮ್ಮ ವಿರುದ್ಧ ಕೇಸು ದಾಖಲಿಸಲಾಗುವುದು ಎಂದರು". ಮತ್ತೆ ನಾನು ಒಳಗೆ ಹೋಗಲಿಲ್ಲ. ಹದಿನೈದು ನಿಮಿಷ ಕಳೆದು ರವೀಶ್ ನಾಯಕ್ ಒಳಗೆ ಬಂದರು. ಅವರು ಸಾವಧಾನವಾಗಿ ಮಾತನಾಡುತ್ತಿದ್ದರು. ಅವರೆಲ್ಲಾದರೂ ಗಂಭೀರವಾಗಿ ಮಾತನಾಡಿದ್ದರೆ ಹೆದರಿಕೆಯಿಂದ

ಹಲ್ಲೆಕೋರರು ಓಡುತ್ತಿದ್ದರು. ಪೋಲೀಸರು ಬಾಗಿಲನ್ನು ಹಾಕಿ, ಹಲ್ಲೆಗೊಳಗಾದವರಿಗೆ ಪುನಃ ಹೊಡೆದರು. ಪೋಲೀಸರು ದಾಳಿಕೋರರ ಮೈಯನ್ನು ಸಹ ಮುಟ್ಟಲಿಲ್ಲ. ಅವರು ಬಾಗಿಲನ್ನು ಮುಚ್ಚಿ ದಾಳಿಕೋರರನ್ನು ಹೊರಗೆ ಹೋಗಲು ಹೇಳಿದರು. ನಮ್ಮ ಇನ್ನೊಬ್ಬ ವರದಿಗಾರ ಮತ್ತು ಕ್ಯಾಮರಾಮೆನ್ ಬಂದರು. ನಾನು ಅವರನ್ನು ಹಿಂಬಾಲಿಸಿದೆ. ಪೋಲೀಸರು ಯಾರನ್ನೂ ಬಂಧಿಸುವ ಪ್ರಯತ್ನ ಮಾಡಲಿಲ್ಲ.

**ಶರಣ್ (ಸಹಾಯ ಟಿವಿಯ ವರದಿಗಾರ)**

ಸುಭಾಷ್ ಪಡೀಲ್ ಕರೆ ಮಾಡಿ "ನಾವು ಪಡೀಲ್‌ನಲ್ಲಿ ಪ್ರತಿಭಟನೆಯನ್ನು ಆಯೋಜಿಸಿದ್ದೇವೆ. ನೀವು ಆದಷ್ಟು ಬೇಗ ಬನ್ನಿ" ಎಂದು ಹೇಳಿದಾಗ ನಾನು ನನ್ನ ತಂಡದೊಂದಿಗೆ ವರದಿಗಾರನಾಗಿ ಹೋದೆವು. ಪೋಲೀಸರಿಗೆ ಮಾಹಿತಿ ತಿಳಿಸಿರುವುದಾಗಿಯೂ ಸುಭಾಷ್ ಪಡೀಲ್ ತಿಳಿಸಿದ್ದ. ನಾನು ಈ ತರ ಘಟನೆ ನಡೆಯುತ್ತಿದೆ ಅಂತ ತಿಳಿದಿದ್ದರೆ ಖಂಡಿತವಾಗಿಯೂ ಪೋಲೀಸ್ ಇಲಾಖೆಗೆ ಮತ್ತು ಮಾಹಿತಿ ಇಲಾಖೆಗೆ ತಿಳಿಸುತ್ತಿದ್ದೆ. ನಿಜವಾಗಿ ಅವರಿಗೂ ಹಲ್ಲೆ ಮಾಡಬೇಕೆಂಬ ಇರಾದೆ ಇರಲಿಲ್ಲ. ಅವರಿಗೆ ಪೋಲೀಸರಿಗೆ ಮತ್ತು ಮಾಧ್ಯಮದವರಿಗೆ , ಸಾಮಾನ್ಯವಾಗಿ ಹೇಗೆ ಇಂಥ ಪಾರ್ಟಿಗಳು ನಡೆಯುತ್ತದೆ ಮತ್ತು ಏನೆಲ್ಲಾ ಪಾರ್ಟಿಗಳಲ್ಲಿ ನಡೆಯುತ್ತದೆ ಎಂದು ತೋರಿಸಬೇಕಿತ್ತು. ಈ ಸ್ಥಳವು ಎರಡು ದಿವಸಕ್ಕೆ ಗೊತ್ತುಪಡಿಸಲಾಗಿತ್ತು. ಮತ್ತು ಮೂವತ್ತು ಜನರಿಗೆ ಬೇಕಾಗುವಷ್ಟು ಊಟ ತಿಂಡಿಗೆ ಆರ್ಡರ್ ಮಾಡಲಾಗಿತ್ತು. ಅವರು ಸ್ವಲ್ಪ ಹೊತ್ತು ಕಾದಿದ್ದರೆ ಡ್ರಗ್ ಸಹ ಬರುತ್ತಿತ್ತು.

ಸುಭಾಷ್ ಪಡೀಲ್ ನನ್ನಲ್ಲಿ ಹೇಳಿದ್ದು "ಅದೊಂದು ಸಾರ್ವಜನಿಕ ಪ್ರತಿಭಟನೆ. ಅದನ್ನು ನಾವು ಚಿತ್ರೀಕರಿಸಬೇಕಿತ್ತು (ವರದಿ ಮಾಡಬೇಕಿತ್ತು)". ಹಿಂದು ಹುಡುಗಿಯರು ಮತ್ತು ಮುಸ್ಲಿಂ ಹುಡುಗರು ಸೇರಿದ್ದರಿಂದ ಮತ್ತು ಆಲ್ಕೋಹಾಲ್ ಇದ್ದುದ್ದರಿಂದ ಆ ಪಾರ್ಟಿಯ ಮೇಲೆ ದಾಳಿ ನಡೆಯಬಹುದೆಂದು ನಾನು ಆ ಮನೆಗೆ ಮುಟ್ಟಿದಾಗ ತಿಳಿಯಿತು.

ಉತ್ತರಭಾರತದ ಹುಡುಗಿಯರು ಇತ್ತೀಚಿನ ದಿನಗಳಲ್ಲಿ ಇಲ್ಲಿಗೆ ಬರುವುದು ಜಾಸ್ತಿಯಾಗಿದ್ದು, ಅವರು ದಕ್ಷಿಣ ಭಾರತದ ಹುಡುಗಿಯರೊಂದಿಗೆ ಬೆರೆತು ಅವರನ್ನೇ ಅನುಕರಣೆ ಮಾಡಲು ಪ್ರಾರಂಭಿಸಿದ್ದರಲ್ಲದೆ, ಹಾಳಾಗುತ್ತಿದ್ದರು. ಸುಭಾಷ್, ಗಣೇಶ್ ಮತ್ತು ಶರದ್ ಇವರೆಲ್ಲರೂ ನನಗೆ ತಿಳಿದ ಮಟ್ಟಿಗೆ ಹಿಂದೂ ಜಾಗರಣ ವೇದಿಕೆ ಯವರು. ಉಳಿದವರನ್ನು ನಾನು ಈ ಹಿಂದೆ ನೋಡಿಯೂ ಇಲ್ಲ ಮತ್ತು ಅವರ ಬಗ್ಗೆ ಏನೂ ಗೊತ್ತಿಲ್ಲ. ಸುಭಾಷ್, ಶರದ್ ಮತ್ತು ಮುನ್ನ ಈಗ ಹಿಂದೂ ಜಾಗರಣ ವೇದಿಕೆಯಲ್ಲಿದ್ದು ಈ ಮೊದಲು ಬಜರಂಗದಳ ಮತ್ತು ಶ್ರೀ ರಾಮಸೇನೆಯಲ್ಲಿದ್ದವರು.

ಪೋಲೀಸರು ನನ್ನ ಮೇಲೆ ಸೆಕ್ಷನ್ ೧೮೮(ಅಪರಾಧ ನಡೆಯುತ್ತಿರಬೇಕಾದರೆ ಪೋಲೀಸರಿಗೆ ತಿಳಿಸಬೇಕಾಗಿತ್ತು) ಕೇಸ್ ಹಾಕಿದ್ದಾರೆ. ಸುಭಾಷ್ ಪಡೀಲ್ ಪೋಲೀಸರಿಗೆ ತಿಳಿಸಿದ್ದೇನೆಂದು ಹೇಳಿರುವುದರಿಂದ ನಾನು ಮಾಹಿತಿ ಕೊಟ್ಟಿರಲಿಲ್ಲ.

**ಸದಾಶಿವದಾಸ್ (ಸಹಾಯ ಟಿವಿಯ ಎಂ.ಡಿ)**

ಘಟನೆಯ ಬಗ್ಗೆ ಎರಡು ವಿಭಿನ್ನವಾದ ಅಭಿಪ್ರಾಯ ವ್ಯಕ್ತವಾಗಿದೆ. ಒಂದು ಅಭಿಪ್ರಾಯ ದಾಳಿಗೊಳಗಾದ ಹುಡುಗಿಯ ಪರವಾಗಿದ್ದು "ಹುಡುಗಿಯ ನಡತೆ ಮತ್ತು ಧರಿಸುವ ಬಟ್ಟೆಯ ಬಗ್ಗೆ ಪ್ರಶ್ನಿಸಲು ನೀವು ಯಾರು?" ಎನ್ನುವಂಥದ್ದು. ಇದಕ್ಕೆ ವಿಭಿನ್ನವಾಗಿ ಮಹಿಳಾ ಜಾಗೃತಿ ವೇದಿಕೆಯ ಪ್ರಸನ್ನ ರವಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಇಂಥಹ ಘಟನೆಗಳನ್ನು ತಡೆಯಲು ಮಕ್ಕಳ ತಂದೆ ತಾಯಂದಿರು, ಅವರ ಬಟ್ಟೆ ಮತ್ತು ನಡತೆಯ ಬಗ್ಗೆ ಕಟ್ಟುನಿಟ್ಟಿನಿಂದಿರಬೇಕು ಎಂದು ಅವರು ಹೇಳುತ್ತಾರೆ. ನನ್ನ ಪ್ರಕಾರ ಗಣೇಶ್ ಅಲಿಯಾಸ್ ಮುನ್ನ, ಕಪ್ಪು ಟೀ–ಶರ್ಟ್ ಹಾಕಿದವ, ದೊಡ್ಡ ತಪ್ಪು ಮಾಡಿದ್ದಾನೆ. ಏಕೆಂದರೆ ಅವನು ಹೇಯವಾಗಿ ಹೊಡೆದು ಹುಡುಗಿಯರ ಮೈಮೇಲೆ ಎಲ್ಲೆಂದರಲ್ಲಿ ಕೈ ಹಾಕಿದ್ದಾನೆ. ಅಂಥ ಜನರನ್ನು ಗಡೀಪಾರು ಮಾಡಬೇಕು.

ನಾನು ವೈಯಕ್ತಿಕವಾಗಿ ಭಾವಿಸುವುದೇನೆಂದರೆ, ಹೆತ್ತವರು ತಮ್ಮ ಮಕ್ಕಳು ಪಾರ್ಟಿಗೆ ಹೋಗಿ ಬರುವ ಬಗ್ಗೆ ಮುನ್ನೆಚ್ಚರಿಕೆಯನ್ನು ವಹಿಸಬೇಕು. ಅವರು ಏನು ಬಯಸುತ್ತಿದ್ದಾರೆ ಅವರೊಂದಿಗೆ ಯಾರ್ಯಾರು ಇದ್ದಾರೆ ಎನ್ನುವುದು ಮತ್ತು ಅವರೇ ಸ್ವಲ್ಪ ಮಟ್ಟಿಗೆ ಹೆದರಿಕೆಯನ್ನು ಬೆಳೆಸಬೇಕು. ಹೆತ್ತವರ ಪಾತ್ರ ಪ್ರಾಥಮಿಕವಾದುದು, ಆದುದರಿಂದ ಇಂಥಹ ಘಟನೆಗಳನ್ನೂ ತಡೆಯಬಹುದು. ವಸ್ತ್ರ ಸಂಹಿತೆ ಅನ್ನುವುದು ಬಹಳ ಮುಖ್ಯವಾದುದು ಮತ್ತು ಅದು ಹುಡುಗ ಹುಡುಗಿಯರು ಇಬ್ಬರಿಗೂ ಅನ್ವಯಿಸುತ್ತದೆ. ಉದಾಹರಣೆಗೆ ಹುಡುಗರ ಅಗಲವಾದ ಕುತ್ತಿಗೆಯ ಟೀ ಶರ್ಟ್ ಜನರನ್ನು ಆಕರ್ಷಿಸುವಂತಿರುತ್ತದೆ. ಬಟ್ಟೆಯು ಇನ್ನೊಬ್ಬರನ್ನು ಉದ್ರೇಕಿಸುವಂತಿರಬಾರದು. ಅದರಿಂದಾಗಿ ಚೂಡಿದಾರ್, ಸಲ್ವಾರ್ ಕಮೀಜ್ ನಂತಹ ಬಟ್ಟೆಯನ್ನೇ ತೊಡಬೇಕು.

ರೆಸ್ಟೋರೆಂಟ್‌ಗಳಲ್ಲಿ ಹುಟ್ಟಿದ ಹಬ್ಬವನ್ನು ಆಚರಿಸುವುದಾದರೆ ಆಗಬಹುದು. ಆದರೆ ಹೋಂಸ್ಟೇಯಂತಹ ಮರೆಯಾದ ಸ್ಥಳಗಳಲ್ಲಿ ಆಚರಿಸಬಾರದು. ಈ ಬರ್ತ್‌ಡೇ  ಪಾರ್ಟಿಯಲ್ಲಿ ಕೇಕ್ ಇರದೆ ಬಿಯರ್ ಬಾಟಲ್‌ಗಳಿದ್ದವು. ಅದರೊಟ್ಟಿಗೆ ಅಲ್ಲಿಗೆ ಹೋದ ಹುಡುಗಿಯರು ತಾವು ತೊಟ್ಟಿದ್ದ ಯುನಿಫಾರ್ಮ್‌ನ್ನು ಬದಲಾಯಿಸಿ 'ಪಾರ್ಟಿವೇರ್' (ಪಾರ್ಟಿಗೆ ಹಾಕುವಂತಹ ಬಟ್ಟೆ)ಯನ್ನು ಧರಿಸಿದ್ದರು. ಕಪ್ಪು ಟೀ ಶರ್ಟ್ ಧರಿಸಿದ್ದ ಹಿಂದು ಜಾಗರಣ ವೇದಿಕೆಯ ಒಬ್ಬ ಯುವಕ ಕುಡಿದ ಮತ್ತಿನಲ್ಲಿದ್ದ, ಅವನನ್ನು ಇನ್ಸ್‌ಪೆಕ್ಟರ್ ರವೀಶ್ ನಾಯಕ್ ಅಲ್ಲಿಂದ ಪಾರು ಮಾಡಿದ್ದರು(ನಮ್ಮ ದೃಶ್ಯದಲ್ಲಿ ತೋರಿಸಿದ ಹಾಗೆ) ನನಗೆ ಅನ್ನಿಸಿದ್ದು ಹಿಂದೂ ಜಾಗರಣ ವೇದಿಕೆ ಕಾರ್ಯಕರ್ತರು ತಮ್ಮೊಂದಿಗೆ ಅವರ ಮಹಿಳಾ ಕಾರ್ಯಕರ್ತರನ್ನು ಕರೆದುಕೊಂಡು ಹೋಗಬೇಕಾಗಿತ್ತು ಮತ್ತು ಮನೆಯಲ್ಲಿದ್ದವರನ್ನೂ ಕೂಡಿಹಾಕಿ ಪೋಲೀಸರಿಗೆ ತಿಳಿಸಬೇಕಾಗಿತ್ತು. ಬಹುತೇಕರಿಗೆ ಪೋಲೀಸರ ಮೇಲೆ ನಂಬಿಕೆ ಇಲ್ಲ, ಆದುದರಿಂದ  ಹಿಂದೂ ಜಾಗರಣ ವೇದಿಕೆ ಕಾರ್ಯಕರ್ತರು ಈ ವಿಷಯವನ್ನು ಕೈಗೆತ್ತಿಕೊಂಡದ್ದು. ನಂತರ ಪೋಲೀಸರು ಧಾವಿಸಿದ್ದು. ಅವರು ಪೋಲೀಸರು ಬಂದ ನಂತರ ಅವರನ್ನು ಹಸ್ತಾಂತರಿಸಿ, ಅಲ್ಲಿಯೇ ಇರಬೇಕಾಗಿತ್ತು. ಏಕೆಂದರೆ ಪೋಲೀಸರು ಕಾನೂನು ಕ್ರಮ ಕೈಗೊಳ್ಳುವ ಬಗ್ಗೆ ನಂಬಿಕೆ ಇರಲಿಲ್ಲ.

ಇಂತಹ ಬರ್ತ್‌ಡೇ ಪಾರ್ಟಿಗಳು ಮಂಗಳೂರಿನಲ್ಲಿ ಆಗಾಗ ನಡೆಯುತ್ತಿರುತ್ತದೆ. ಲೈಸೆನ್ಸ್ ರಹಿತ ಹೋಂಸ್ಟೇಗಳಲ್ಲಿ ನಡೆಯುವ ಪಾರ್ಟಿಗಳನ್ನು ಪೋಲೀಸರು ಬೆಂಬಲಿಸುತ್ತಾರೆ. ಏಕೆಂದರೆ ಅವರ ಮಧ್ಯೆ 'ಅಂಡರ್ ಸ್ಟ್ಯಾಂಡಿಂಗ್' ಇರುತ್ತದೆ. ಹಿಂದೂ ಜಾಗರಣ ವೇದಿಕೆ ಕಾರ್ಯಕರ್ತರು ಪಾರ್ಟಿಯಲ್ಲಿ ಇರದೇ ಹೋಗಿದ್ದರೆ, ಪಾರ್ಟಿಯಲ್ಲಿ ಭಾಗವಹಿಸಿದವರಲ್ಲಿ ಲೋಕಾಯುಕ್ತ ಪೋಲೀಸರ ಮಗಳೂ ಇದ್ದುದರಿಂದ ಪಾರ್ಟಿಯಲ್ಲಿ ಪಾಲ್ಗೊಂಡವರ ಮೇಲೆ ಯಾವುದೇ ಕ್ರಮ ತೆಗೆದುಕೊಳ್ಳಲು ಸಾಧ್ಯತೆ ಇರಲಿಲ್ಲ. ಪೋಲೀಸರು ಬಂದಾಗ. ದಾಳಿಕೋರರು ದಾಳಿಯನ್ನು ನಿಲ್ಲಿಸಿದರು. ದಾಳಿಕೋರರನ್ನು ಕಂಡು ಹಿಡಿಯುವಲ್ಲಿ ನಮ್ಮ ವೀಡಿಯೋ ಸಹಾಯವಾಗಿದೆ.

## ಹಿಂದುತ್ವ ಪ್ರತಿಪಾದಿಸುವ ಸಂಘಟನೆಗಳ ಪ್ರತಿಕ್ರಿಯೆ

ದಾಳಿ ಮಾಡಿದವರು ಹಿಂದೂ ಜಾಗರಣ ವೇದಿಕೆಯವರಾದರೂ ಸಂಘಪರಿವಾರದ ಇತರ ಸಂಘಟನೆಗಳು ಈ ದಾಳಿಯ ಉದ್ದೇಶವನ್ನು ಬೆಂಬಲಿಸಿದುದನ್ನು ಅಗತ್ಯವಾಗಿ ಗಮನಿಸಬೇಕು. ಈ ಭಾಗದಲ್ಲಿ ದಾಳಿಗೆ ಸಂಬಂಧಿಸಿದಂತೆ ನಾವು ಸಂಘಪರಿವಾರಕ್ಕೆ ಸೇರಿದ ನಾಲ್ಕು ಸಂಘಟನೆಗಳ ಅಭಿಪ್ರಾಯ ದಾಖಲಿಸಿಕೊಂಡಿದ್ದೇವೆ.

### ಹಿಂದೂ ಜಾಗರಣ ವೇದಿಕೆ

ನಾವು ಹಿಂದೂ ಜಾಗರಣ ವೇದಿಕೆ ಜಿಲ್ಲಾ ಸಂಚಾಲಕರಾದ ಸತ್ಯಜಿತ್ ಸುರತ್ಕಲ್‌ರನ್ನು ಸಂಪರ್ಕಿಸಲು ಪ್ರಯತ್ನಿಸಿದರೂ ನಮ್ಮ ಭೇಟಿಯ ಬೇಡಿಕೆಗೆ ಸ್ಪಂದಿಸಲಿಲ್ಲ. ಹಿಂದೂ ಜಾಗರಣ ವೇದಿಕೆ ರಾಜ್ಯ ನಾಯಕನಾದ ಜಗದೀಶ ಕಾರಂತ ಈ ದಾಳಿಯ ಬಗ್ಗೆ ಹಲವಾರು ಹೇಳಿಕೆಯನ್ನು ನೀಡಿದ್ದರಲ್ಲದೆ, ಅಗಸ್ಟ್ ೧, ೨೦೧೨ ರಂದು ಟಿವಿಗೆ ಸಂದರ್ಶವನ್ನೂ ನೀಡಿದ್ದರು.

ಈ ಸಂದರ್ಶನದಲ್ಲಿ ಅವರ ಹೇಳಿಕೆ ಹೀಗೆ ಇತ್ತು, “ಇಂತಹ ಘಟನೆಗಳು ಮಂಗಳೂರಿನಲ್ಲಿ ಆಗಾಗ ನಡೆಯುತ್ತಿರುತ್ತದೆ. ಮಂಗಳೂರು ಡ್ರಗ್ ಮಾಫಿಯಾದ ಹಿಡಿತದಲ್ಲಿದ್ದರೆ ಜಿಲ್ಲಾಡಳಿತ ಅವರ ಕಪಿ ಮುಷ್ಠಿಯಲ್ಲಿದೆ. ಪಡೀಲ್‌ನ ಜನತೆ ಹಲವು ಬಾರಿ ಕಂಪ್ಲೇಟ್ ಮಾಡಿದರೂ ಜಿಲ್ಲಾಡಳಿತ ಯಾವುದೇ ಕ್ರಮ ಕೈಗೊಂಡಿಲ್ಲ. ಈ ದಾಳಿಯನ್ನು ಖಂಡಿಸುವವರು ಗಮನಿಸಬೇಕು. ಇಂತಹವರಿಂದಾಗಿ ಮಂಗಳೂರಿನ ಬೀದಿಗಳಲ್ಲಿ ಹೋಗುವ ಸಭ್ಯ ಯುವತಿಯರೂ ಸಹ ಡಿಸ್ಕೋತೆಕ್‌ಗಳಿಗೆ ಹೋಗಿ ಡ್ಯಾನ್ಸ್ ಮಾಡುತ್ತಾರೆಂದು ಜನ ತಿಳಿಯುತ್ತಾರೆ. ಇದರಿಂದಾಗಿ ಪಡೀಲ್ ಜನತೆ ಸಿಟ್ಟಿನಿಂದಿದ್ದು ಅವತ್ತು ಅವರ ಸಿಟ್ಟು ಈ ರೀತಿಯಾಗಿ ಪ್ರಕಟಿಸಲ್ಪಟ್ಟಿದೆ. ಅದರ ನಾಯಕತ್ವವನ್ನು ಪಡೀಲ್‌ನವನೇ ಆದ ಹಿಂದೂ ಜಾಗರಣ ವೇದಿಕೆ ಕಾರ್ಯಕರ್ತ ಸುಭಾಷ್ ಪಡೀಲ್ ವಹಿಸಿಕೊಂಡಿದ್ದಾನೆ ಅನ್ನುವುದು ಸತ್ಯ. ಮಂಗಳೂರಿನ ಜನತೆ ಕಾನೂನು ಕೈಗೆತ್ತಿಕೊಳ್ಳುವ ಸ್ಥಿತಿಯಲ್ಲಿದ್ದಾರೆ ಎನ್ನುವುದು ದುರಂತ. ಕಾನೂನು ಕೈಗೆತ್ತಿಕೊಳ್ಳುವುದು ಸರಿ ಎನ್ನಲು ನಾವ್ಯಾರು ಸರಿಯಾದ ವ್ಯಕ್ತಿಗಳಲ್ಲ. ಅದನ್ನು ಸ್ಥಳೀಯ ಜನರು ತೀರ್ಮಾನಿಸಬೇಕು. ಆ ಘಟನೆಯಲ್ಲಿ ಏನು ನಡೆಯುತ್ತಿತ್ತೆಂದರೆ ಸಂಸ್ಕೃತಿಯ ಹರಣವಾಗುತಿತ್ತು. ಈ ಅನಾಗರಿಕ, ಸಂಸ್ಕೃತಿಹೀನ ನಡುವಳಿಕೆಯನ್ನು ಅಲ್ಲಿಯ ಸ್ಥಳೀಯ ಜನರೇ ಪ್ರತಿಭಟಿಸುತ್ತಿದ್ದರು. ಈ ಘಟನೆ "ಕಾನೂನನ್ನು ಕೈಗೆತ್ತಿಗೊಂಡಿರುವುದು" ಆಗಿರುವುದಿಲ್ಲ. ಬದಲಾಗಿ ಪೋಲೀಸರ ವೈಫಲ್ಯದಿಂದಾದ ಪಡೀಲ್ ಜನತೆಯ ರೋಷ. ಸೀಮಂತ್ ಕುಮಾರ್ (ಕಮೀಷನರ್) ಮತ್ತು ಇಡೀ ಜಿಲ್ಲಾಡಳಿತ ಈ ಘಟನೆಗೆ ಹೊಣೆ. ಅಲ್ಲಿ ಹಿಂದೂ ಜಾಗರಣ ವೇದಿಕೆಯ ಯಾವುದೇ ಬ್ಯಾನರ್ ಇರಲಿಲ್ಲ ಮತ್ತು ಹಿಂದೂ ಜಾಗರಣ ವೇದಿಕೆ ಈ ಘಟನೆಗೆ ಹೊಣೆಯಲ್ಲ. ರೊಚ್ಚಿಗೆದ್ದದ್ದು ಸ್ಥಳೀಯ ಜನ. ಅಲ್ಲಿ ನೂರೈವತ್ತು ಜನ ಮಹಿಳೆಯರಿರು ಮತ್ತು ಹಿಂದೂ ಜಾಗರಣ ವೇದಿಕೆಗೆ ಯಾವುದೇ ಮಹಿಳಾ ಕಾರ್ಯಕರ್ತರಿಲ್ಲ. ದಾಳಿ ಮಾಡಿದವರು ಹಿಂದೂ ಜಾಗರಣ ವೇದಿಕೆ ಸದಸ್ಯರೆಂದು ನನಗೆ ಯಾವುದೇ ಮಾಹಿತಿ ಸಿಗಲಿಲ್ಲ. ಟಿವಿಯಲ್ಲಿ ಕಾಣುತ್ತಿರುವ ದೃಶ್ಯಗಳು ಅದು ಸತ್ಯವಾದುದೋ ಅಥವಾ ಕೃತಕವೋ ಎಂದು ನನಗೆ ಗೊತ್ತಿಲ್ಲ”.

**ಪ್ರಸನ್ನ ರವಿ, ಜಾಗೃತಿ ಮಹಿಳಾ ವೇದಿಕೆ (ಬರ್ತ್‌ಡೇ ಪಾರ್ಟಿ ದಾಳಿಯನ್ನು ಮಾಧ್ಯಮದಲ್ಲಿ ಬಿಂಬಿಸಿದ ವ್ಯಕ್ತಿ)**

(ಪ್ರಸನ್ನ ರವಿ ನಮ್ಮಲ್ಲಿ ಬಿಜೆಪಿಯ ಮಂಗಳೂರಿನ ಮುಖ್ಯ ಕಛೇರಿಯಲ್ಲಿ ಭೇಟಿಯಾಗುವರೆಂದು ತಿಳಿಸಿದರು.) ಹೋಂಸ್ಟೇ ದಾಳಿಯ ನಂತರ ಘಟನೆಯ ಕುರಿತು ವ್ಯಕ್ತಿಯ ವಿರುದ್ಧ ಮಾತನಾಡಲು ಈ ವೇದಿಕೆ ಅರ್ಥಪೂರ್ಣವಾಗಿದೆ. ನನ್ನ ಪ್ರಕಾರ ಹಲ್ಲೆ ಮಾಡಿದ್ದು ತಪ್ಪು. ಆದರೆ ಅದನ್ನು ಸ್ವಲ್ಪ ವಿಶಾಲ ದೃಷ್ಟಿಯಿಂದ ನೋಡಬೇಕಾಗುತ್ತದೆ ಮತ್ತು ಏನೆಲ್ಲಾ ಕಾರಣಗಳಿಂದ ಈ ಘಟನೆ ನಡೆದಿದೆ ಅನ್ನುವುದನ್ನು ಅರ್ಥಮಾಡಬೇಕು. ಇಂಥಹ ಅನೇಕ ಪ್ರಕರಣಗಳೂ, ಪಾರ್ಟಿಯ ಮೇಲೆ ದಾಳಿಯಾದ ಕಡೆಯಲ್ಲೆಲ್ಲಾ ಡ್ರಗ್ ಮಾಫಿಯಾ, ಹುಡುಗಿಯ ಮಾನಭಂಗ ಮತ್ತು ಅತ್ಯಾಚಾರ ನಡೆದಿದೆ ಎನ್ನುವುದಕ್ಕೆ ನಮ್ಮಲ್ಲಿ ಪುರಾವೆ ಇದೆ. ಮಾಧ್ಯಮಗಳು ಈ ತೆರನಾದ ಇತರ ಪ್ರಕರಣಗಳನ್ನು ಕಡೆಗಣಿಸಿದೆ. ಏಕೆಂದರೆ ಅದರಲ್ಲಿ (ಸಿಲುಕಿದವರು) ಯಾರೋ ಪಾಶ್ಚಿಮಾತ್ಯ ಸಂಸ್ಕೃತಿಯನ್ನು ಮೈಗೂಡಿಸಿದವರಲ್ಲ. ಅವರೆಲ್ಲರೂ ಬಡ ಕುಟುಂಬದ ಸಾಮಾನ್ಯ ಮಹಿಳೆಯರು.

ಹುಡುಗಿಯರನ್ನು ಹೊಡೆದಿರುವುದು ತಪ್ಪು ಮಾತ್ರವಲ್ಲ ಪಾರ್ಟಿ ಮಾಡಿರುವುದು ತಪ್ಪು. ಹುಡುಗಿಯರು ಆ ರಾತ್ರಿ ಅಲ್ಲಿ ತಂಗಿದ್ದರೆ ಅವರ ಸ್ಥಿತಿ ಏನಾಗುತ್ತಿತ್ತು ಅನ್ನುವುದನ್ನು ಊಹಿಸಿ.

ಆ ಹೊತ್ತು ಹೋಂಸ್ಟೇಯಲ್ಲಿ ನಡೆದಿರುವುದು ಬರ್ತ್‌ಡೇ ಪಾರ್ಟಿ ಅಲ್ಲ. ಇಬ್ಬರು ಹುಡುಗಿಯರು ಪಿಯುಸಿಯಲ್ಲಿ ಕಲಿಯುತ್ತಿದ್ದವರು. ಅವರು ಯುನಿಫಾರ್ಮ್‌ನಲ್ಲಿ ಅಲ್ಲಿಗೆ ಹೋಗಿ ಪಾರ್ಟಿವೇರನ್ನು ತೊಟ್ಟಿದ್ದಾರೆ. ಇಬ್ಬರು ಹುಡುಗರು ಪ್ರೌಢರಾಗಿದ್ದಾರೆ. ಮತ್ತು ಅವರಿಬ್ಬರೂ ಡಿ.ಜೆ.ಗಳು. ಆದರೆ ಮಾಧ್ಯಮದಲ್ಲಿ ಅವರನ್ನು ವಿದ್ಯಾರ್ಥಿಗಳೆಂದು ಹೇಳಿದ್ದಾರೆ. ಒಂದು ಹುಡುಗನ ತಾಯಿಯ ಮೇಲೆ ಪ್ರಕರಣವಿದ್ದು ಅವನು ಒಳ್ಳೆಯ ಕುಟುಂಬದವನಲ್ಲ. ಪಾರ್ಟಿಯಲ್ಲಿ ಎಂಟು ಜನ ಹುಡುಗರಿದ್ದರೂ, ಮಾಧ್ಯಮದೆದುರು ಕೇವಲ ಎರಡೇ ಜನ ಬಂದದ್ಯಾಕೆ?

ಪಾರ್ಟಿ ಮಾಡಲು ರೆಸ್ಟೋರೆಂಟ್‌ಗಳು ಇರುವಾಗ, ಬೆಡ್ ರೂಮ್‌ಗಳಿರುವ ಹೋಂಸ್ಟೇ ಯಾಕೆ? ಈ ಪಾರ್ಟಿ ವಿದ್ಯಾರ್ಥಿಗಳ ಪಾರ್ಟಿಯಾಗಿರದೆ ಕೇವಲ ಮೋಜಿನ ಪಾರ್ಟಿಯಾಗಿದೆ. ಇದು ಮಕ್ಕಳ ಸಿಡಿ ಮಾಡಲು ಮಾಡಿದ ಪಾರ್ಟಿ ಆಗಿದೆ. ಅಲ್ಲಿ ಕೇಕ್ ಇರಲೇ ಇಲ್ಲ ಮತ್ತು ಫ್ರಿಡ್ಜ್ ತುಂಬಾ ಆಲ್ಕೋಹಾಲ್ (ಮದ್ಯ) ಇತ್ತು. ಹುಡುಗಿಯರು ವಿದ್ಯಾರ್ಥಿನಿಗಳಾದರೆ, ಹುಡುಗರು ವಿದ್ಯಾರ್ಥಿಗಳಲ್ಲ. ಅವರು ಇವೆಂಟ್ ಮ್ಯಾನೇಜರ್(ಡಿ.ಜೆ) ಆಗಿರುವಾಗ ಹೇಗೆ ಈ ಹುಡುಗರಿಗೆ ಹುಡುಗಿಯರ ಪರಿಚಯವಾಗಿರುವುದು ಎಂದು ಯಾರಾದರೂ ಕೇಳಬೇಕು. ದಾಳಿ ನಡೆಯದೇ ಹೋಗಿದ್ದರೆ ಅದಕ್ಕಿಂತ ಕೆಟ್ಟ ಘಟನೆಗಳು ಅಲ್ಲಿ ನಡೆಯುತ್ತಿತ್ತು. ಏಕೆಂದರೆ ಹೋಂಸ್ಟೇ ಎರಡು ದಿನಗಳಿಗೆ ಬುಕ್ ಆಗಿತ್ತು. ಹಾಗೇನಾದರೂ ನಡೆದಿದ್ದರೆ ಅದಕ್ಕೆ ಯಾರು ಹೊಣೆ? ಯಾರಿಗೂ ಹುಡುಗಿಯರ ಮೇಲೆ ಹಲ್ಲೆ ಮಾಡುವ ಹಕ್ಕಿಲ್ಲ. ಆದರೆ ನಂತರದ ಪರಿಸ್ಥಿತಿ ಏನಾಗುತ್ತಿತ್ತು? ಕುಡಿದ ಮತ್ತಿನಲ್ಲಿರುವ ಹುಡುಗರನ್ನು ನಿಯಂತ್ರಿಸಲು ಸಾಧ್ಯವಿಲ್ಲ. ಮಕ್ಕಳು ಹೊರಗೆ ಏನು ಮಾಡುತ್ತಾರೆಂದು ಹೆತ್ತವರಿಗೆ ಗೊತ್ತಿರುವುದಿಲ್ಲ. ಜನರು ದಾಳಿಯ ಬಗ್ಗೆ ಮಾತ್ರವಲ್ಲ, ರಾತ್ರಿ ಪಾರ್ಟಿಗಳಲ್ಲಿ ಸಾಮಾನ್ಯವಾಗಿರುವ ಡ್ರಗ್ ಮತ್ತು ಮದ್ಯದ ಬಗ್ಗೆ ಸಹ ಮಾತನಾಡಬೇಕು.

ರಾತ್ರಿ ಪಾರ್ಟಿಗಳಿಗೆ ಹುಡುಗಿಯರು ಯಾಕೆ ಹೋಗಬೇಕು? ಅವರಲ್ಲಿ ಅನೇಕರು ಹೊಸಬರು. ಸುಲಭದಲ್ಲಿ ಹಾಳಾಗುತ್ತಾರೆ. ಮಂಗಳೂರು ಕಲಿಯಲು ಹುಡುಗಿಯರಿಗೆ ಸುರಕ್ಷಿತವಾಗಿದೆ ಮತ್ತು ಅವರು ದಾಳಿಗೊಳಗಾಗಲು ಸಾಧ್ಯತೆ ಇಲ್ಲ. ಇಲ್ಲಿ ತಡರಾತ್ರಿಯವರೆಗೆ ಕೆಲಸ ಮಾಡುವ ಅದೆಷ್ಟು ಹೆಂಗಸರು ಸುರಕ್ಷಿತ ಭಾವನೆಯಲ್ಲಿದ್ದಾರೆ. ಇಂಥಹ ಘಟನೆಗಳಿಂದ ವ್ಯಾಪಾರಕ್ಕೆ ಏನೂ ಪರಿಣಾಮ ಬೀರುವುದಿಲ್ಲ. ಮಹಿಳೆಯರು ರಾತ್ರಿ ಮೋಜಿಗಾಗಿ ಪಾರ್ಟಿಯಲ್ಲಿ ಪಾಲ್ಗೊಳ್ಳಲು ಹೋದಾಗ, ಇಂತಹ ಪಾರ್ಟಿಗಳ ಬಗ್ಗೆ ಯುವಕರಿಗೆ ತಿಳಿದು ದಾಳಿ ಮಾಡುತ್ತಾರೆ. ಇಲ್ಲಿ ಅದೆಷ್ಟು ಪಾರ್ಟಿಗಳು ನಡೆಯುತ್ತದೆ. ಆದರೆ ಅದ್ಯಾವುದಕ್ಕೂ ದಾಳಿಯಾಗುವುದೇ ಇಲ್ಲ. ಈ ಮೋಜಿನ ಪಾರ್ಟಿಗಳೆಲ್ಲ ಮಾದಕ ವಸ್ತು ಮತ್ತು ಬಲತ್ಕಾರಕ್ಕಾಗಿ (ಲೈಂಗಿಕ) ನಡೆಯುತ್ತದೆ. ಇದರ ಬಗ್ಗೆ ಮಾಧ್ಯಮಗಳು ಬೆಳಕು ಚೆಲ್ಲುತ್ತಿಲ್ಲ ಏಕೆ? ಅಂತಹ ಸ್ಥಳಕ್ಕೆ ಲೈಸನ್ಸ್ ಇದೆಯೇ ಎನ್ನುವ ಬಗ್ಗೆ ತನಿಖೆಯಾಗಬೇಕು. ರಾಷ್ಟ್ರೀಯ ಮಹಿಳಾ ಆಯೋಗವು ಈ ಬಗ್ಗೆ ತನಿಖೆ ನಡೆಸಲು ಆಸಕ್ತಿ ವಹಿಸಿಲ್ಲ.

ಅದು ಒಂದು ಪಾರ್ಟಿಯಾಗಿದ್ದರೆ, ಹುಡುಗಿಯರು ಏಕೆ ಅಶ್ಲೀಲ ಬಟ್ಟೆಗಳನ್ನು ತೊಟ್ಟಿದ್ದು? ಈ ಹುಡುಗಿಯರ ಸಿ.ಡಿ ಮಾಡಿ ನಂತರ ಅವರನ್ನು ಬ್ಲಾಕ್‌ಮೇಲ್ ಮಾಡಿದ್ದರೆ? ಹುಡುಗಿಯನ್ನು ಹೊಡೆದಿದ್ದು ಯಾವುದೇ ಕಾರಣಕ್ಕೂ ತಪ್ಪೇ. ಆದರೆ ಅವರನ್ನು ಅತ್ಯಾಚಾರ, ಡ್ರಗ್ಸ್ ಮತ್ತು ಲೈಂಗಿಕ ಪೀಡನೆಯಿಂದ ಹುಡುಗರು (ದಾಳಿ ಮಾಡಿದ) ರಕ್ಷಣೆ ಮಾಡಬಯಸಿದ್ದರು. ಆ ಕಾರಣಕ್ಕಾಗಿಯೇ ಮಾಧ್ಯಮದವರನ್ನು ಕರೆದುಕೊಂಡು ಹೋದದ್ದು. ಅವರ ಉದ್ದೇಶ ದಾಳಿ ಮಾಡುವುದಾಗಿರಲಿಲ್ಲ. ಕೇವಲ ಒಬ್ಬಳು ಹುಡುಗಿಯ ಕೆನ್ನೆಗೆ ಹೊಡೆದಿದ್ದಾರೆ. ಏಕೆಂದರೆ ಅವಳು ಅವರೊಂದಿಗೆ ಇಂಗ್ಲೀಷ್‌ನಲ್ಲಿ ಜೋರಾಗಿ ಮಾತನಾಡಿದಳು. ಆಗ ಅದು ಅವರಿಗೆ ಅರ್ಥವಾಗದೆ, ನಿಂದಿಸುವುದೆಂದು ತಿಳಿದು ಹೊಡೆದಿದ್ದಾರೆ. ಕೇವಲ ಕೆಲವು ಘಟನೆಗಳನ್ನು ಮುಂದಿಟ್ಟು ಇಡೀ ತಂಡವನ್ನು ಖಂಡಿಸುವುದು ಸರಿಯಲ್ಲ. ಎಷ್ಟಾದರೂ ಕೈಯ ಐದು ಬೆರಳುಗಳು ಸಮವಾಗಿರುವುದಿಲ್ಲ.

ಹುಡುಗಿಯರ ಮೇಲೆ ಹಲ್ಲೆ ಮಾಡಿದ ಮತ್ತು ಪಾರ್ಟಿ ಮೇಲೆ ದಾಳಿ ಮಾಡಿದ ತಂಡದಲ್ಲಿ ಸ್ಥಳೀಯರೇ ಇದ್ದು, ಅವರೆಲ್ಲರೂ ಇಂತಹ ಹೋಂ ಸ್ಟೇ ಪಾರ್ಟಿಗಳನ್ನು ಕಂಡು ಬೇಸತ್ತಿದ್ದರು. ಮತ್ತು ನಿರಂತರವಾಗಿ ಪೋಲೀಸರಿಗೆ ಕಂಪ್ಲೇಂಟ್ ಮಾಡಿದರೂ, ಅವರೇನೂ ಕ್ರಮ ಕೈಗೊಂಡಿರಲಿಲ್ಲ. ಹಿಂದೂ ಜಾಗರಣ ವೇದಿಕೆ ಈ ದಾಳಿಯಲ್ಲಿ ಭಾಗವಹಿಸಿರಲಿಲ್ಲ. ಸುಭಾಷ್ ಪಡೀಲ್ ಹೊರತುಪಡಿಸಿ. ಅವನು ಹಿಂದೂ ಜಾಗರಣ ವೇದಿಕೆ ಕಾರ್ಯಕರ್ತನಾದರೂ, ಸ್ಥಳೀಯನಾಗಿರುವುದರಿಂದ ದಾಳಿಯಲ್ಲಿ ಪಾಲ್ಗೊಂಡಿದ್ದಾನೆ. ಹಿಂದೂ ಜಾಗರಣ ವೇದಿಕೆಯ ವಿರುದ್ಧ ಯಾವುದೇ ಕೇಸ್ ದಾಖಲಾಗಿರುವುದಿಲ್ಲ, ಅದು ಉತ್ತಮ ಕೆಲಸಗಳನ್ನು ಮಾಡುವ ಒಳ್ಳೆಯ ಸಂಘಟನೆ.

ಯಾವಾಗ ಪೋಲೀಸರು ತನ್ನ ಕೆಲಸವನ್ನು ಮಾಡುವಲ್ಲಿ ವಿಫಲರಾದರೋ ಆಗ ನಾವು ಮೀಡಿಯಾದವರಲ್ಲಿ ಆ ಬಗ್ಗೆ ಕೇಳಿಕೊಂಡೆವು. ಅವರು ಹಿಂದೂ ಜಾಗರಣ ವೇದಿಕೆಯವರು ಮಧ್ಯ ಪ್ರವೇಶಿಸುವಂತೆ ಮಾಡಿದರು. ಏಕೆಂದರೆ ಹಿಂದೂ ಜಾಗರಣ ವೇದಿಕೆ ಕಾರ್ಯಕರ್ತರು ಪರಿಸ್ಥಿತಿಯನ್ನು ತಹಬದಿಗೆ ತರುವರೆಂದು ಹುಡುಗಿಯರು ಭಾವಿಸಿದ್ದರು.

ಯಾವಾಗ ಪೊಲೀಸರು ತಮ್ಮ ಕೆಲಸವನ್ನು ಮಾಡುವಲ್ಲಿ ವಿಫಲರಾಗುತ್ತಾರೋ ಆಗ ನಾವು ಮಾಧ್ಯಮದವರನ್ನು

ಸಂಪರ್ಕಿಸಿ ಅವರ ಮೂಲಕ ಹಿಂದೂ ಜಾಗರಣ ವೇದಿಕೆ ಮಧ್ಯ ಪ್ರವೇಶಿಸುವಂತೆ ಕೇಳಿಕೊಳ್ಳುತ್ತೇವೆ. ಯಾಕೆಂದರೆ ಹಿಂದೂ ಜಾಗರಣ ವೇದಿಕೆಯು ಹುಡುಗಿಯರಲ್ಲಿ ಮೆತ್ತಗಾಗುವ ಭಾವನೆಯನ್ನು ಉಂಟುಮಾಡುತ್ತದೆ.

## ವಿ.ಎಚ್.ಪಿ ಮತ್ತು ಸಂಘ ಪರಿವಾರದ ವಿವಿಧ ಸಂಘಟನೆಗಳ ವಕ್ತಾರ

ಈ ದಾಳಿಯು ಸುಭಾಷ್ ಪಡೀಲ್‌ನ ನೇತೃತ್ವದಲ್ಲಿ ನಡೆದಿದೆಯೆಂದು ನಂಬಲಾಗಿದೆಯಾದರೂ, ದಾಳಿಯ ಹಿಂದೆ ಹಿಂದು ಜಾಗರಣ ವೇದಿಕೆ ಇರಲಿಲ್ಲ. ಹಿಂದು ಜಾಗರಣ ವೇದಿಕೆಯ ದಕ್ಷಿಣ ಕನ್ನಡದ ನಾಯಕನಾದ ಸತ್ಯಜಿತ್‌ಗೆ ದಾಳಿ ಬಗ್ಗೆ ಗೊತ್ತಿರಲಿಲ್ಲ ಮತ್ತು ಅವರಿಗೆ ಟಿವಿ ನೋಡಿದ ಮೇಲೆಯೇ ತಿಳಿದಿರುವುದು. ಸುಭಾಷ್ ಪಡೀಲ್ ಹಿಂದು ಜಾಗರಣ ವೇದಿಕೆಯ ನಾಯಕ. ಶ್ರೀರಾಮ ಸೇನೆಗೆ ಸಂಘ ಪರಿವಾರದೊಂದಿಗೆ ಯಾವುದೇ ಸಂಬಂಧವಿಲ್ಲ. ಅವರು ಹಿಂದುತ್ವದ ಸಿದ್ಧಾಂತದಿಂದ ಪ್ರಭಾವಿತರಾದರೂ ನಮ್ಮಿಂದ ಬೇರೆಯಾಗಿದ್ದಾರೆ. ಶ್ರೀರಾಮ ಸೇನೆ ಸಂಘಟನೆ ಗಣನೆಗೇ ಇಲ್ಲ. ಆದರೆ ನಮ್ಮದು ಜವಾಬ್ದಾರಿಯುತ ಸಂಘಟನೆ ಮತ್ತು ನಾವು ನಮ್ಮ ಸ್ಥಾನಕ್ಕೆ ತಕ್ಕ ಹಾಗೆ ಕೆಲಸವನ್ನು ನಿರ್ವಹಿಸುತ್ತೇವೆ.

ಆರೆಸ್ಸೆಸ್ ಈ ಪ್ರದೇಶದಲ್ಲಿ ೧೯೬೦ ರಿಂದ ಕಾರ್ಯಾಚರಿಸುತ್ತಿದೆ. ಇಪ್ಪತ್ತು ವರ್ಷಗಳಿಂದ ಇಲ್ಲಿ ಹಿಂದೂ ಜಾಗರಣ ವೇದಿಕೆ ಮತ್ತು ಬಜರಂಗ ದಳದವರು ಕೆಲಸ ಮಾಡುತ್ತಿದ್ದಾರೆ. ಹಿಂದೂ ಜಾಗರಣ ವೇದಿಕೆಯ ಮುಖ್ಯ ಕೆಲಸ ಮತಾಂತರವನ್ನು ತಡೆಯುವುದು.

ಮಂಗಳೂರು ಈಗ ಮಾದಕ ಲೋಕದತ್ತ ಹೊರಟಿದೆ. ಸುಮಾರು ೧೫ ರಿಂದ ೧೬ ವರ್ಷದ ಮಕ್ಕಳು ಮಾದಕ ಚಟವನ್ನು ಆರಂಭಿಸುತ್ತಾರೆ. ಅವರು ೧೧ ಗಂಟೆಗೆ ಪಬ್‌ಗೆ ಹೋಗಿ ಕುಡಿಯುತ್ತಾರೆ ಮತ್ತು ಸಿಗರೇಟ್ ಸೇದುತ್ತಾರೆ. ಸ್ವಾಭಾವಿಕವಾಗಿ ಹುಡುಗಿಯರೂ ಇಂತಹ ಪಬ್‌ಗಳಿಗೆ ಹೋಗುತ್ತಾರೆ ಮತ್ತು ಅದು ವ್ಯಭಿಚಾರಕ್ಕೆ ನಾಂದಿಯಾಗುತ್ತದೆ. ಇದು ಸಂಭವಿಸಬಾರದು ಮತ್ತು ಹುಡುಗಿಯರನ್ನು ರಕ್ಷಿಸಬೇಕು. ಏಕೆಂದರೆ ಅವರು ಕುಟುಂಬದ ಮೂಲಸ್ತಂಭ. ಹುಡುಗರು ಸಹ ಕುಡಿಯಬಾರದು. ಆದರೆ ಅವರನ್ನು ಅಷ್ಟು ಸುಲಭದಲ್ಲಿ ನಿಯಂತ್ರಿಸಲಾಗದು. ಆದ್ದರಿಂದ ಅವರ ಮೇಲೆ ಬಲವಂತ ಮಾಡಲಾಗುವುದಿಲ್ಲ.

ದಾಳಿಯ ಸಂದರ್ಭ ಹೋಂಸ್ಟೇಯಲ್ಲಿ ಮಾದಕ ಪದಾರ್ಥ(ಡ್ರಗ್ಸ್) ಸಿಗಲಿಲ್ಲ. ಆದರೆ ಸ್ವಲ್ಪ ಸಮಯದಲ್ಲೇ ಅದು ಅಲ್ಲಿ ಬಂದು ಮುಟ್ಟುತ್ತಿತ್ತು. ದಾಳಿ ನಡೆದಾಗ ಅವರೆಲ್ಲರೂ ಕುಡಿದಿದ್ದರು. ಮತ್ತು ಸಿಗರೇಟ್ ಸೇದುತ್ತಿದ್ದರು. ದಾಳಿ ನಡೆಸಿದವರೆಲ್ಲ ಸ್ಥಳೀಯರಾಗಿದ್ದು ಅವರಲ್ಲಿ ಬಹಳಷ್ಟು ಜನ ಮಹಿಳೆಯರಿದ್ದರು. ಅದರಲ್ಲಿ ಕೆಲವು ಹಿಂದೂ ಜಾಗರಣ ವೇದಿಕೆಯ ಕಾರ್ಯಕರ್ತರೂ ಇದ್ದರು. ದಾಳಿ ಬಹು ಮುಖ್ಯ ವಿಷಯವಾಗಲು ಕಾರಣ ಮಾಧ್ಯಮದವರು. ಮಾಧ್ಯಮದವರಿಗೆ ಬೇರೆ ಕೆಲಸವಿಲ್ಲ. ಇಂತಹ ಸಣ್ಣ ಘಟನೆಗಳನ್ನು ದೊಡ್ಡ ವಿಷಯ ಮಾಡಿದ್ದಾರೆ. ಇದು ಕೆಟ್ಟ ಸಂಗತಿ. ಹುಡುಗಿಯರು ಕಾಲೇಜಿನ ಯುನಿಫಾರ್ಮ್‌ನಲ್ಲಿ ಅಲ್ಲಿಗೆ ಹೋಗಿ ಬಟ್ಟೆಯನ್ನು ಬದಲಾಯಿಸಿದ್ದಾರೆ. ಹುಡುಗರು ವಿದ್ಯಾರ್ಥಿಗಳಲ್ಲಿ ಡಿಜೆಗಳು.

ಹಿಂದೂ ಜಾಗರಣ ವೇದಿಕೆಯು ನೇರವಾಗಿ ಆರೆಸ್ಸೆಸ್‌ನ ಜವಾಬ್ದಾರಿಯುತ ಸಂಘಟನೆ. ವಿ.ಹೆಚ್.ಪಿ ಸಹ ಆರೆಸ್ಸೆಸ್‌ನ ಹೊಣೆಗಾರಿಕೆಯುಳ್ಳ ಸಂಘಟನೆ. ಬಜರಂಗ ದಳ, ವಿಶ್ವ ಹಿಂದೂ ಪರಿಷತ್‌ನ ಯುವ ವಿಭಾಗ ಇವರು ಹುಡುಗಿಯರನ್ನು ಹದ್ದುಬಸ್ತಿನಲ್ಲಿಡಲು ಮತ್ತು ಅವರನ್ನು ರಕ್ಷಿಸಲು ಹಿಂಸಾ ರೀತಿಯಲ್ಲಿ ಕೆಲಸ ನಿರ್ವಹಿಸುತ್ತಾರೆ. ಅವರು ಅಕ್ರಮ ದನ ಸಾಗಾಟದ ಬಗ್ಗೆ ನಿಗಾ ವಹಿಸುತ್ತಾರೆ. ಇಲ್ಲಿ ಬಜರಂಗದಳದ ಎರಡು ವಿಷಯಗಳಿವೆ. ಪೋಲೀಸರು ಕ್ರಮ ತೆಗೆದುಕೊಳ್ಳುವಲ್ಲಿ ವಿಫಲರಾದಾಗ, ಹಿಂಸಾರೂಪದಲ್ಲಿ ಕಾರ್ಯನಿರ್ವಹಿಸುವುದು ಬಜರಂಗದಳಕ್ಕೆ ಅನಿವಾರ್ಯವಾಗುತ್ತದೆ. ಮತ್ತು ಅದನ್ನು ನಾವು ಸಮರ್ಥಿಸುತ್ತೇವೆ.

ಹುಡುಗರು ಬಲಪ್ರಯೋಗಿಸುವ ಉದ್ದೇಶ ಅಂತಹ ಕೃತ್ಯಗಳನ್ನು ಕೊನೆಗಾಣಿಸುವುದಾಗಿದೆ. ಅದರಿಂದಾಗಿ ಅವರ ಮುಖ ತೋರಿಸುವುದು ಅನಿವಾರ್ಯವಾಗಿತ್ತು. ಹುಡುಗಿಯರು ಅರೆನಗ್ನ ಸ್ಥಿತಿಯಲ್ಲಿ ಮತ್ತು ಹುಡುಗರು ಒಳ ಉಡುಪಿನಲ್ಲಿದ್ದರು. ಸ್ಥಳೀಯರು ಅವನನ್ನು ಪ್ಯಾಂಟ್ ಹಾಕಲು ಬಿಟ್ಟರು. ಹುಡುಗಿಯರನ್ನು ಕಾರ್ಯಕರ್ತರು ಲೈಂಗಿಕ ಮಾನಭಂಗ ಮಾಡಲಿಲ್ಲ. ಅವರನ್ನು ಅಲ್ಲಿಂದ ಬಲವಂತವಾಗಿ ಎತ್ತಿ ಇನ್ನೊಂದು ಕೋಣೆಗೆ ಕರೆದುಕೊಂಡು ಹೋಗುವಾಗ ಪ್ರತಿರೋಧಿಸುತ್ತಿದ್ದರು. ಅವರಿಗೆ ಕೇವಲ ಕೆನ್ನೆಗೆ ಎರಡು ಹೊಡೆದಿದ್ದು ದೊಡ್ಡ ಘಟನೆಯೇನು ಅಲ್ಲ. ಅದು ಸುಲಭದಲ್ಲಿ ಮರೆಯಬಹುದಾದ ಘಟನೆ. ಒಂದೇ ಘಟನೆಯನ್ನು ಐದು ಸಾವಿರ ಸಲ ತೋರಿಸಿದ್ದಾರೆ.

ನೆರೆಹೊರೆಯವರಿಗೆ ಹೋಂಸ್ಟೇಯಿಂದ ಕಿರಿಕಿರಿಯಾಗುತ್ತದೆಯೆಂದು ಸ್ಥಳೀಯರು ಹಲವು ಬಾರಿ ದೂರು ಕೊಟ್ಟಿದ್ದಾರೆ. ಮಡಿಕೇರಿಯಲ್ಲಿ ೨೫೦೦ ಲೈಸನ್ಸ್ ರಹಿತ ಹೋಂಸ್ಟೇಗಳಿದ್ದು ಅದನ್ನು ನಿಯಂತ್ರಿಸುವುದೇ ಇಲ್ಲ. ಬರ್ತ್‌ಡೇ ಪಾರ್ಟಿ ಆಚರಿಸಲು ಬೆಡ್ ರೂಂ ಇರುವ ಮನೆಗಳು ಬಾಡಿಗೆಗೆ ತೆಗೆಯುವುದು ಆಘಾತಕಾರಿ. ನಾವು ಮಾದಕ ಪಾರ್ಟಿಗಳನ್ನು ತಡೆಯಲು ಉದ್ದೇಶಿಸಿದ್ದೇವೆ.

ಮುಸ್ಲಿಂ ಹುಡುಗರು ಮಾಡುತ್ತಿರುವ ಲವ್ ಜಿಹಾದ್‌ನಿಂದಾಗಿ ಹಲವು ಹುಡುಗಿಯರು ಕಾಣೆಯಾಗುತ್ತಿರುವುದರ ಬಗ್ಗೆ ನಮಗೆ ಕಳವಳ ಇದೆ. ಮಾಜಿ ಮೇಯರ್ ಅಶ್ರಫ್‌ನ ಮಗ ಒಂದು ಉದಾಹರಣೆ. ಗಾಂಜಾ ವ್ಯಾಪಾರದಲ್ಲಿ ಶೇಕಡಾ ನೂರು ಮುಸ್ಲಿಂ ಹುಡುಗರು ಭಾಗಿಯಾಗಿದ್ದಾರೆ. ಹೋಂಸ್ಟೇ ಪಾರ್ಟಿಯಲ್ಲಿ ಮುಸ್ಲಿಂ ಹುಡುಗರು ಸ್ವಲ್ಪದರಲ್ಲೇ ಪಾಲ್ಗೊಳ್ಳುವರೆಂಬ ಬಗ್ಗೆ ಅನುಮಾನ ಇತ್ತು. ಸಾಮಾನ್ಯವಾಗಿ ಇಂತಹ ಪಾರ್ಟಿಗಳಲ್ಲಿ ಮುಸ್ಲಿಂ ಹುಡುಗರು ಹಿಂದೂ ಹುಡುಗಿಯರೊಂದಿಗಿರುತ್ತಾರೆ.

ನಮ್ಮ ಸಂಘಟನೆ ಮತ್ತು ಕರ್ನಾಟಕ ಫೋರಂ ಫಾರ್ ಡಿಗ್ನಿಟಿ, (ಈಗ ಅದು ಪೋಪ್ಯುಲರ್ ಫ್ರಂಟ್ ಆಫ್ ಇಂಡಿಯಾ), ಎರಡು ಸಮುದಾಯದವರು ಬೆರೆಯುವುದು ಇಷ್ಟವಿಲ್ಲ. ನಾವು ಹಿಂಸಾತ್ಮಕವಾಗಿದ್ದರೂ, ಕೆಎಫ್‌ಡಿಯವರಷ್ಟು ಅಲ್ಲ. ಕೆಎಫ್‌ಡಿಯವರು ನನ್ನನ್ನು ಎರಡು ಬಾರಿ ಕೊಲ್ಲಲು ಪ್ರಯತ್ನಿಸಿದ್ದಾರೆ. ಅವರು ಭಯಂಕರವಾದ ಭಯೋತ್ಪಾದಕರು. ರಾಷ್ಟ್ರೀಯ ಕ್ರಿಶ್ಚಿಯನ್ ವೇದಿಕೆಯ ಪ್ರಾಂಕ್ಲೀನ್ ಮೊಂತೆರೋ ನಾವು ಮಾಡುತ್ತಿರುವ ಡ್ರಗ್ ವಿರೋಧಿ ಹೋರಾಟಕ್ಕೆ ಬೆಂಬಲಿಸಿದ್ದಾರೆ. ಕೇರಳದಲ್ಲಿ ಲವ್ ಜಿಹಾದ್‌ನ ವಿರುದ್ಧ ಹಿಂದು ಮತ್ತು ಕ್ರಿಶ್ಚಿಯನ್ನರು ಒಂದಾಗಿ ಹೋರಾಡುತ್ತಿದ್ದಾರೆ. ಲವ್ ಜಿಹಾದ್ ನಡೆಯುವುದು ಹೇಗೆಂದರೆ ಮುಸ್ಲಿಂ ಹುಡುಗರು ಹಿಂದೂ ಹುಡುಗಿಯರಿಗೆ ಆಭರಣಗಳ ಆಮಿಷ ತೋರಿಸಿ, ಅವರನ್ನು ಲೈಂಗಿಕವಾಗಿ ಬಲತ್ಕಾರ ಮಾಡಿ ಮತ್ತು ಪೊನ್ನಾನಿಗೆ ಕರೆದುಕೊಂಡು ಹೋಗಿ ಇಸ್ಲಾಂಗೆ ಮತಾಂತರಿಸುತ್ತಾರೆ. ಹಿಂದೂ ಹುಡುಗಿಯರನ್ನು ಕೇರಳಕ್ಕೆ ಒಂದು ಸಲ ಕರೆದುಕೊಂಡು ಹೋದರೆ ಮತ್ತೆ ಹಿಂದಿರುಗಿ ಬರುವುದು ಇಲ್ಲ.

ನಮ್ಮ ಕಾರ್ಯಾಚರಣೆಯ ಬಗ್ಗೆ ಕೃತಾರ್ಥರಾಗಿದ್ದೇವೆ. ಏಕೆಂದರೆ ದಕ್ಷಿಣ ಕನ್ನಡದಲ್ಲಿ ಅಂತರ್ ಧರ್ಮೀಯ ಹುಡುಗ ಹುಡುಗಿಯರು ಬೆರೆಯುವುದು ಸಂಪೂರ್ಣ ನಿಂತಿದೆ. ನಾವು ಹಿಂದೂ ಧರ್ಮಕ್ಕೆ ಮತಾಂತರಿಸುವುದಿಲ್ಲ. ಆದರೆ ಕೆಲವು ಘಟನೆ ಆಗಿದೆ. ಆರೆಸ್ಸೆಸ್ ಪ್ರಾಯೋಜಿಸುವ ಗಣವೇಷಧಾರಿ ಸ್ವಯಂಸೇವ ಕಾರ್ಯಕ್ರಮದಲ್ಲಿ ಕರ್ನಾಟಕದ ನಾಲ್ಕು ಜಿಲ್ಲೆಗಳಿಂದ ಒಂದು ಲಕ್ಷ ಜನ ಭಾಗವಹಿಸುತ್ತಾರೆ. ಈ ಉತ್ಸವ ಬಹಳ ಶಿಸ್ತಿನಿಂದ ಮಾಡುತ್ತೇವೆ. ಎಲ್ಲರೂ ಆರೆಸ್ಸೆಸ್‌ನ ಸಮವಸ್ತ್ರದಲ್ಲಿದ್ದು ಸಾಸಿವೆ ಬಿದ್ದರೂ ಶಬ್ದ ಕೇಳುವಷ್ಟು ಶಿಸ್ತಿನಲ್ಲಿರುತ್ತಾರೆ.

ಮಹಿಳೆಯರಿಗೆ ತಾವು ಇಷ್ಟ ಬಂದಲ್ಲಿಗೆ ಹೋಗಲು ನಮ್ಮ ಸಮಾಜ ಅನುವು ಮಾಡುವುದಿಲ್ಲ. ಹುಡುಗಿಯರೇನು ಆಘಾತಕರ ಸ್ಥಿತಿಯಲ್ಲಿಲ್ಲ. ಪಬ್ ದಾಳಿಯು ವಿದ್ಯಾಸಂಸ್ಥೆಗಳಿಗೆ ವಿದ್ಯಾರ್ಥಿಗಳ ಸೇರ್ಪಡೆಯ ಮೇಲೆ ಯಾವುದೇ ಪರಿಣಾಮ ಬೀರಲಿಲ್ಲ.

## ಬಜರಂಗದಳ

ಬೆಂಗಳೂರಿನಲ್ಲಿ ಕರೆದ ಪತ್ರಿಕಾಗೋಷ್ಠಿಯಲ್ಲಿ ಬಜರಂಗದಳದ ರಾಜ್ಯಸಂಚಾಲಕ ಬಿ.ಮಂಜುನಾಥ ಮಂಗಳೂರು ಬಳಿಯ ಪಡೀಲ್ ಹೋಂಸ್ಟೇ ದಾಳಿಯನ್ನು ಸಮರ್ಥಿಸಿ "ಹಿಂದೂ ಸಂಸ್ಕೃತಿಯ ರಕ್ಷಣೆಗೆ ಅನಿವಾರ್ಯ" ಎಂದು ಹೇಳಿದ್ದಾರೆ. "ನಾವು ಮಹಿಳೆಯ ಮೇಲೆ ದಾಳಿಯನ್ನು ಖಂಡಿಸುತ್ತೇವೆ. ಆದರೆ ಇಂತಹ ದಾಳಿ ಹಿಂದೂ ಸಂಸ್ಕೃತಿಯ ರಕ್ಷಣೆಯಲ್ಲಿ ಅನಿವಾರ್ಯ" ಎಂದು ಮಂಜುನಾಥ ಹೇಳಿದ್ದಾರೆಂದು ವರದಿಯಾಗಿದೆ. ಮಂಜುನಾಥರ ಪ್ರಕಾರ ಹೋಂಸ್ಟೇ ದಾಳಿಗೂ, ಹೆತ್ತವರು ಮಕ್ಕಳಿಗೆ ನೀತಿ ಕಲಿಸುವುದಕ್ಕೂ ಅಥವಾ ಶಿಕ್ಷಕರು ಬುದ್ದಿ ಹೇಳುವುದಕ್ಕೂ ಯಾವುದೇ ವ್ಯತ್ಯಾಸವಿಲ್ಲ". ಆದರೆ ಬೇರೆಯವರಿಗೆ ಬುದ್ದಿ ಹೇಳಲು ಅಥವಾ ನೈತಿಕತೆ ಭೋಧಿಸಲು ದಾಳಿಕೋರರಿಗೆ ಅಧಿಕಾರ ನೀಡಿದವರ್ಯಾರು ಎಂದು ಕೇಳಿದಾಗ, ಮಂಜುನಾಥರಲ್ಲಿ ಉತ್ತರವಿಲ್ಲ. (ದಿ ಹಿಂದೂ, ಅಗಸ್ಟ್ ೨೧,೨೦೧೨)

## ಪೋಲೀಸರ ಪ್ರತಿಕ್ರಿಯೆ

ವೀಡಿಯೋ ಕ್ಲಿಪಿಂಗ್ ಮತ್ತು ಪ್ರತ್ಯಕ್ಷದರ್ಶಿಗಳ ಸಾಕ್ಷ್ಯದಲ್ಲಿ ಪೋಲೀಸರು ಘಟನೆ ನಡೆದ ಸ್ಥಳಕ್ಕೆ ಬಂದಾಗ ದಾಳಿಕೋರರ ವಿರುದ್ದ ಯಾವುದೇ ಕ್ಷಿಪ್ರ ಕಾರ್ಯಾಚರಣೆ ಕೈಗೊಂಡಿಲ್ಲ ಎಂದು ತಿಳಿದು ಬರುತ್ತದೆ. ವೀಡಿಯೋ ಕ್ಲಿಪಿಂಗ್‌ನಲ್ಲಿ ಸ್ಪಷ್ಟವಾಗಿ ಇನ್ಸ್‌ಪೆಕ್ಟರ್ ರವೀಶ್ ನಾಯಕ್ ದಾಳಿಕೋರರನ್ನು ಬಂಧಿಸುವ ಬದಲಾಗಿ ಅವರನ್ನು ಮನೆಯಿಂದ ಹೊರಗೆ ಕಳುಹಿಸಿದರು.

ಯಾವಾಗ ದಾಳಿಯ ಇಡೀ ಚಿತ್ರಣ ದೇಶದಾದ್ಯಂತ ಹಬ್ಬಿತೋ ಅದರ ನಂತರ ಪೋಲೀಸರು ಕಾರ್ಯಾಚರಣೆಗಿಳಿದರು. ಪೋಲೀಸರು ವಿಜಯ್ ಕುಮಾರ್‌ನ ದೂರಿನ ಮೇರೆಗೆ ೧೪೩, ೧೪೭, ೧೪೮, ೪೪೮, ೩೪೧, ೩೨೩, ೩೨೪, ೫೦೪, ೩೫೪, ೩೯೫, ೧೪೯ ಮುಂತಾದ ಐಪಿಸಿ ಸೆಕ್ಷನ್ ಪ್ರಕಾರ ೨೮.೭.೨೦೧೨ ರಾತ್ರಿ ೯ಕ್ಕೆ ಪ್ರಥಮ ಮಾಹಿತಿ ವರದಿ ದಾಖಲಿಸಿದರು. Unlawful Activity Prevention Act ೧೯೬೭ನ ಸೆಕ್ಷನ್ ೧೩(a) ಮತ್ತು ೧೩ (b) ಮತ್ತು KPDLP ಆ್ಯಕ್ಟ್ ನ ಸೆಕ್ಷನ್ ೨ (A) ಮತ್ತು (B) ಪ್ರಕಾರ ಸಹ FIR ದಾಖಲಿಸಿದ್ದಾರೆ. ರಾತ್ರಿ ೯ ಗಂಟೆಗೆ ದಾಖಲಿಸಿದ FIRನಲ್ಲಿ ಕಳವು, ಲೈಂಗಿಕ ದೌರ್ಜನ್ಯ, ಅಕ್ರಮ ಪ್ರವೇಶ, ಅದೇ ರೀತಿ ಸಾಮಾನ್ಯ ಹಲ್ಲೆ ಮುಂತಾದವು ಈಖಖನಲ್ಲಿ ದಾಖಲಾಗಿದೆ. ಹಾಗೆಯೇ ದೂರಿನಲ್ಲಿ ೨೭ ಜನ ಆರೋಪಿಗಳನ್ನು ಗುರುತಿಸಿದ್ದು ಅವರು ಮುಖ್ಯವಾಗಿ ಹಿಂದೂ ಜಾಗರಣ ವೇದಿಕೆ ಮತ್ತು ಇತರ ಹಿಂದೂ ಸಂಘಟನೆಗಳಿಗೆ ಸೇರಿದವರೆಂದು ಹೇಳಲಾಗಿದೆ. ದೂರಿನ ಪ್ರಕಾರ, ದಾಳಿಯ ರೂವಾರಿ ಹಿಂದೂ ಜಾಗರಣ ವೇದಿಕೆಯ ಸುಭಾಷ್ ಪಡೀಲ್‌ನನ್ನು ಸೇರಿ ೨೨ ಜನರನ್ನು ಸ್ವಲ್ಪ ದಿನಗಳೊಳಗಾಗಿ ಬಂಧಿಸಲಾಗಿದೆ.

ಜುಲೈ ೩೦, ೨೦೧೨ ರಂದು ಪೋಲೀಸ್ ಕಮೀಷನರ್ ಸೀಮಂತ್ ಕುಮಾರ್ ಸಿಂಗ್ ಪತ್ರಿಕಾಗೋಷ್ಠಿಯಲ್ಲಿ ಹೇಳಿದ ಪ್ರಕಾರ ದಾಳಿ ಮಾಡಿದವರು ಹೇಡಿಗಳು ಮತ್ತು ಅಲ್ಲಿ ಒಬ್ಬ ಪೋಲೀಸ್ ಪೇದೆ ಇದ್ದರೂ ಸಹ ದಾಳಿ ಮಾಡಲು ಧೈರ್ಯ ಮಾಡುತ್ತಿರಲಿಲ್ಲ. ಮತ್ತು ಅಲ್ಲಿ ಯಾವುದೇ ಒಬ್ಬ ಪೋಲೀಸ್ ಇದ್ದಾರೆಂದು ಸಾಕ್ಷಿ ಇದ್ದಲ್ಲಿ ಅವರ ವಿರುದ್ಧ ಕ್ರಮ ಕೈಗೊಳ್ಳುತ್ತೇನೆ. ಅವರು ಮುಖ್ಯವಾಗಿ ಹೇಳಿದ್ದು ದಾಳಿಯಾದದ್ದು ರೇವ್ ಪಾರ್ಟಿಯಾಗಿರಲಿಲ್ಲ. ಅದೊಂದು ಬರ್ತ್‌ಡೇ ಪಾರ್ಟಿ ಆಗಿತ್ತು. ಪೋಲೀಸರ ಕಡೆಯಿಂದ ತಪ್ಪು ಸಂಭವಿಸಿದ್ದರೆ ಅಂತಹವರ ವಿರುದ್ದ ಕ್ರಮ ಕೈಗೊಳ್ಳುತ್ತೇನೆಂದು ಸಹ ನುಡಿದಿದ್ದರು. ಹಲವು ಪ್ರಶ್ನೆಗಳು ಅವರಲ್ಲಿ ಕೇಳಿದರೂ, ತನಿಖೆ ಪ್ರಗತಿಯಲ್ಲಿದೆ ಎಂದು ಅವರು ಪ್ರತಿಕ್ರಿಯಿಸಿದರು.

## ಹುಟ್ಟುಹಬ್ಬ ಪಾರ್ಟಿ ಮೇಲಣ ದಾಳಿಯ ವಿಶ್ಲೇಷಣೆ

### ವಸ್ತುಸ್ಥಿತಿ ಕಂಡುಕೊಂಡ ಅಂಶಗಳ ಪ್ರಕಾರ

ಮೇಲಿನ ಸಂದರ್ಶನಗಳು ಮತ್ತು ಸಾಕ್ಷ್ಯಾಧಾರಗಳಿಂದ ಸ್ಪಷ್ಟವಾಗಿ ತಿಳಿದುಬರುವ ಸಂಗತಿಯೆಂದರೆ, ಅಲ್ಲಿ ನಡೆಯುತ್ತಿದ್ದುದು ಹುಟ್ಟುಹಬ್ಬದ ಪಾರ್ಟಿ. ಸ್ವಯಂಘೋಷಿತ ಹಿಂದೂ ಜಾಗರಣಾ ವೇದಿಕೆಯ ಕಾರ್ಯಕರ್ತರು ಅದರ ಮೇಲೆ ದಾಳಿ ನಡೆಸಿದ್ದಾರೆ. ಪಾರ್ಟಿಯಲ್ಲಿ ಮಾದಕದ್ರವ್ಯಗಳಿದ್ದವು ಮತ್ತು ಪಾರ್ಟಿಯ ಉದ್ದೇಶ ಲೈಂಗಿಕ ಚಟುವಟಿಕೆ ಎಂದು ಬಿಂಬಿಸಿ ದಾಳಿಯನ್ನು ಸಮರ್ಥಿಸಲು ಯತ್ನಿಸಲಾಗಿತ್ತು. ಅಲ್ಲದೆ, ಪಾರ್ಟಿಯಲ್ಲಿ ಮುಸ್ಲಿಂ ಹುಡುಗರಿದ್ದರು ಎಂಬ ಆಧಾರದಲ್ಲಿ ದಾಳಿಯನ್ನು ಸಮರ್ಥಿಸುವುದು ದಾಳಿಕೋರರ ಉದ್ದೇಶವಾಗಿತ್ತು.

ಆದಾಗ್ಯೂ, ಪಾರ್ಟಿಯಲ್ಲಿ ಮಾದಕದ್ರವ್ಯಗಳು ಇದ್ದವು ಎನ್ನುವ ಬಗ್ಗೆ ಯಾವ ಪುರಾವೆಗಳೂ ಇಲ್ಲ ಮತ್ತು ಅಲ್ಲಿ ಲೈಂಗಿಕ ಚಟುವಟಿಕೆ ಇತ್ತು ಎನ್ನುವುದು ದಾಳಿಕೋರರ ಕಪೋಲಕಲ್ಪಿತ ಅಂಶವಾಗಿತ್ತು ಎಂಬುದು ಸುಸ್ಪಷ್ಟ. ದಾಳಿಕೋರರ ಪ್ರಕಾರ ಮುಸ್ಲಿಮರು (ಕಾಲ್ಪನಿಕ) ಅಲ್ಲಿದ್ದರು ಎನ್ನುವುದು, ದಾಳಿಗೆ ಸಮರ್ಥನೆಯಾಗುತ್ತದೆ ಎಂದು ಅವರು ಅಂದುಕೊಂಡಿರುವುದು ಇನ್ನೂ ಚಿಂತೆಯ ಸಂಗತಿಯಾಗಿದೆ. ಮುಸ್ಲಿಂ ಹುಡುಗರು ಇದ್ದರೆಂದು ಕೃತಕವಾಗಿ ಕಲ್ಪಿಸಿಕೊಂಡ ತರ್ಕವು, ಸ್ವತಃ ದಾಳಿಗೆ ಸಮರ್ಥನೆಯಾಗುತ್ತದೆ ಎಂಬುದು, ದಾಳಿಕೋರರರನ್ನು ಪ್ರೋತ್ಸಾಹಿಸುವ ವಿಸ್ತೃತ ರಾಜಕಾರಣದ ಸುಳಿವನ್ನು ನಮಗೆ ಒದಗಿಸುತ್ತದೆ.

ದಾಳಿಕೋರರು ಹೇಳುವ ಕತೆಯಲ್ಲಿ ಎದ್ದು ಕಾಣುವ ಸಂಗತಿಯೆಂದರೆ, ಸತ್ಯದ ಬಗ್ಗೆ ತೀರಾ ನಿರ್ಲಕ್ಷ್ಯ

ಮತ್ತು ದಾಳಿಯನ್ನು ಸಮರ್ಥಿಸಲು ಅನುಕೂಲವಾಗುವಂತಹ ಚಿತ್ರಣವನ್ನು ಕಟ್ಟಿಕೊಡಲು ಮತ್ತೆ ಮತ್ತೆ ಯತ್ನಿಸಿರುವುದು. ಈ ಉದ್ದೇಶದಿಂದಲೇ ಮಾದಕದ್ರವ್ಯ ಮತ್ತು ಲೈಂಗಿಕ ಚಟುವಟಿಕೆ ಮತ್ತು ಹುಡುಗರು ಹುಡುಗಿಯರ ರಾತ್ರಿ ಪಾರ್ಟಿಯ... ವರ್ಣರಂಜಿತ ಚಿತ್ರವನ್ನು ಬಿಂಬಿಸಲು ದಾಳಿಕೋರರು ಯತ್ನಿಸಿದ್ದರು. ಆದರೆ ಸತ್ಯ ಸಂಗತಿಯೇನೆಂದರೆ, ಕೆಲವೇ ಗಂಟೆಗಳ ಮಟ್ಟಿಗೆ ಹೋಂ ಸ್ಟೇಯನ್ನು ಬುಕ್ ಮಾಡಲಾಗಿತ್ತು ಮತ್ತು ಅಲ್ಲಿ ನಡೆದದ್ದು ಕೇವಲ ಹುಟ್ಟುಹಬ್ಬದ ಸಂಭ್ರಮಾಚರಣೆ.

ಮಾಧ್ಯಮಗಳ ಸಮ್ಮುಖದಲ್ಲಿಯೇ ಯುವತಿಯರ ಮೇಲೆ ನಡೆದ ಕ್ರೂರ ದೈಹಿಕ ಹಲ್ಲೆಯ ಪೂರ್ವ ನಿದರ್ಶನ ೨೦೦೯ರ ಪಬ್ ದಾಳಿಯಲ್ಲಿಯೇ ಇದೆ. ಈ ಬಾರಿ ದಾಳಿಕೋರರು ಇನ್ನಷ್ಟು ದಿಟ್ಟರಾಗಿದ್ದರು ಮತ್ತು ದೈಹಿಕ ಹಲ್ಲೆಗೆ ಮಾತ್ರವಲ್ಲ, ಪಾರ್ಟಿಯಲ್ಲಿದ್ದ ಯುವತಿಯರನ್ನು ಕ್ಯಾಮರಾಗಳ ಮುಂದೆಯೇ ಲೈಂಗಿಕವಾಗಿ ಪೀಡಿಸುವವಷ್ಟು ಮುಂದುವರಿದರು.

ಇಲ್ಲಿ ಇನ್ನೂ ಒಂದು ಸಂಗತಿಯನ್ನು ಗಮನಿಸಬೇಕು; ಒಂದು ಎತ್ತರದ ಸೈದ್ಧಾಂತಿಕ ಮಟ್ಟದಲ್ಲಿ ಭಾರತೀಯ ಸಂಸ್ಕೃತಿಯನ್ನು ರಕ್ಷಿಸುವ ಕಾರ್ಯ ಎಂದು ಹೇಳಿಕೊಳ್ಳುವ ಅದೇ ಕಾರ್ಯವನ್ನು ತಥಾಕಥಿತ ನೈತಿಕ ಏಜಂಟ್‌ಗಳ ವಿಶ್ವಾಸಾರ್ಹತೆಗೇ ಕುಂದುಂಟಾಗುವಂತೆ ಕಾರ್ಯಗತಗೊಳಿಸಲಾಗಿತ್ತು. ಯಾವ ಮಹಿಳೆಯರನ್ನು ಅತ್ಯಂತ ಹೀನಸ್ಥಿತಿಯಿಂದ ತಾವು ರಕ್ಷಿಸುತ್ತಿದ್ದೇವೆ ಎಂದು ಈ ಭಾರತೀಯ ಸಂಸ್ಕೃತಿ ರಕ್ಷಕರು ಹೇಳಿಕೊಳ್ಳುತ್ತಿರುವರೋ ಅವರಲ್ಲಿ, ಆ ಮಹಿಳೆಯರನ್ನೇ ತಾವು ಸ್ವತಃ ಉಲ್ಲಂಘಿಸುತ್ತಿದ್ದೇವೆ ಎನ್ನುವ ಒಂದಿಷ್ಟು ಅಳುಕು ಕೂಡಾ ಇರಲಿಲ್ಲ. ತಥಾಕಥಿತ ರಕ್ಷಣಾ ಮಹಾಕಾರ್ಯಕ್ಕೆ ಹೊರಟಾಗ ಚಿನ್ನದ ಸರ ಮತ್ತು ಮೊಬೈಲುಗಳ ಕಳವಿನಲ್ಲಿ ತೊಡಗುವ ಬಗ್ಗೆ ಅವರಲ್ಲಿ ಯಾವ ಮುಲಾಜೂ ಇರಲಿಲ್ಲ. ಈ ಲೈಂಗಿಕ ಪೀಡಕರು ಮತ್ತು ಚಿಲ್ಲರೆ ಕ್ರಿಮಿನಲ್‌ಗಳ ಬಗ್ಗೆ ದುಶ್ಯಾಸನರು ಮತ್ತು ಕೀಚಕರು ಎಂದು ಕರ್ನಾಟಕ ವಿಧಾನಸಭೆಯಲ್ಲಿ ಪ್ರಸ್ತಾಪಿಸಿರುವುದು ಸರಿಯಾಗಿಯೇ ಇದೆ.

## ಹಿಂದೂ ಜಾಗರಣ ವೇದಿಕೆಯ ಮೇಲೆ ಕಾನೂನು ಹೊಣೆ ನಿಗದಿ

ಪ್ರಥಮ ಮಾಹಿತಿ ವರದಿಯ ಪ್ರಕಾರ ದಾಳಿಕೋರರು ಹಿಂದೂ ಜಾಗರಣಾ ವೇದಿಕೆಗೆ ಸೇರಿದವರು. ವಿಶ್ವ ಹಿಂದೂ ಪರಿಷತ್, ಮಹಿಳಾ ಜಾಗೃತಿ ವೇದಿಕೆಯ ವಕ್ತಾರರು, ಹಾಗೆಯೇ ಹಿಂದೂ ಜಾಗರಣಾ ವೇದಿಕೆಯ ಜಗದೀಶ ಕಾರಂತರ ಪ್ರಕಾರ, ಎಲ್ಲ ದಾಳಿಕೋರರು ಪಡೀಲಿನ ಸ್ಥಳೀಯ ನಿವಾಸಿಗಳಾಗಿದ್ದು, ಸುಭಾಷ್ ಪಡೀಲ್ ಹಿಂದೂ ಜಾಗರಣಾ ವೇದಿಕೆಯವನಾಗಿದ್ದರೂ, ಪಡೀಲಿನ ಸ್ಥಳೀಯ ನಿವಾಸಿ ಎಂಬ ನೆಲೆಯಲ್ಲಿ ಆತ ಅಲ್ಲಿದ್ದ. ತಾವು ಹಿಂದೂ ಜಾಗರಣಾ ವೇದಿಕೆಯವರು ಎಂದು ಅಲ್ಲಿ ಯಾರೂ ಬ್ಯಾನರ್ ಹಿಡಿದುಕೊಂಡು ಹೋಗಿರಲಿಲ್ಲ ಎಂದು ಜಗದೀಶ ಕಾರಂತ ವಾದಿಸುತ್ತಾರೆ. ಅಲ್ಲಿದ್ದ ಎಲ್ಲಾ ದಾಳಿಕೋರರು ನಿಜವಾಗಿಯೂ ಹಿಂದೂ ಜಾಗರಣಾ ವೇದಿಕೆಯವರೇ ಎಂಬುದನ್ನು ಹೇಳುವುದು (ಅಸಾಧ್ಯವಲ್ಲವಾದರೂ) ಕಷ್ಟಸಾಧ್ಯ. ಈ ಸಂಘಟನೆಗಳು ನೊಂದಾವಣೆಗೊಂಡಿರುವುದಿಲ್ಲ ಮತ್ತು ಅವು ಸದಸ್ಯತ್ವ ಪಟ್ಟಿಯನ್ನೂ ಹೊಂದಿರುವುದಿಲ್ಲ. ತಾವು ಹಿಂದೂ ಜಾಗರಣಾ ವೇದಿಕೆಯ ಸದಸ್ಯರು ಎಂದು ಸ್ವಯಂ ಘೋಷಿಸಿಕೊಳ್ಳುವುದನ್ನು ಹೊರತುಪಡಿಸಿದರೆ, ಹಿಂದೂ ಜಾಗರಣಾ ವೇದಿಕೆಯ ಸದಸ್ಯರು ಎನ್ನುವುದಕ್ಕೆ ಯಾವ ಪುರಾವೆಯೂ ಅವರ ಬಳಿ ಇಲ್ಲ.

ಆದ್ದರಿಂದ, ಹಿಂದೂ ಜಾಗರಣಾ ವೇದಿಕೆ ಎಂದು ಪ್ರಥಮ ಮಾಹಿತಿ ವರದಿ ಉಲ್ಲೇಖಿಸಿದರೂ, ದಾಳಿಯಲ್ಲಿ ಪಾಲ್ಗೊಂಡ ಸುಭಾಷ್ ಪಡೀಲ್ ಮತ್ತು ಇತರರ ವಿರುದ್ಧ ಮಾತ್ರ ಕ್ರಮ ಜರುಗಿಸುವ ಬಗ್ಗೆ ಕಾನೂನು ಗಮನ ಹರಿಸುತ್ತದೆ. ಇಂತಹ ಒಂದು ದಾಳಿಯನ್ನು ನಡೆಸುವ ಹಿಂದೆ ಷಡ್ಯಂತ್ರವಿತ್ತೇ? ಇತ್ತಾದರೆ, ಈ ಷಡ್ಯಂತ್ರದ ಹಿಂದಿನ ಸೂತ್ರದಾರರು ಯಾರು? ಹುಟ್ಟುಹಬ್ಬದ ಪಾರ್ಟಿಯ ಗುರಿಯನ್ನು ಆಯ್ದುಕೊಂಡದ್ದು ಹೇಗೆ? ಹಿಂದೂ ಜಾಗರಣಾ ವೇದಿಕೆ ಈ ತೆರನ ಕ್ರಮಗಳನ್ನು ಹಿಂದೆಯೂ ನಡೆಸಿತ್ತೇ? ಇಂತಹ ದಾಳಿಗಳನ್ನು ನಡೆಸಲು ಈ ಗುಂಪುಗಳು ಅವಲಂಬಿಸಿರುವ ಮಾಹಿತಿದಾರರ ಒಂದು ಜಾಲವಿದೆಯೇ? ಎಂಬೆಲ್ಲಾ ಆಳ ಪ್ರಶ್ನೆಗಳಿವೆ.

ಸದರಿ ದಾಳಿಯನ್ನು ನಡೆಸಲು ಹಿಂದೂ ಜಾಗರಣಾ ವೇದಿಕೆ ಸದಸ್ಯರು ನಡೆಸಿದ ಷಡ್ಯಂತ್ರದ ಕೋನವನ್ನು ತನಿಖೆ ಮಾಡಿದರೆ, ಈ ತೆರನ ದಾಳಿಗಳ ಸೂತ್ರದಾರರನ್ನು ಕಾನೂನು ಹೊಣೆಗಾರಿಕೆಯ ಜಾಲದೊಳಗೆ ತರಲು

ಅನುಕೂಲವಾಗಬಹುದು. ಈ ಹಿನ್ನೆಲೆಯಲ್ಲಿ, ಬಿಜೆಪಿಯ ಸ್ಥಳೀಯ ಕಾರ್ಪೋರೇಟರ್ ಮೋಹನ್ ಪಡೀಲ್ ಮತ್ತು ಇನ್ಸ್‌ಪೆಕ್ಟರ್ ರವೀಶ್ ನಾಯಕ್‌ರ ನಡೆವಳಿಕೆಯನ್ನು ತನಿಖೆಗೊಳಪಡಿಸುವ ಅಗತ್ಯವಿದೆ. ದಾಳಿಯ ಸ್ಥಳದಲ್ಲಿ ಉಪಸ್ಥಿತರಿದ್ದ ಹೊರತಾಗಿಯೂ, ಕಾನೂನುಬಾಹಿರ ದಾಳಿಯ ವಿರುದ್ಧ ಪ್ರತಿಭಟಿಸುವಲ್ಲಿ ಪ್ರದೇಶದ ಚುನಾಯಿತ ಪ್ರತಿನಿಧಿಯ ಸಂಪೂರ್ಣ ವೈಫಲ್ಯ ಮತ್ತು ದಾಳಿಕೋರರಿಗೆ ಆತ ನೀಡಿರುವ ಬೆಂಬಲವು, ಕನಿಷ್ಠ ಪಕ್ಷ ತೀರಾ ಬೇಜವಾಬ್ದಾರಿತನದಿಂದ ಕೂಡಿದ್ದು, ಗರಿಷ್ಠವೆಂದರೆ ದಾಳಿಯ ಗುರಿಯಲ್ಲಿ ಆತನೂ ಗುಪ್ತ ಪಾಲುದಾರ ಎನ್ನುವುದನ್ನು ಸೂಚಿಸುತ್ತದೆ.

ಇನ್ನೂ ಒಂದು ಹೆಜ್ಜೆ ಮುಂದೆ ಹೋದರೆ, (ಹಿಂದೂ ಜಾಗರಣಾ ವೇದಿಕೆಯ ಹಿರಿಯ ಪದಾಧಿಕಾರಿಯೋರ್ವರು ಒಪ್ಪಿಕೊಂಡಿರುವಂತೆ) ಒಂದು ವೇಳೆ ಆರ್‌ಎಸ್‌ಎಸ್ ಮಾತೃ ಸಂಘಟನೆಯಾಗಿದ್ದರೆ, ಹಿಂದೂ ಜಾಗರಣಾ ವೇದಿಕೆಯಂತಹ ಈ ಗುಂಪುಗಳು ಯೋಜಿಸಿದ ಚಟುವಟಿಕೆಗಳು ಎಷ್ಟರಮಟ್ಟಿಗೆ ಹಿಂದುತ್ವದ ವಿಸ್ತೃತ ಯೋಜನೆಯಾಗಿ ಒಪ್ಪಿಗೆ ಪಡೆದಿರುತ್ತವೆ?

ಇಂತಹ ಅಪರಾಧಗಳನ್ನು ಎಸಗುವ ಷಡ್ಯಂತ್ರದ ಬಗ್ಗೆ ಪ್ರಥಮ ಮಾಹಿತಿ ವರದಿಯು ಯಾವುದೇ ಕಾನೂನು ಕ್ರಮ ಜರುಗಿಸುವ ಬಗ್ಗೆ ಯೋಚಿಸುವುದಿಲ್ಲ ಎನ್ನುವುದು ಇಲ್ಲಿನ ಒಂದು ಕುತೂಹಲಕಾರಿ ಅಂಶ. ವಸ್ತುಸ್ಥಿತಿಯೇನೆಂದರೆ, ಸುಭಾಶ್ ಪಡೀಲ್ ಸದರಿ ಘಟನೆಯನ್ನು ವರದಿಮಾಡಲು ಕ್ಯಾಮರಾಮನ್ ಶರಣ್‌ಗೆ ಕರೆಮಾಡಿರುವುದು, ಅಲ್ಲಿ ವ್ಯವಸ್ಥಿತವಾದ ಪೂರ್ವಯೋಚನೆ ಮತ್ತು ಯೋಜನೆ ಇತ್ತು ಎನ್ನುವುದನ್ನು ಸುಸ್ಪಷ್ಟವಾಗಿ ಸೂಚಿಸುತ್ತದೆ.

ಅಲ್ಲದೆ, ತಯಾರಿಸಲಾದ ಪ್ರಥಮ ಮಾಹಿತಿ ವರದಿಯು, ಹೆಚ್ಚೆಂದರೆ ಕಾನೂನುಬಾಹಿರ ಚಟುವಟಿಕೆಯನ್ನು ಗುರಿಯಾಗಿರಿಸುವ ನಿಬಂಧಗಳನ್ನು ನಿರ್ದಿಷ್ಟವಾಗಿ ಬಳಸುವವರೆಗೆ ಹೋಗುವ ವ್ಯಾಪ್ತಿಯನ್ನು ಹೊಂದಿದೆಯೇ ಹೊರತು, ಕಾನೂನುಬಾಹಿರ ಚಟುವಟಿಕೆಗಳ ಪ್ರತಿಬಂಧ ಅಧಿನಿಯಮ, ೧೯೬೭ರ ಅಡಿಯಲ್ಲಿ ಬರುವ ಕಾನೂನು ಬಾಹಿರ ಸಂಘಟನೆಯ ಬಗ್ಗೆ ಅಲ್ಲ. ಹೀಗೆ, ಪೊಲೀಸರು ಇದುವರೆಗೆ ತೆಗೆದುಕೊಂಡ ಕ್ರಮವು ಕಾನೂನುಬಾಹಿರ ಚಟುವಟಿಕೆಗಳ ಪ್ರತಿಬಂಧ ಅಧಿನಿಯಮ, ೧೯೬೭ರಲ್ಲಿನ ಕಾನೂನುಬಾಹಿರ ಸಂಘಟನೆಗಳ ವ್ಯಾಖ್ಯೆಯ ಒಳಗಡೆ ಬರುವ ಹಿಂದೂ ಜಾಗರಣಾ ವೇದಿಕೆಯಂತಹ ಸಂಘಟನೆಗಳ ವಿರುದ್ಧ ಯಾವುದೇ ಕ್ರಮವನ್ನು ಆಲೋಚಿಸುವುದಿಲ್ಲ.

## ಹಿಂದೂ ಜಾಗರಣ ವೇದಿಕೆ, ಬಜರಂಗ ದಳ ಮತ್ತು ಶ್ರೀರಾಮ ಸೇನೆ: ಹೆಸರಿನಲ್ಲಿ ಮಾತ್ರ ಭಿನ್ನವಾದವುಗಳ ನಡುವೆ?

ಶ್ರೀರಾಮಸೇನೆಯ ಭಾಗವಾಗಿ ೨೦೦೮ ರಲ್ಲಿ ಪಬ್ ದಾಳಿಯಲ್ಲಿ ಭಾಗವಹಿಸಿದ್ದ ಸುಭಾಷ್ ಪಡೀಲ್ ಸ್ವಲ್ಪ ಕಾಲ ಬಜರಂಗದಳದಲ್ಲಿದ್ದ. ಬಳಿಕ ಸದ್ಯ ಹಿಂದೂ ಜಾಗರಣ ವೇದಿಕೆಯ ಭಾಗವಾಗಿದ್ದಾನೆ. ಒಂದು ಬಲಪಂಥೀಯ ಸಂಘಟನೆ ನೆರಳಿನಿಂದ ಇನ್ನೊಂದು ಇನ್ನೊಂದು ಸಂಘಟನೆಗೆ ಈ ಕಾರ್ಯಕರ್ತರು ವಲಸೆಹೋಗುವ ಸ್ವರೂಪದಲ್ಲಿ ಒಂದು ರೀತಿಯ ಚಂಚಲತೆಯಿದೆ. ಈ ನಾನಾ ಸಂಘಟನೆಗಳನ್ನು ಬೆಸೆಯುವುದೆಂದರೆ ಹಿಂದುತ್ವದಲ್ಲಿ ಅವುಗಳ ಸೈದ್ಧಾಂತಿಕ ನೆಲೆಗಟ್ಟು, ಹಾಗೆಯೇ ಆ ಗುರಿಗಳನ್ನು ಸಾಧಿಸಲು ಉಪಯೋಗಿಸುವ ಹಿಂಸಾತ್ಮಕ ವಿಧಾನ. 'ದಿ ಹಿಂದೂ' ಪತ್ರಿಕೆಯ ವರದಿಗಾರ ಸುದೀಪ್ತೋ ಮಂಡಲ್ ಬರ್ತ್‌ಡೇ ಪಾರ್ಟಿಯ ಮೇಲಿನ ದಾಳಿಯ ನೇತೃತ್ವ ವಹಿಸಿದ್ದ ಸುಭಾಷ್ ಪಡೀಲ್‌ನ ನಿರ್ದಿಷ್ಟ ಚರಿತ್ರೆಯ ಮೂಲಕ ಇದನ್ನು ವಿಶ್ಲೇಷಿಸುತ್ತಾರೆ:

> ಮಂಗಳೂರಿನ ಮಾರ್ನಿಂಗ್ ಮಿಸ್ಟ್ ಹೋಂ ಸ್ಟೇಯಲ್ಲಿ ಮಹಿಳೆಯರ ಮೇಲೆ ಶನಿವಾರ ನಡೆದ ದಾಳಿಯ ಮುಂದಾಳುತ್ವ ವಹಿಸಿದ್ದ ಹಿಂದೂ ಜಾಗರಣ ವೇದಿಕೆಯ ಕಾರ್ಯಕರ್ತ ಸುಭಾಷ್ ಪಡೀಲ್, ೨೦೦೯ ರಲ್ಲಿ ಕರ್ನಾಟಕದ ಅದೇ ನಗರದ ಪಬ್‌ನಲ್ಲಿ ಮಹಿಳೆಯರ ಮೇಲೆ ನಡೆಸಿದ ದಾಳಿಯಲ್ಲಿನ ತನ್ನ ಪಾತ್ರಕ್ಕಾಗಿ ಬಂಧನಕ್ಕೊಳಗಾಗಿದ್ದ ಆ ದಿನಗಳಲ್ಲಿ ಓರ್ವ ಬೀದಿ ಮಟ್ಟದ ಕಾರ್ಯಕರ್ತನಾಗಿದ್ದ. ಆ ದಾಳಿಯಲ್ಲಿ ಆತ ಪ್ರದರ್ಶಿಸಿದ ರೌದ್ರಾವತಾರವನ್ನು ಟೆಲಿವಿಶನ್ ಸಿಬ್ಬಂದಿ ಸ್ಪಷ್ಟವಾಗಿ ದಾಖಲಿಸಿದ್ದಾರೆ; ಸೇನೆಯಲ್ಲಿ ಆತನಿಗೆ ಘನತೆ ಮತ್ತು ಸ್ಥಾನ ಎರಡನ್ನೂ ತಂದುಕೊಟ್ಟಿತು.

ಇದೇ ಶ್ರೀರಾಮ ಸೇನೆಗೆ ಆತ ೨೦೦೬ ರಲ್ಲಿ ಸೇರಿದ್ದ. ಬಹುಬೇಗನೇ ಆತ ನಿಷ್ಕರುಣಿ ಬಾಡಿಗೆ ಗೂಂಡಾ ಆಗಿ ಮಂಗಳೂರಿನಲ್ಲಿ ಹೆಸರು ಗಳಿಸಿದ. ಬಿಲ್ಡರ್‌ಗಳು ಮತ್ತು ಭೂತಿಮಿಂಗಲಗಳಿಂದ ಆತನಿಗೆ ಬಲು ಬೇಡಿಕೆ ಬರುವಂತಾಯಿತು.

ಪ್ರಸಕ್ತ ವರ್ಷ ಮೇ ೨೫ ರಂದು, ಯೋಜನೆಗೆ ಭೂಮಿ ಬಿಟ್ಟುಕೊಡಲೊಪ್ಪದ ರೈತ ಕುಟುಂಬದ ಮೇಲೆ ದಾಳಿ ನಡೆಸಿದ್ದಕ್ಕೆ ಮಂಗಳೂರು ವಿಶೇಷ ವಿತ್ತ ವಲಯದ ಸಿಬ್ಬಂದಿಗಳು ಮತ್ತು ಗುತ್ತಿಗೆದಾರರ ಜತೆಯಲ್ಲಿ ಆತನ ಮೇಲೂ ಎಫ್‌ಐಆರ್ ಜಡಿಯಲಾಗಿತ್ತು. ಈ ದಾಳಿಯಲ್ಲಿ ಈರ್ವರು ಮಕ್ಕಳೂ ಸೇರಿದಂತೆ ನಾಲ್ಕು ಮಂದಿ ಆಸ್ಪತ್ರೆ ಸೇರಿದ್ದರು.

ಹೋಂ ಸ್ಟೇ ಮೇಲಣ ದಾಳಿಯ ಎರಡು ದಿನ ಹಿಂದೆ, ಜುಲೈ ೨೬ರ ಅಪರಾಹ್ನ ಸುಮಾರು ೧.೩೦ರ ಸುಮಾರಿಗೆ, ಮಂಗಳೂರಿನಿಂದ ಮುಡಿಪುವಿಗೆ ಒಟ್ಟಿಗೆ ಬಸ್‌ನಲ್ಲಿ ಪ್ರಯಾಣಿಸುತ್ತಿದ್ದ ಓರ್ವ ಮುಸ್ಲಿಂ ಹುಡುಗ ಮತ್ತು ಹಿಂದೂ ಹುಡುಗಿಯನ್ನು ಇದೇ ಪಡೀಲ್‌ನ ಅನುಯಾಯಿಗಳು ಅಪಹರಿಸಿ ಹಲ್ಲೆ ನಡೆಸಿದ್ದರು. ಬಳಿಕ ಈ ಜೋಡಿಯನ್ನು ಬಂದರು ಪೊಲೀಸರಿಗೆ ಒಪ್ಪಿಸಲಾಗಿತ್ತು. ಆದರೆ ಪೊಲೀಸರು ಹಲ್ಲೆಕೋರರ ಮೇಲೆ ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ.

ರಾಜಕೀಯ ಕಣದಲ್ಲಿ ಮತ್ತು ಸಂಘ ಪರಿವಾರದೊಳಗಡೆಯ ಪ್ರಾಧಾನ್ಯದ ವಿಚಾರದಲ್ಲಿ ಪಡೀಲ್ ತನ್ನ ಪ್ರತಿಸ್ಪರ್ಧಿ ಎಂಬುದನ್ನು ಬಜರಂಗದಳ ನಾಯಕ ಶರಣ್ ಪಂಪ್‌ವೆಲ್ ದೃಢೀಕರಿಸುತ್ತಾನೆ. ಶರಣ್‌ನ ಅಧಿಕಾರನೆಲೆಯ ಕೇಂದ್ರವಾದ ಪಂಪ್‌ವೆಲ್‌ನಲ್ಲಿ ಪಡೀಲ್ ತನ್ನ ಕಚೇರಿ ಸ್ಥಾಪಿಸ ಬಯಸಿದಾಗ, ಸುಮಾರು ೧೦ ದಿನಗಳ ಹಿಂದೆ, ಅವರ ನಡುವೆ ತೀವ್ರ ಮಾತಿನ ಚಕಮಕಿ ನಡೆದಿತ್ತು. ಕೊನೆಗೆ ಒಲ್ಲದ ಮನಸ್ಸಿನಿಂದ ಪಕ್ಕದ ಶಿವಭಾಗ್‌ನಲ್ಲಿ ಕಚೇರಿ ತೆರೆಯಲು ಪಡೀಲ್ ಒಪ್ಪಿಕೊಂಡ.

'ಆ ಘಟನೆಯ ಬಳಿಕ ಆತ ತನ್ನ ಶಕ್ತಿಸಾಮರ್ಥ್ಯ ಸಾಬೀತುಪಡಿಸಬಯಸಿದ್ದ. ಪ್ರತಿಸ್ಪರ್ಧಿ ಹಿಂದುತ್ವ ಸಂಘಟನೆಗಳಿಗೆ ಸಂದೇಶವೊಂದನ್ನು ರವಾನಿಸುವುದು ಕೂಡಾ ಪ್ರಸ್ತುತ (ಶನಿವಾರದ) ದಾಳಿಯ ಗುರಿಯಾಗಿತ್ತು' ಎಂದು ಹೆಸರು ಹೇಳಲಿಚ್ಛಿಸದ, ಪರಿವಾರದ ಒಳಗಿನವರೊಬ್ಬರು ಹೇಳುತ್ತಾರೆ.

'ಗುಜರಾತ್ ಗಲಭೆಗಳಲ್ಲಿ ಬಜರಂಗ ದಳದ ಪಾತ್ರದಿಂದ ಸ್ಫೂರ್ತಿ ಪಡೆದಾಗ ಪಡೀಲ್‌ನ ವಯಸ್ಸು ಕೇವಲ ೧೮. ೨೦೦೨ ರಲ್ಲಿ ಆತ ಸಂಘಟನೆಯನ್ನು ಸೇರಿದ್ದ' ಎಂದು ಆತನ ಗೆಳೆಯರು ಹೇಳುತ್ತಾರೆ. 'ಆತ ತನ್ನ ಮನೆಯಲ್ಲಿ ತೂಗುಹಾಕಿದ್ದ (ಮುಖ್ಯಮಂತ್ರಿ) ನರೇಂದ್ರ ಮೋದಿಯ ಭಾವಚಿತ್ರಕ್ಕೆ ಪೂಜೆಸಲ್ಲಿಸುತ್ತಿದ್ದ' ಎಂನ್ನುವ ಸುದತ್ತ ಜೈನ್, ಬಜರಂಗ ದಳವನ್ನು ಪಡೀಲ್ ಸೇರಿದ ಒಂದು ವರ್ಷದ ಬಳಿಕ ಈತ ಅದನ್ನು ಸೇರಿದ ಎಂದು ನೆನಪಿಸಿಕೊಳ್ಳುತ್ತಾನೆ.

## ಇತರ ಹಿಂದುತ್ವ ಗುಂಪುಗಳ ಪಾತ್ರ

ಈಗಾಗಲೇ ಮೇಲೆ ಗಮನಿಸಲಾದಂತೆ, ಇಂದು ಸುಭಾಷ್ ಪಡೀಲ್ ಹಿಂದೂ ಜಾಗರಣಾ ವೇದಿಕೆಯಲ್ಲಿದ್ದರೂ ನಾಳೆ ಬಜರಂಗದಳದಲ್ಲಿರಬಹುದು ಅಥವಾ ಬಿಜೆಪಿಯನ್ನು ಪ್ರತಿನಿಧಿಸುತ್ತಾ ಮಂಗಳೂರಿನಿಂದ ಎಮ್‌ಎಲ್‌ಎಯಾಗಿ ಚುನಾವಣಾ ಅಭ್ಯರ್ಥಿಯಾಗಲೂ ಬಹುದು. ಹಿಂದೂ ಜಾಗರಣಾ ವೇದಿಕೆಯ ಕೃತ್ಯಗಳನ್ನು ಬೆಂಬಲಿಸಲು ಹಾಗೂ ತನ್ನ ಹೆಸರಿನಲ್ಲಿ ಇತರ ಸಂಘ ಪರಿವಾರದ ಸಂಘಟನೆಗಳು ನಡೆಸಿದ ಕೃತ್ಯಗಳನ್ನು ಎದುರಿಸುವ ಕಾನೂನು ಪರಿಣಾಮಗಳಿಂದ ಹಿಂದೂ ಜಾಗರಣಾ ವೇದಿಕೆಯನ್ನು ರಕ್ಷಿಸಲು ಸ್ಪಷ್ಟವಾದ ಒಂದು ತಂತ್ರ ಇದೆ.

ವಿಶ್ವಹಿಂದೂ ಪರಿಷತ್‌ನ ವಕ್ತಾರ ಸ್ಪಷ್ಟಪಡಿಸಿದಂತೆ, ವಿಶ್ವಹಿಂದೂ ಪರಿಷತ್, ಬಜರಂಗದಳ ಮತ್ತು ಹಿಂದೂ ಜಾಗರಣಾ ವೇದಿಕೆ ಪ್ರತ್ಯೇಕ ಸಂಘಟನೆಗಳಾದರೂ, ಅಂತಿಮವಾಗಿ ಅವು ಆರ್‌ಎಸ್‌ಎಸ್ ಅಡಿಯಲ್ಲಿ ಬರುತ್ತವೆ ಮತ್ತು ಆರ್‌ಎಸ್‌ಎಸ್‌ನ ನಿರ್ಧಾರವೇ ಇಲ್ಲಿ ಅಂತಿಮ.

ಸದರಿ ಪ್ರಕರಣದಲ್ಲಿ ಕಂಡುಬರುವುದೇನೆಂದರೆ, ಹಿಂದೂ ಜಾಗರಣ ವೇದಿಕೆಯಿಂದ ಗಮನವನ್ನು ಬೇರೆಡೆ ತಿರುಗಿಸಲು ಕಾರ್ಯತಂತ್ರವೊಂದನ್ನು ಹೆಣೆಯಲಾಗಿದೆ. ಆ ಕಾರ್ಯತಂತ್ರದ ಒಂದು ಭಾಗವೆಂದರೆ, ದಾಳಿಯಲ್ಲಿ ಹಿಂದೂ ಜಾಗರಣ ವೇದಿಕೆಯ ಉದ್ದೇಶಗಳನ್ನು ಸಮರ್ಥಿಸಲು ಪ್ರಸನ್ನಾ ರವಿ ವಕ್ತಾರರಾಗಿರುವ ಹೊಸ ಸಂಘಟನೆ ಮಹಿಳಾ ಜಾಗೃತಿ ವೇದಿಕೆಗೆ ಚಾಲನೆ ನೀಡಿರುವುದು.

ದಾಳಿಯನ್ನು ಸಮರ್ಥಿಸಲು ಪಾರ್ಟಿಯಲ್ಲಿ ಮಾದಕ ದ್ರವ್ಯಗಳ ಬಳಕೆ ಇತ್ತು, ಹಾಗೆಯೇ ಪಾರ್ಟಿಯಲ್ಲಿ ಲೈಂಗಿಕ ಚಟುವಟಿಕೆ ಇತ್ತು ಎಂಬ ಒಂದೇ ತೆರನ ಭಾಷೆಯನ್ನು ಮಹಿಳಾ ಜಾಗೃತಿ ವೇದಿಕೆ ಮತ್ತು ವಿಶ್ವಹಿಂದೂ ಪರಿಷತ್, ಹಾಗೆಯೇ ಹಿಂದೂ ಜಾಗರಣಾ ವೇದಿಕೆಯ ಜಗದೀಶ ಕಾರಂತ ಬಳಸುವುದು ಇವರು ನೀಡಿದ ಮಾಧ್ಯಮ ಸಂದರ್ಶನಗಳಲ್ಲಿ ಎದ್ದು ಕಾಣಿಸುವ ಅಂಶಗಳನ್ನೆ. ಅಲ್ಲದೆ, ದಾಳಿಯನ್ನು ನಡೆಸಿರುವುದು ಕೋಪೋದ್ರಿಕ್ತ ಸ್ಥಳೀಯರು ಎಂದು ಒತ್ತಿ ಹೇಳುವ ಮೂಲಕ ಹಿಂದೂ ಜಾಗರಣಾ ವೇದಿಕೆಯಿಂದ ಗಮನವನ್ನು ಬೇರೆಡೆ ತಿರುಗಿಸುವುದು ಇಲ್ಲಿನ ಮತ್ತೊಂದು ಕಾರ್ಯತಂತ್ರ. ಹಾಗೆ ನೋಡಿದರೆ, 'ಸ್ಥಳೀಯರ ತಕ್ಷಣದ ಪ್ರತಿಕ್ರಿಯೆ' ಎಂಬ ವಾದದ ತುತ್ತೂರಿ ಊದುವ ಕಾರ್ಯವನ್ನು ಹಿಂದೆ ೧೯೯೨ ರಲ್ಲಿ ಬಾಬ್ರಿ ಮಸೀದಿ ಧ್ವಂಸದಿಂದ ಹಿಡಿದು ೨೦೦೮ರಲ್ಲಿನ ಕರ್ನಾಟಕದ ಚರ್ಚ್‌ಗಳ ಮೇಲಣ ದಾಳಿಯವರೆಗೂ ಹಿಂದುತ್ವ ಗುಂಪುಗಳ ಕಾನೂನುಬಾಹಿರ ಮತ್ತು ಯೋಜಿತ ಕೃತ್ಯಗಳನ್ನು ಸಮರ್ಥಿಸಲು ಬಳಸಲಾಗಿತ್ತು ಎಂಬುದು ಇಲ್ಲಿ ಮತ್ತೆ ಗಮನಿಸತಕ್ಕ ಅಂಶ. ಹೀಗೆ ವ್ಯವಸ್ಥಿತವಾಗಿ ಗಮನ ಬೇರೆಡೆ ಸರಿಸುವುದರ ಹಿಂದಿನ ಉದ್ದೇಶವೇನೆಂದರೆ, 'ಸ್ಥಳೀಯರಿಂದ ತಕ್ಷಣದ ಸಿಟ್ಟಿನ ಪ್ರತಿಕ್ರಿಯೆ' ಎಂದು ಎಲ್ಲಾ ಕಾನೂನುಬಾಹಿರ ಕೃತ್ಯಗಳನ್ನು ಸಮರ್ಥಿಸಿಕೊಳ್ಳುವ ಮೂಲಕ, ಸಂಘ ಮತ್ತು ಅದರ ತಂಡಗಳನ್ನು ಕಾನೂನು ಬಾಹಿರ ಕೃತ್ಯಗಳು ಹೊಣೆಯಾಗದಂತೆ ನೋಡಿಕೊಳ್ಳುವುದು.

## ಪೊಲೀಸರ ಪಾತ್ರ

ಪೊಲೀಸರ ಪಾತ್ರದ ಸುತ್ತ ಅನೇಕ ಪ್ರಶ್ನೆಗಳಿವೆ. ಸುಭಾಷ್ ಪಡೀಲ್ ಅದಾಗಲೇ ಪೊಲೀಸರಿಗೆ ಮಾಹಿತಿ ನೀಡಿದ್ದರಿಂದ ಸಂಭಾವ್ಯ ದಾಳಿಯ ಬಗ್ಗೆ ಅವರಿಗೆ ಮೊದಲೇ ಗೊತ್ತಿತ್ತು, ಎಂಬುದು ಸಹಾಯ ಟಿವಿಯ ಕ್ಯಾಮರಾಮನ್ ಶರಣ್ ನಮಗೆ ನೀಡಿರುವ ಹೇಳಿಕೆಯಿಂದ ಸ್ಪಷ್ಟವಾಗುತ್ತದೆ. ಯಾವ ಧಾವಂತವೂ ಇಲ್ಲದೆ ಆರಾಮವಾಗಿ ಪೊಲೀಸರು ಒಳಗಡೆ ಓಡಾಡುತ್ತಿದ್ದರೆಂದು ಪೊಲೀಸರ ತೀರಾ ಮಾಮೂಲಿ ಪ್ರತಿಕ್ರಿಯೆಯ ಬಗ್ಗೆ ಸಂತ್ರಸ್ತರು ನೀಡಿರುವ ಹೇಳಿಕೆಯು ಒಂದೋ ಆಲಸ್ಯವನ್ನು, ಅಥವಾ ಏನು ನಡೆಯುತ್ತಿತ್ತು ಎನ್ನುವುದು ಅವರಿಗೆ ಮೊದಲೇ ಗೊತ್ತಿತ್ತು ಮತ್ತು ಅದನ್ನು ತಡೆಯುವ ತುರ್ತೇನೂ ಅವರಿಗೆ ಇರಲಿಲ್ಲ ಎಂಬುದನ್ನು ಸೂಚಿಸುತ್ತದೆ. ಅಲ್ಲದೆ ಇನ್‌ಸ್ಪೆಕ್ಟರ್ ರವೀಶ್ ನಾಯಕ್‌ರ ದೂರವಾಣಿ ಸಂಖ್ಯೆಗೆ ಕರೆ ಮಾಡಿದಾಗ ಅವರು ಕರೆಯನ್ನು ಎತ್ತಿಕೊಳ್ಳಲಿಲ್ಲ ಎಂಬ ಅಂಶವು, ಒಂದೋ ಹೊಣೆಗೇಡಿತನವನ್ನು ಅಥವಾ ಕೃತ್ಯದಲ್ಲಿ ಅವರ ಪಾಲುದಾರಿಕೆಯನ್ನು ಸೂಚಿಸುತ್ತದೆ.

ಪೊಲೀಸರ ಮೇಲಣ ನಿಜವಾಗಿ ತಪ್ಪುಹೊರಿಸುವ ಆಪಾದನೆಯೆಂದರೆ ಘಟನಾ ಸ್ಥಳಕ್ಕೆ ತಲಪಿದ ಮೇಲೆ ಅವರ ನಡೆವಳಿಕೆ. ದಾಖಲಿಸಲಾಗಿರುವ ಪ್ರಥಮ ಮಾಹಿತಿ ವರದಿಯು ಲೈಂಗಿಕ ಪೀಡನೆ, ಕ್ರಿಮಿನಲ್ ಬೆದರಿಕೆ, ದರೋಡೆ, ಅತಿಕ್ರಮಣದಂತಹ ಗಂಭೀರ ಅಪರಾಧಗಳು ನಡೆದಿವೆ ಎಂದು ಹೇಳಿರುವಾಗ ಆರೋಪಿಗಳನ್ನು ತಕ್ಷಣ ಬಂಧಿಸದೆ ಪೊಲೀಸರು ದಾಳಿಕೋರರನ್ನು ಹೇಗೆ ಸುರಕ್ಷಿತವಾಗಿ ಹೊರಹೋಗಲು ಬಿಟ್ಟರು? ಘಟನಾ ಸ್ಥಳವನ್ನು ತಲಪಿದಾಗ ಏನೂ ಅಪರಾಧ ನಡೆದೇ ಇಲ್ಲವೇನೋ ಎಂಬಂತೆ ಅವರೇಕೆ ವರ್ತಿಸಿದರು? ಪೊಲೀಸರು ಮತ್ತು ದಾಳಿಕೋರರ ನಡುವೆ ಮಾಮೂಲಿ ಮತ್ತು ಸ್ನೇಹಮಯ ಮಾತುಕತೆ ನಡೆದಿರುವ ಬಗ್ಗೆ ಒಂದಕ್ಕಿಂತ ಹೆಚ್ಚು ಸಂತ್ರಸ್ತರು ಸಾಕ್ಷ್ಯ ಹೇಳಿದ್ದು, ಸದರಿ ದಾಳಿಯಲ್ಲಿ ಪೊಲೀಸ್ ಪಾಲುದಾರಿಕೆಯ ಲಜ್ಜಾಸ್ಪದ ಮಟ್ಟವನ್ನು ಹೇಳುತ್ತದೆ.

ರವೀಶ್ ನಾಯಕ್‌ರ ಸಮ್ಮುಖದಲ್ಲಿಯೇ ಓರ್ವ ದಾಳಿಕೋರ ತನ್ನ ಕಪಾಳಕ್ಕೆ ಹೊಡೆದ ಎಂದು ಸಂತ್ರಸ್ತನೋರ್ವ ನೀಡಿದ ಸಾಕ್ಷ್ಯವು, ರಕ್ಷಣೆ ನೀಡುವ ಹೊಣೆಗಾರಿಕೆಯಿಂದ ಪೊಲೀಸರು ಆಘಾತಕಾರಿ ರೀತಿಯಲ್ಲಿ ನುಣುಚಿಕೊಂಡಿರುವುದನ್ನು ಮತ್ತು ಅಲ್ಲಿ ಒಬ್ಬನೇ ಒಬ್ಬ ಕಾನ್‌ಸ್ಟೇಬಲ್ ಇದ್ದಿದ್ದರೂ ದಾಳಿ ನಡೆಯುತ್ತಿರಲಿಲ್ಲ ಎಂಬ ಕಮೀಷನರ್ ಸೀಮಂತ್ ಕುಮಾರ್ ಸಿಂಗ್ ಹೇಳಿಕೆಯು ಸುಳ್ಳು ಎನ್ನುವುದನ್ನು ತೋರಿಸುತ್ತದೆ. ದಾಳಿಯ ಬಳಿಕ ಪೊಲೀಸ್ ಮತ್ತು ದಾಳಿಕೋರರ ನಡುವೆ ಸ್ನೇಹಮಯ ರೀತಿಯಲ್ಲಿ ತುಂಬಾ ಹೊತ್ತು ಸಲ್ಲಾಪ ಮುಂದುವರಿದ ಬಗ್ಗೆ ಸಾಕ್ಷಿಗಳು ನೀಡಿರುವ ಹೇಳಿಕೆಯು ಮತ್ತೆ ಸದರಿ ಘಟನೆಯ ಅವಧಿಯಲ್ಲಿ ಪೊಲೀಸರ ನಿಷ್ಪಕ್ಷಪಾತಿತನದ ಮೇಲೆ ಅನುಮಾನಗಳನ್ನು ಕವಿಸುತ್ತದೆ. ದಾಳಿಕೋರರನ್ನು ಹಾಗೇ ಬಿಟ್ಟುಬಿಡಲಾಯಿತಾದರೆ, ದಾಳಿಗೊಳಗಾದವರನ್ನು ಮತ್ತೆ ಅಪಮಾನಿಸಿ ತಡರಾತ್ರಿ ೧ ಗಂಟೆಯವರೆಗೂ ಪೊಲೀಸ್ ಠಾಣೆಯಲ್ಲಿ ನಿಲ್ಲುವಂತೆ ಮಾಡಲಾಗಿತ್ತು ಎಂಬ ವಿಚಾರದಲ್ಲಿ ಪೊಲೀಸರು ಸ್ಪಷ್ಟನೆ ನೀಡಬೇಕಾಗುತ್ತದೆ. ಘಟನೆ ಸಮಯದಲ್ಲಿ ಮತ್ತು ಆ ಬಳಿಕ ಪೊಲೀಸರ ಒಟ್ಟು ವರ್ತನೆಯನ್ನು ನೋಡುವಾಗ, ನಿಷ್ಕ್ರಿಯತೆಯ, ಘಟನೆಯು ನಡೆಯಲು ಅವಕಾಶಮಾಡಿಕೊಡುವ ಮತ್ತು ದಾಳಿಕೋರರು ಆರಾಮವಾಗಿ ತಪ್ಪಿಸಿಕೊಂಡು ಹೋಗಲು ಬಿಡುವ ಮೂಲಕ ಅವರೂ ಘಟನೆಯಲ್ಲಿ ಭಾಗೀದಾರರಿರಬಹುದೇನೋ

ಎಂಬ ತೀವ್ರ ಅನುಮಾನಕ್ಕೆ ಎಡೆಮಾಡಿಕೊಡುತ್ತದೆ. ವೀಡಿಯೋ ದಾಖಲೆಯ ಕಾರಣವಾಗಿ ಉಂಟಾದ ಪ್ರತಿಕೂಲ ಪ್ರಚಾರದ ಒತ್ತಡವಷ್ಟೇ ಅವರು ಕ್ರಮ ಕೈಗೊಳ್ಳದೆ ಬೇರೆ ವಿಧಿ ಇಲ್ಲದಂತೆ ಮಾಡಿತು. ಮೊದಲ ಬಂಧನವನ್ನು ಮಾಡಿದ್ದು ರಾತ್ರಿ ೨ ಗಂಟೆಯ ಬಳಿಕವಷ್ಟೇ. ಆದರೆ ದಾಳಿಯ ದೃಶ್ಯಗಳನ್ನು ಸಂಜೆ ೭.೪೫ ರಿಂದ ನಿರಂತರವಾಗಿ ಪ್ರಸಾರ ಮಾಡಲಾಗಿತ್ತು. ದಾಳಿ ಘಟನೆಯ ದೃಶ್ಯಗಳು ರಾಷ್ಟ್ರೀಯ ಮಟ್ಟದಲ್ಲಿ ಆಕ್ರೋಶ ಉಂಟುಮಾಡಿದ ಮತ್ತು ಇನ್ನು ಕಡೆಗಣಿಸುವುದು ಸಾಧ್ಯವೇ ಇಲ್ಲವೇನೋ ಎನ್ನುವ ಹಂತ ತಲಪಿದ ಬಳಿಕವಷ್ಟೇ ಬಂಧನಗಳು ನಡೆದವು ಎಂಬ ತೀರ್ಮಾನಕ್ಕೆ ಬರುವುದು ಸೂಕ್ತವೆಂದು ಕಾಣುತ್ತದೆ.

ಯಾವ ಅಡೆತಡೆಯೂ ಇಲ್ಲದೆ ಈ ಘಟನೆಯು ನಡೆಯಲು ಅವಕಾಶಮಾಡಿಕೊಡುವಲ್ಲಿ ಪೊಲೀಸರ ಪಾತ್ರದ ಬಗ್ಗೆ ಪ್ರಥಮ ಮಾಹಿತಿ ವರದಿಯಲ್ಲಿ ಉಲ್ಲೇಖವಾಗಿಯೇ ಇಲ್ಲ. ಪೊಲೀಸರು ನಿರ್ವಹಿಸಿದ ನಕಾರಾತ್ಮಕ ಪಾತ್ರದ ಬಗ್ಗೆ ಸಂತ್ರಸ್ತರ ಸಾಕ್ಷ್ಯವು ಸ್ಪಷ್ಟವಾಗಿ ದೋಷಾರೋಪ ಹೊರಿಸಿದ್ದರೂ, ಅವರು ಹೇಳಿದ ಆ ಯಾವ ಸಂಗತಿಯನ್ನೂ ವಿಜಯ್‌ಕುಮಾರ್ ಕೊಟ್ಟ ದೂರಿನಲ್ಲಿ ದಾಖಲಿಸಿಲ್ಲ. ವಾಸ್ತವದಲ್ಲಿ, ಖಾಲಿ ಕಾಗದದ ಮೇಲೆ ಸಹಿಮಾಡುವಂತೆ ತನ್ನನ್ನು ಬಲವಂತಪಡಿಸಲಾಯಿತು, ಬಳಿಕ ಅದನ್ನೇ ದೂರಾಗಿ ಪರಿವರ್ತಿಸಲಾಯಿತು ಎಂದು ವಿಜಯ್‌ಕುಮಾರ್ ಹೇಳಿಕೆ ನೀಡಿದ್ದಾನೆ. ಹಾಗಾಗಿ, ದಾಳಿಯ ಯಾವುದೇ ಹೊಣೆಯಿಂದ ಹಿರಿಯ ಪೊಲೀಸ್ ಸಿಬ್ಬಂದಿಗಳನ್ನು ಪಾರುಮಾಡಲು ಎಲ್ಲ ಯತ್ನಗಳನ್ನು ಮಾಡುವುದರೊಂದಿಗೆ ಪೊಲೀಸರ ಭಾರೀ ಅನುಮಾನಾಸ್ಪದ ಪಾತ್ರವನ್ನು ಮುಚ್ಚಿಹಾಕಲು ಯತ್ನಿಸಲಾಗುತ್ತಿದೆ.

## ಮಾಧ್ಯಮದ ಪಾತ್ರ

ಲಭ್ಯ ವಿವರಣೆಗಳ ಪ್ರಕಾರ, ಹೋಂ ಸ್ಟೇ ದಾಳಿಯ ಚಿತ್ರೀಕರಣ ನಡೆಸಿದ್ದ ಸಹಾಯ ಟಿವಿಯ ಕ್ಯಾಮರಾಮನ್ ಶರಣ್, ಪಬ್ ದಾಳಿ ನಡೆದ ಸಂದರ್ಭದಲ್ಲಿಯೂ ಉಪಸ್ಥಿತನಿದ್ದ. ಪಬ್ ದಾಳಿಯು ಶ್ರೀರಾಮಸೇನೆಯ ವೃತ್ತಿಗೆ ಚಾಲನೆ ನೀಡುವ ಮೂಲಕ ಮತ್ತು ಬರ್ತ್‌ಡೇ ಪಾರ್ಟಿ ದಾಳಿಯು ಸುಭಾಷ್ ಪಡೀಲ್‌ಗೆ ಪ್ರಾಧಾನ್ಯ ತಂದುಕೊಡುವ ಮೂಲಕ ಎರಡೂ ಘಟನೆಗಳು ಜಾಗತಿಕ ಘಟನೆಗಳಾದವು.

ವಿವಾದಾತೀತ ಸಂಗತಿ ಏನೆಂದರೆ, ಇಲ್ಲಿ ಮಾಧ್ಯಮಗಳು ಇಲ್ಲದೆ ಹೋಗುತ್ತಿದ್ದರೆ, ಇಲ್ಲಿ ಸದರಿ ಚರ್ಚೆಯೇ ಇರುತ್ತಿರಲಿಲ್ಲ. ದುರದೃಷ್ಟವಶಾತ್ ಮಾಮೂಲಿ ಘಟನೆಗಳ ಭಾಗವೊಂದನ್ನು (ದಕ್ಷಿಣ ಕನ್ನಡದಲ್ಲಿ) ಒಂದು ಅಸಾಧಾರಣ ಘಟನೆಯನ್ನಾಗಿ ಮಾಡುವಲ್ಲಿ ಮಾಧ್ಯಮಗಳ ಪಾತ್ರವು ಪ್ರಶ್ನಾರ್ಹವಾಗಿದೆ. ಅಪರಾಧವೊಂದು ನಡೆಯಲಿದೆ ಎಂದು ಮಾಧ್ಯಮಗಳಿಗೆ ತಿಳಿದುಬಂದಾಗ ಅವುಗಳ ಪಾತ್ರ ಏನಿರಬೇಕು? ಪೊಲೀಸರಿಗೆ ಮಾಹಿತಿ ನೀಡುವ ಹೊಣೆಗಾರಿಕೆ ಅವರಿಗಿದೆಯೇ?

ಸದರಿ ಘಟನೆಯಲ್ಲಿ ಒಳಗೊಂಡ ಮೂರೂ ಮಾಧ್ಯಮ ಮಂದಿ ಈ ಪ್ರಶ್ನೆಯ ವಿಚಾರದಲ್ಲಿ ಬೇರೆ ಬೇರೆ ನಿಲುವುಗಳನ್ನು ತೆಗೆದುಕೊಂಡಿದ್ದಾರೆ. ಕೃತ್ಯ ನಡೆಸಿದ ಸುಭಾಷ್ ಪಡೀಲ್ ಅದಾಗಲೇ ಪೊಲೀಸರಿಗೆ ಮಾಹಿತಿ ನೀಡಿದ್ದ ಎಂದು ಸಹಾಯ್ ಟಿವಿಯ ಶರಣ್ ಹೇಳುತ್ತಾರೆ. ಏನಾಗಲಿದೆ ಎಂದು ಮೊದಲೇ ಗೊತ್ತಿರುತ್ತಿದ್ದರೆ ತಾನು ಪೊಲೀಸರಿಗೆ ತಿಳಿಸುತ್ತಿದ್ದೆ ಎಂದೂ ಆತ ಹೇಳುತ್ತಾನೆ.

ನವೀನ್ ಸೂರಿಂಜೆ ಮತ್ತು ರಾಜೇಶ್ ಶ್ರೀನಿವಾಸ್ ಇಬ್ಬರೂ, ಗುರುತರ ಅಪರಾಧಗಳನ್ನು ನಡೆಸಲಾಗುತ್ತಿದೆ ಎಂದು ಅರಿವಾಗುತ್ತಲೇ ಪೊಲೀಸರಿಗೆ ತಿಳಿಸಲು ಯತ್ನಿಸಿದರು. ಎರಡೂ ಮಾಧ್ಯಮ ಮಂದಿಯ ಸಾಕ್ಷ್ಯಗಳಿಂದ ತಿಳಿದುಬರುವುದೇನೆಂದರೆ, ಒಂದೆಡೆಯಲ್ಲಿ ನವೀನ್ ಸೂರಿಂಜೆ ಮತ್ತು ರಾಜೇಶ್ ಶ್ರೀನಿವಾಸ್ ಹಾಗೂ ಇನ್ನೊಂದೆಡೆ ಶರಣ್ ಅವರ ದೃಷ್ಟಿಕೋನಗಳಲ್ಲಿ ವ್ಯತ್ಯಾಸವಿದೆ. ದೃಷ್ಟಿಕೋನದಲ್ಲಿನ ಈ ವ್ಯತ್ಯಾಸವು ಅವರೀರ್ವರೂ ತೆಗೆದುಕೊಂಡ ಭಾರೀ ಭಿನ್ನ ಕ್ರಮಗಳಾಗಿ ಪರಿವರ್ತಿತವಾಗಿವೆ. ನವೀನ್ ಮತ್ತು ರಾಜೇಶ್ ಪೊಲೀಸರನ್ನು ಸಂಪರ್ಕಿಸಲು ಯತ್ನಿಸಿದರೆ, ಯಾವುದೇ ಪ್ರತಿಬಂಧಕ ಕ್ರಮ ತೆಗೆದುಕೊಳ್ಳದೆ ಚಿತ್ರೀಕರಿಸುವುದು ಶರಣ್‌ಗೆ ಸಮಾಧಾನ ತಂದಿತ್ತು.

ಸಂತ್ರಸ್ತರನ್ನು ತೋರಿಸುವುದರ ಮೇಲೆ ಮಾಧ್ಯಮ ಸಿಬ್ಬಂದಿ ಫೋಕಸ್ ಮಾಡಬೇಕಿತ್ತೇ? ಅಥವಾ ದಾಳಿಕೋರರ ಮೇಲೆ ಫೋಕಸ್ ಮಾಡಬೇಕಿತ್ತೇ? ಎಸಗಲಾಗುತ್ತಿರುವ ಅಪರಾಧವನ್ನು ನಿಲ್ಲಿಸಲು ಮಾಧ್ಯಮ ಸಿಬ್ಬಂದಿ ಯತ್ನಿಸಬೇಕಿತ್ತೇ? ನೈತಿಕ ಪ್ರತಿಕ್ರಿಯೆ ಹೇಗಿರಬೇಕಿತ್ತು? ಎಂಬ ವಿಚಾರದಲ್ಲಿ ಸ್ವತಃ ಚಿತ್ರೀಕರಣದ ಸುತ್ತಲಲ್ಲಿಯೇ ನೈತಿಕ ಪ್ರಶ್ನೆಗಳಿವೆ.

ಯಾಕೆ ಚಿತ್ರೀಕರಿಸಲಾಯಿತು ಎನ್ನುವುದಕ್ಕೆ ಕೊಡಲಾಗುತ್ತಿರುವ ಸಮರ್ಥನೆಯೆಂದರೆ, ಮಾಧ್ಯಮ ದೃಶ್ಯ ದಾಖಲೆಗಳು ಇಲ್ಲದೇ ಹೋಗುತ್ತಿದ್ದರೆ ಇದು ಈಗ ಯಾವ ಪ್ರಮಾಣದ ಆಕ್ರೋಶವನ್ನು ಉಂಟುಮಾಡಿದೆಯೋ ಆ ಪ್ರಮಾಣದ ಆಕ್ರೋಶವನ್ನು ಉಂಟುಮಾಡುತ್ತಿರಲಿಲ್ಲ ಎನ್ನುವುದು. ಸದರಿ ಪ್ರಸಾರವು ರಾಷ್ಟ್ರೀಯ ಮಟ್ಟದಲ್ಲಿ ಆಕ್ರೋಶವನ್ನು ಉಂಟುಮಾಡಿತ್ತಿರಲಿಲ್ಲವಾದರೆ, ಪ್ರಾಯಶಃ ಆ ದಾಳಿಕೋರರ ಮೇಲೆ ಒಂದು ಕೇಸು ಕೂಡಾ ದಾಖಲಾಗುತ್ತಿರಲಿಲ್ಲ. ಪೋಲೀಸರು ದುಷ್ಕರ್ಮಿಗಳನ್ನು ಸಲೀಸಾಗಿ ಹೊರಹೋಗಲು ಅವಕಾಶ ಮಾಡಿಕೊಟ್ಟಿರುವುದು ಪೋಲೀಸರ ಪ್ರತಿಕ್ರಿಯೆಯಲ್ಲಿನ ತಾತ್ಸಾರ ಮನೋಭಾವವನ್ನು ತೋರಿಸಿಕೊಟ್ಟಿದ್ದರೆ, ಮುಂದೆ ಅದನ್ನು ತಿರುವು ಮುರುವು ಮಾಡಿದ್ದು ಮಾಧ್ಯಮ ಪ್ರಸಾರ. ಅದರ ಪರಿಣಾಮವಾಗಿ ಪೋಲೀಸರು ದುಷ್ಕರ್ಮಿಗಳ ವಿರುದ್ಧ ಕ್ರಮ ತೆಗೆದುಕೊಳ್ಳದೆ ಬೇರೆ ದಾರಿ ಇಲ್ಲದಂತಾಯಿತು. ದಕ್ಷಿಣ ಕನ್ನಡದಲ್ಲಿ ಇಂತಹ ದಾಳಿಗಳ ಚರಿತ್ರೆಯನ್ನು ಪರಿಶೀಲಿಸಿದರೆ ಇದು ಸುಸ್ಪಷ್ಟ. ಮುಂದಿನ ಭಾಗದಲ್ಲಿ ದಾಖಲಿಸಲಾಗಿರುವಂತೆ, ೧೫.೦೮.೨೦೧೧ ರಂದು, ಬಜರಂಗ ದಳದ ಕಾರ್ಯಕರ್ತರು ಪಾರ್ಟಿಯೊಂದರ ಮೇಲೆ ಮಾಡಿದ ಇದೇ ತೆರನ ದಾಳಿಯನ್ನು ವಾರ್ತಾಭಾರತಿ ಪತ್ರಿಕೆಯು ವರದಿ ಮಾಡಿದೆ. ಅಲ್ಲಿ ಪಾರ್ಟಿಗೆ ಹೋದವರನ್ನು ಬರ್ಬರವಾಗಿ ಥಳಿಸಲಾಯಿತು. ಆದರೂ ಈ ಘಟನೆ ರಾಷ್ಟ್ರೀಯ ಮಾಧ್ಯಮದಲ್ಲಿ ಸುದ್ದಿಯಾಗಲಿಲ್ಲ. ಯಾಕೆಂದರೆ ಸಾರ್ವಜನಿಕ ಅಭಿಪ್ರಾಯವನ್ನು ಉದ್ರೇಕಿಸುವಂತಹ ಯಾವುದೇ ದೃಶ್ಯಗಳು ಪ್ರಸಾರವಾಗಿರಲಿಲ್ಲ.

ಈ ಹಿನ್ನೆಲೆಯಲ್ಲಿ, ಅದಾಗಲೇ ಯಾತನೆಗೊಳಗಾದ ಸಂತ್ರಸ್ತರನ್ನು, ಅವರು ಅನುಭವಿಸಿದ ಅಪಮಾನದ ಚಿತ್ರಣವನ್ನು ರಾಷ್ಟ್ರೀಯ ಶ್ರೋತೃಗಳಿಗೆ ಮತ್ತೆ ಮತ್ತೆ ನಿರಂತರವಾಗಿ ಪ್ರಸಾರ ಮಾಡುವ ಮೂಲಕ ಮತ್ತೆ ಅವರನ್ನು ಬಲಿಪಶುಮಾಡಲಾಯಿತು ಎನ್ನುವುದರೆಡೆಗೆ ಬೆಟ್ಟುಮಾಡುವ ಅಗತ್ಯವಿದೆ. ಯುವಕ ಯುವತಿಯರು ಅಪಮಾನಕ್ಕೀಡಾಗುತ್ತಿರುವ ಕೃತ್ಯದ ಮೇಲೆ ಫೋಕಸಾದ ದೃಶ್ಯಗಳ ಪ್ರಸಾರದಲ್ಲಿಯೂ ಕಾಮೋದ್ರೇಕ ಮತ್ತು ವಿಕೃತ ಕುತೂಹಲದ ಅಂಶ ಇತ್ತು. ನೈತಿಕ ಸೂಕ್ಷ್ಮತೆ ಇರುವ ಯಾರಿಗೇ ಆದರೂ, ಈ ದೃಶ್ಯಗಳು ಮನಕಲಕುವಂತಿದ್ದು, ಇಂತಹ ದೃಶ್ಯಗಳನ್ನು ಮತ್ತೆ ಮತ್ತೆ ಪ್ರಸಾರ ಮಾಡುವುದೆಂದರೆ ಇತರರ ಘನತೆ ಕುಗ್ಗಿಸುವಲ್ಲಿ ಪ್ರಜ್ಞಾಪೂರ್ವಕ ಭಾಗೀದಾರಿಕೆ ಎನಿಸುತ್ತದೆ. ಸಹಜವಾಗಿಯೇ ನೋವುಂಟಾಗುತ್ತದೆ ಎನಿಸುವ ಕೆಲವೊಂದು ನೈತಿಕ ಸೂಕ್ಷ್ಮತೆಗಳು ಅಲ್ಲಿದ್ದವು. ಪೋಲೀಸರಿಗೆ ಕರೆಮಾಡಿ ತಿಳಿಸುವುದು ಅಗತ್ಯ ಎಂದು ಕನಿಷ್ಠ ಪಕ್ಷ ಮಾಧ್ಯಮದ ಓರ್ವ ವ್ಯಕ್ತಿಗೆ, ಅಂದರೆ ಕ್ಯಾಮರಾಮನ್ ಶರಣ್‌ಗೆ ಕಾಣಲಿಲ್ಲ ಮತ್ತು ಆತ ಸಂಪೂರ್ಣ ದಾಳಿಯ ಮೇಲೆಯೇ ಗಮನ ಕೇಂದ್ರೀಕರಿಸಿದ್ದ ಎನ್ನುವುದು ಸದರಿ ಮಾಧ್ಯಮ ವ್ಯಕ್ತಿಗೆ ನೀತಿ ವಿವಕ್ಷೆಯಿಲ್ಲದ ಇಣುಕು ಕಾಮಿ ಮತ್ತು ಭಾಗಿ ಎಂಬ ಇಮೇಜನ್ನು ತಂದು ಕೊಡುವ ಅಂಶ.

ಹಿಂದೂ ಜಾಗರಣಾ ವೇದಿಕೆಯ ಹಿಂಸಾತ್ಮಕ ಮತ್ತು ಕಾನೂನುಬಾಹಿರ ಚಟುವಟಿಕೆಗಳನ್ನು ಬಯಲಿಗೆಳೆಯುವ ವರದಿಗಾರಿಕೆ ಮತ್ತು ಯುವಕ ಯುವತಿಯರನ್ನು ಅವಹೇಳನ ಮಾಡುವ ಕಾರ್ಯದಲ್ಲಿ ನೀತಿವಿವಕ್ಷೆ ರಹಿತವಾಗಿ ಭಾಗಿಯಾಗುವ ವರದಿಗಾರಿಕೆ, ಇವೆರಡರ ನಡುವೆ ಒಂದು ಸಮತೋಲನವನ್ನು ಕಾಯ್ದುಕೊಳ್ಳುವ ಅಗತ್ಯವಿದೆ.

## ರಾಜ್ಯ ಮಹಿಳಾ ಹಕ್ಕುಗಳ ಆಯೋಗದ ಪಾತ್ರ

ಹೋಂ ಸ್ಟೇ ಪ್ರಕರಣದಲ್ಲಿ ವಿಶೇಷ ಕುಖ್ಯಾತಿಯನ್ನು ಗಳಿಸಿರುವ ಸಂಗತಿಯೆಂದರೆ ರಾಜ್ಯ ಮಹಿಳಾ ಆಯೋಗದ ವರದಿ. ೧ ಆಗಸ್ಟ್ ೨೦೧೨ ರಂದು ಮಂಗಳೂರಿಗೆ ಭೇಟಿ ನೀಡಿದ ಬಳಿಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಸಿ. ಮಂಜುಳ ಅವರು, ಪಾರ್ಟಿಯಲ್ಲಿ ಹಾಜರಿದ್ದ ಯುವಕರು ಮಾದಕದ್ರವ್ಯ ಸೇವಿಸಿದ್ದರು ಮತ್ತು ಯುವತಿಯರನ್ನು ದಾರಿತಪ್ಪಿಸಲು ಯತ್ನಿಸಿರಬಹುದು ಎಂದು ಮಾಧ್ಯಮಗಳಲ್ಲಿ ತಮ್ಮ ಅಭಿಪ್ರಾಯಗಳನ್ನು ಮುಂದಿಟ್ಟರು. ಓರ್ವ ಸಂತ್ರಸ್ತ ಯುವಕನ ತಾಯಿ ಮಾನವ ಕಳ್ಳ ಸಾಗಾಣಿಕೆ ಕೇಸ್‌ನಲ್ಲಿ ಒಳಗೊಂಡಿದ್ದರು ಅಂದರೆ ಯುವಕನು 'ಒಳ್ಳೆಯ ಕುಟುಂಬ'ದಿಂದ ಬಂದವನಲ್ಲ ಎಂದು ಸೂಚ್ಯವಾಗಿ ಹೇಳಿದರು. ಸದರಿ ವರದಿಯಲ್ಲಿ ಎಲ್ಲೂ ಹಿಂದೂ ಜಾಗರಣ ವೇದಿಕೆಯ ಪ್ರಸ್ತಾಪವೇ ಇಲ್ಲ.

ಸದರಿ ಅಧ್ಯಕ್ಷರ ಹೇಳಿಕೆಗಳು ಯಾವುದೇ ವಾಸ್ತವಾಂಶವನ್ನು ಆಧರಿಸಿಲ್ಲ. ಪೋಲೀಸರಿಗೆ ಅಲ್ಲಿ ಮಾದಕದ್ರವ್ಯದ ಯಾವುದೇ ಪುರಾವೆ ಸಿಕ್ಕಿಲ್ಲ. ಆದರೂ ಅಲ್ಲಿ ಮಾದಕದ್ರವ್ಯ ಇತ್ತು ಎಂದು ಸಿ.ಮಂಜುಳಾ ಹೇಳುತ್ತಾರೆ. ಅಲ್ಲದೆ

ಸಂತ್ರಸ್ತನೋರ್ವನ ತಾಯಿಯ ಮೇಲೆ ಬಿಡುಬೀಸಾದ ಆರೋಪಗಳನ್ನು ಮಾಡಿರುವುದು ಸಿ.ಮಂಜುಳಾ ಅವರ ಕರ್ತವ್ಯದಿಂದ, ಅಂದರೆ ಬರ್ತ್‌ಡೇ ಪಾರ್ಟಿಯ ಮೇಲೆ ಯಾರು ದಾಳಿ ಮಾಡಿದರು ಎಂದು ತನಿಖೆ ಮಾಡುವುದರಿಂದ ಬೇರೆಡೆ ತಿರುಗಿಸುವುದೆಂದು ಕಾಣುತ್ತದೆ. ಸಿ.ಮಂಜುಳಾ ಮತ್ತು ವಿವಿಧ ಹಿಂದುತ್ವ ಸಂಘಟನೆಗಳು ನೀಡಿದ ನಾನಾ ಹೇಳಿಕೆಗಳ ನಡುವೆ ಒಂದು ಕುತೂಹಲಕರ ಸಾಮ್ಯವಿದೆ. ಮಾದಕದ್ರವ್ಯ ಮತ್ತು ಸೆಕ್ಸ್ ಸಾಧ್ಯತೆಯ ಬಗ್ಗೆ (ಅಲ್ಲಿ ಅವುಗಳ ಯಾವುದೇ ಪುರಾವೆ ಇಲ್ಲದಿದ್ದಾಗಲೂ) ಹಾಡಿದ್ದನ್ನೇ ಹಾಡುತ್ತಿರುವುದು, ಜರ್ಮನಿಯ ನಾಝಿ ಸಚಿವ ಜೋಸೆಫ್ ಗೋಬೆಲ್‌ನ 'ಸಾವಿರ ಬಾರಿ ಪುನರಾವರ್ತಿಸಿದ ಸುಳ್ಳು, ಸತ್ಯವಾಗುತ್ತದೆ' ಎಂಬ ಅಪಪ್ರಚಾರ ಹೇಳಿಕೆಯನ್ನು ನೆನಪಿಸುವಂತಿದೆ.

## ಪ್ರಭುತ್ವದ (ಸ್ಟೇಟ್) ಪಾತ್ರ

ಪ್ರಭುತ್ವದ ಅತ್ಯುನ್ನತ ಅಧಿಕಾರಸ್ಥರಾದ ಮುಖ್ಯಮಂತ್ರಿಗಳು ಮತ್ತು ಗೃಹಮಂತ್ರಿಗಳು ಹೋಂ ಸ್ಟೇ ದಾಳಿಯನ್ನು ಖಂಡಿಸಿದ್ದಾರೆ ಮತ್ತು ದುಷ್ಕರ್ಮಿಗಳ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳುವ ಭರವಸೆ ನೀಡಿದ್ದಾರೆ. ಗೃಹಮಂತ್ರಿಗಳಂತೂ ದುಷ್ಕರ್ಮಿಗಳ ವಿರುದ್ಧ ಗೂಂಡಾ ಕಾಯಿದೆ ಬಳಸುವ ಬಗ್ಗೆಯೂ ಭರವಸೆ ನೀಡಿದ್ದಾರೆ.

ಆದಾಗ್ಯೂ ಈ ಖಂಡನೆಗಳನ್ನು ರಾಜ್ಯದ ಅಧಿಕಾರಿ ವರ್ಗದ ವರ್ತನೆಯ ಪಕ್ಕದಲ್ಲಿಟ್ಟು ತೂಗಿ ನೋಡುವ ಅಗತ್ಯವಿದೆ. ಅಸಲಿಗೆ, ದಾಳಿಯ ಬೆನ್ನಿಗೇ ಪ್ರಭುತ್ವವು ಆದೇಶಿಸಿದ ಮೊದಲ ಕ್ರಮವೆಂದರೆ ಮಂಗಳೂರಿನಲ್ಲಿ ಸೆಕ್ಷನ್ ೧೪೪ ಅನ್ವಯ ಪ್ರತಿಬಂಧಕಾಜ್ಞೆ ಜಾರಿ. ವಿದ್ಯಾರ್ಥಿ ಸಮುದಾಯದಿಂದ ಯಾವುದೇ ರೀತಿಯ ಆಕ್ರೋಶ ಭುಗಿಲೇಳದಂತೆ ನೋಡಿಕೊಳ್ಳುವುದು ಈ ಆದೇಶದ ಏಕೈಕ ಉದ್ದೇಶ ಎನ್ನುವುದು ಟೀಕಾಕಾರರ ಅಭಿಪ್ರಾಯ. ಕೇವಲ ಎರಡು ಕಾಲೇಜುಗಳಲ್ಲಿ ಅಂದರೆ ಸೈಂಟ್ ಅಲೋಶಿಯಸ್ ಕಾಲೇಜು ಮತ್ತು ಸೈಂಟ್ ಆಗ್ನೆಸ್ ಕಾಲೇಜುಗಳಿಗಷ್ಟೇ ಸದರಿ ಪ್ರತಿಭಟನೆ ಸೀಮಿತಗೊಂಡಿರುವುದನ್ನು ನೋಡುವಾಗ ಸದರಿ ಉದ್ದೇಶವನ್ನು ಬಹುತೇಕ ಸಾಧಿಸಲಾಗಿದೆ.

## ನಂತರದ ಬೆಳವಣಿಗೆಗಳು

ಬರ್ತ್‌ಡೇ ಪಾರ್ಟಿಗೆ ಸಂಬಂಧಿಸಿದ FIRನ್ನು ದಾಖಲಿಸಿದ್ದು 20.9.2012ರಂದು. ಆರೋಪ ಪಟ್ಟಿಯಲ್ಲಿ ಐಪಿಸಿಸಿ ಸೆಕ್ಷನ್ 120 B ಅನ್ವಯ ಪಿತೂರಿಯ ಆರೋಪವೂ ಸೇರಿದೆ. ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆ ಅಡಿಯಲ್ಲಿ ಹೇರಲಾದ ಆರೋಪಗಳನ್ನು ಆರೋಪ ಪಟ್ಟಿಯಿಂದ ಕೈ ಬಿಡಲಾಗಿದೆ. ಆರೋಪ ಪಟ್ಟಿ ಬಗ್ಗೆ ಗಮನಿಸಬೇಕಾಗಿರುವ ಎರಡು ಅಂಶಗಳು:

ಒಂದು, ನಡೆದಿದೆ ಎನ್ನಲಾದ ಅಪರಾಧಗಳಿಗೆ ಚಿತಾವಣೆ ನೀಡಿದ್ದಕ್ಕಾಗಿ ಇನ್ಸ್‌ಪೆಕ್ಟರ್ ರವೀಶ ನಾಯಕ್ ವಿರುದ್ಧ ಯಾವುದೇ ಕಾನೂನು ಕ್ರಮ ತೆಗೆದುಕೊಳ್ಳುವಲ್ಲಿ ವೈಫಲ್ಯ.

ಎರಡು, ಮಾಧ್ಯಮದವರು ಸದರಿ ಅಪರಾಧಗಳನ್ನು ಎಸಗುವ ಪಿತೂರಿಯ ಭಾಗವಾಗಿ ಅಲ್ಲಿ ಉಪಸ್ಥಿತರಿದ್ದರು ಎಂದು ಅವರ ಮೇಲೆಯೇ ಆರೋಪ ಹೊರಿಸಲಾಗಿದೆ. ಆದುದರಿಂದ ಆರೋಪ ಪಟ್ಟಿಯ ಮುಖ್ಯ ಉದ್ದೇಶ ಪೊಲೀಸರಿಗೆ ಕ್ಲೀನ್ ಚಿಟ್ ನೀಡುವುದು ಮತ್ತು ಅದೇ ವೇಳೆ ಪತ್ರಕರ್ತರನ್ನು ದಾಳಿಕೋರರಿಗೆ ಸಮಾನವಾಗಿ ಪರಿಗಣಿಸಿ ಅವರ ಮೇಲೆ ದೋಷಾರೋಪ ಮಾಡುವುದೆಂದು ತೋರುತ್ತದೆ. ದಾಳಿಯ ಸಂದರ್ಭದಲ್ಲಿ ಪತ್ರಕರ್ತರ ನಡವಳಿಕೆ, ನೀತಿ–ನಿಯಮಗಳ ವಿಷಯಗಳನ್ನು ಎತ್ತುತ್ತದಾದರೂ ಬರ್ತ್‌ಡೇ ಪಾರ್ಟಿ ಸಂದರ್ಭದಲ್ಲಿ ನಡೆಸಲಾದ ವಿವಿಧ ಅಪರಾಧ ಕೃತ್ಯಗಳಿಗೆ ಅವರ ವಿರುದ್ಧ ಕ್ರಿಮಿನಲ್ ಆರೋಪ ಹೊರಿಸಿ ಕಾನೂನು ಕ್ರಮ ಜರುಗಿಸಿರುವುದು ನ್ಯಾಯವಲ್ಲ ಎನ್ನುವುದು ಸುಸ್ಪಷ್ಟ.

# ದಕ್ಷಿಣಕನ್ನಡದಲ್ಲಿ ಕೋಮು ಪೊಲೀಸ್‌ಗಿರಿ

**ಹುಟ್ಟುಹಬ್ಬದ ಪಾರ್ಟಿಮೇಲಣ ದಾಳಿ ಕೋಮು ಪೊಲೀಸ್‌ಗಿರಿಯ ಕರಾಳಮುಖದ ಒಂದು ತುಣುಕಷ್ಟೆ !**

ದುರದೃಷ್ಟವಶಾತ್ ಈ ಹುಟ್ಟುಹಬ್ಬ ಪಾರ್ಟಿಯ ಮೇಲಣ ದಾಳಿಯು ಒಂದು ಪ್ರತ್ಯೇಕ ಘಟನೆಯೇನಲ್ಲ. ಮತಧರ್ಮ ಗಡಿರೇಖೆಗಳನ್ನು ಮೀರಿ ಪರಸ್ಪರ ಬೆರೆಯುವ ಯುವಜನರ ಮೇಲೆ ನಡೆಯುವ ದಾಳಿಗಳು ದಕ್ಷಿಣಕನ್ನಡದಲ್ಲಿ ಹೊಸಸಂಗತಿಯೇನಲ್ಲ. ವಿಷಾದವೆಂದರೆ, ಬರ್ತ್‌ಡೇ ಪಾರ್ಟಿಯ ಮೇಲಣ ದಾಳಿಯು ತಪ್ಪಿನಡೆದಂತಹ ಒಂದು ಸಂಗತಿಯೇನೂ ಅಲ್ಲ. ಬದಲಿಗೆ ಕೇವಲ ಒಂದು ಸ್ಥಾಪಿತ ಮಾದರಿಯ ದಾಳಿಗಳ ಪುನರಾವರ್ತನೆಯಷ್ಟೇ. ಈ ಎಲ್ಲ ದಾಳಿಗಳ ಗುರಿ ಒಂದೇ; ಸಮುದಾಯಗಳ ಗಡಿರೇಖೆಯ ಮೇಲೆ ಕಣ್ಣಿಡುವುದು ಮತ್ತು ಸಮುದಾಯಗಳು ಪ್ರತ್ಯೇಕವಾಗಿ, ಅಖಂಡವಾಗಿ ಉಳಿಯುವಂತೆ ಮತ್ತು ಸಮಾಜವೊಂದರ ಜೀವಮೂಲವಾದ ಮೂಲಭೂತ ಸಾಮಾಜಿಕ ಬಂಧಗಳು ನಿರ್ಮಾಣಗೊಳ್ಳಲು ಸಾಧ್ಯವಾಗದಂತೆ ನೋಡಿಕೊಳ್ಳುವುದು. ಹೀಗೆ, ಕೋಮು ಪೊಲೀಸ್‌ಗಿರಿಯು ವಿಭಿನ್ನ ಸಮುದಾಯಗಳ ಹುಡುಗ ಹುಡುಗಿಯರ ಪರಸ್ಪರ ಬೆರೆಯುವಿಕೆಯ ಮೇಲೆ ದಾಳಿ, ಸಮುದಾಯವೊಂದರ ಒಳಗಡೆಯೇ ಮಹಿಳೆಯರ ಉಡುಪುಗಳ ಮತ್ತು ನಡೆವಳಿಕೆಯ ರೀತಿಯ ಮೇಲೆ ದಾಳಿ, ಹಾಗೆಯೇ ಜನತೆ ಭಾಗವಹಿಸ ಬಯಸುವ ಮನರಂಜನೆಗಳ ರೂಪಗಳ ಮೇಲಣ ಆಕ್ರಮಣಗಳು ದಾಳಿಗಳ ರೂಪ ಪಡೆದುಕೊಳ್ಳುತ್ತದೆ.

ಕೋಮು ಪೊಲೀಸ್‌ಗಿರಿಯು ಮೂಲತಃ ಮಹಿಳೆಯರ ಸ್ವಾಯತ್ತೆಯನ್ನು ಹದ್ದಿನಲ್ಲಿಡಲು ಮತ್ತು ಅವರ ಮೇಲೆ ನಿಯಂತ್ರಣ ಹೊಂದಲು ಬಯಸುವ ಮೂಲಕ ಅದು ಸ್ಪಷ್ಟವಾಗಿ ಮಹಿಳೆಯರ ಮೂಲಭೂತ ಸ್ವಾತಂತ್ರ್ಯದ ಮೇಲಣ ದಾಳಿಯಾಗಿದೆ. ಕೋಮು ಪೊಲೀಸ್‌ಗಿರಿಯ ಪಿತೃಪ್ರಧಾನ ತರ್ಕದ ಒಳಗಡೆ ಮಹಿಳೆಯರು ಸಮುದಾಯದ 'ಮರ್ಯಾದೆ'ಯ ಮೂರ್ತ ರೂಪವಾಗಿರುತ್ತಾರೆ. ಆದ್ದರಿಂದ ಅವರ ಸ್ವಾತಂತ್ರ್ಯವು ಯಾವುದೇ ಸ್ವಯಂಘೋಷಿತ ಕಾವಲುಗಾರಿಕೆ ಸಂಘಟನೆಗಳ (ವಿಜಿಲೇಂಟ್) ನಿಯಂತ್ರಣಕ್ಕೆ ಒಳಪಟ್ಟಿರುತ್ತದೆ; ಈ ಗುಂಪುಗಳು ಸಮುದಾಯದ 'ಮರ್ಯಾದೆ' ರಕ್ಷಿಸುವ ಹಕ್ಕನ್ನು ಸ್ವತಃ ಹೊಂದಿದ್ದೇವೆ ಎಂಬ ಅಹಂ ಹೊಂದಿರುತ್ತವೆ.

ನಿರ್ದಿಷ್ಟವಾಗಿ, ಕಾಸ್ಮೋಪಾಲಿಟನ್ ಮಂಗಳೂರಿನಲ್ಲಿ ಕುಟುಂಬದ ತೆಕ್ಕೆಯಿಂದ ಹೊರಬಂದು ಶಿಕ್ಷಣ ಮತ್ತು ಉದ್ಯೋಗದ ವಿಸ್ತಾರ ಜಗತ್ತಿಗೆ ತೆರೆದುಕೊಳ್ಳುವ ಹಿಂದೂ ಸಮುದಾಯದ

ಯುವತಿಯರೇ ಈ ತೆರನಾದ ಪೊಲೀಸ್‌ಗಿರಿಗೆ ಒಳಗಾಗುವವರು. ಹಿಂದೂ ಹಿನ್ನೆಲೆಯ ಯುವತಿಯರ ಸ್ವಾತಂತ್ರ್ಯದ ಮೇಲೆ ನಡೆಸುವ ಪೊಲೀಸ್‌ಗಿರಿಯು ಕೋಮು ರೀತ್ಯಾ ಪ್ರೇರಿತವಾಗಿರುವುದೇ ಅಲ್ಲದೆ, ಮಹಿಳೆಯರು ಜಾತಿ ಗುಂಪುಗಳ ಪರಿಶುದ್ಧತೆಯ ಕಾವಲುಗಾರರು ಎಂದು ಮಹಿಳೆಯರನ್ನು ಗ್ರಹಿಸುವ ಮನುಸಂಹಿತೆಗೆ ಮರಳಿಸುವ ಬಲಿಷ್ಠ ಜಾತೀಯ ತರ್ಕವನ್ನು ಹೊಂದಿದೆ. 'ಲವ್ ಜಿಹಾದ್' ಎಂದು ಹಿಂದುತ್ವವಾದಿಗಳು ನಡೆಸುತ್ತಿರುವ ಅಭಿಯಾನವು ಪ್ರೀತಿಯ ನಾಟಕವಾಡಿ ಮುಸ್ಲಿಂ ಯುವಕರು ಹಿಂದೂ ಯುವತಿಯರನ್ನು ಮತಾಂತರಿಸುತ್ತಿದ್ದಾರೆ ಎಂಬ ಭ್ರಮೆಯ ಮೂಲಕ ಹಿಂದೂಗಳನ್ನು ಮತ್ತು ಮುಸ್ಲಿಮರನ್ನು ನಿಯಂತ್ರಿಸುವ ವಿಧಾನದ ತೀರಾ ಇತ್ತೀಚಿನ ಒಂದು ರೂಪ.

ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಕೋಮು ಪೊಲೀಸ್‌ಗಿರಿಯು, ಜನರು ಏನನ್ನು ತಿನ್ನಬೇಕು, ಏನನ್ನು ತಿನ್ನಕೂಡದು, ಏನನ್ನು ಮಾರಬೇಕು ಮತ್ತು ಏನನ್ನು ಮಾರಕೂಡದು ಎಂಬುದನ್ನೂ ಹೇಳಬಯಸುತ್ತದೆ. ಹೀಗೆ ಕೋಮು ಪೊಲೀಸ್‌ಗಿರಿಯು ತೆಗೆದುಕೊಳ್ಳುವ ಒಂದು ನಿರ್ದಿಷ್ಟ ದುಷ್ಟ ರೂಪವೆಂದರೆ ದನ ಸಾಗಾಟ ಮಾಡುವವರ ಮೇಲೆ, ಹಾಗೆಯೇ ದನದ ಮಾಂಸ ಮಾರಾಟ ಮಾಡುವವರ ಮೇಲೆ ಕಾವಲುಗಾರಿಕೆ ಶಕ್ತಿಗಳು (ವಿಜಿಲೇಂಟ್ ಎಲಿಮೆಂಟ್) ಬರ್ಬರವಾಗಿ ಮತ್ತು ಗಂಭೀರವಾಗಿ ದಾಳಿ ಮಾಡುವುದು. ಕೋಮು ಪೊಲೀಸ್‌ಗಿರಿಯು ಅಲ್ಪಸಂಖ್ಯಾತ ಸಮುದಾಯದ ಧಾರ್ಮಿಕ ಚಿಹ್ನೆಗಳ ಮೇಲೆ ನಿರಂತರವಾಗಿ ದಾಳಿ ಮಾಡಲು ಯತ್ನಿಸುವ ಮೂಲಕ ಆ ಸಮುದಾಯದವರನ್ನು ತಮ್ಮ ದಾಸ್ಯಕ್ಕೊಳಪಡಿಸುವತ್ತಲೂ ಗುರಿನೆಟ್ಟಿದೆ. ಹಿಂದೂಗಳನ್ನು 'ಮತಾಂತರಿಸುತ್ತಿದ್ದಾರೆ' ಎಂಬ ನೆಲೆಯಲ್ಲಿ ಚರ್ಚ್‌ಗಳ ಮೇಲೆ, ಮನೆಯೊಳಗಡೆ ನಡೆಯುವ ಸಾಮೂಹಿಕ ಪ್ರಾರ್ಥನೆಗಳ ಮೇಲೆ ದಾಳಿ ನಡೆಯುತ್ತಿದೆ. ಹಾಗೆಯೇ ಕ್ರೈಸ್ತರಿಗೆ ಕಿರುಕುಳ ನೀಡಲಾಗುತ್ತಿದೆ, ಬೆದರಿಕೆ ಒಡ್ಡಲಾಗುತ್ತಿದೆ.

ಮಾಧ್ಯಮಗಳಲ್ಲಿ ವರದಿಯಾದ, ಕೋಮು ಪೋಲಿಸ್‌ಗಿರಿ ಸಂಬಂಧಿತ ಒಂದು ವಿವರವಾದ ವರದಿಪತ್ರವನ್ನು ಸ್ಥಳೀಯ ಹಾಗೂ ರಾಷ್ಟ್ರೀಯ ಮಾಧ್ಯಮಗಳಲ್ಲಿನ ವರದಿ ಆಧರಿಸಿ, ೧೯೯೮ ರಿಂದ ಜುಲೈ ೨೦೧೨ ರ ವರೆಗೆ ತಯಾರಿಸಲಾಗಿದೆ. (ನೋಡಿ: ಸುರೇಶ್ ಭಟ್, 'ಕ್ರೋನಿಕಲ್ಸ್ ಆಫ್ ಕಮ್ಯುನಲ್ ಇನ್ಸಿಡೆಂಟ್ಸ್ ಇನ್ ದ ಕೋಸ್ಟಲ್ ಡಿಸ್ಟ್ರಿಕ್ಟ್ಸ್ ಆಫ್ ಕರ್ನಾಟಕ, ೨೦೧೧'). ೧೯೯೮ ರ ಲಾಗಾಯ್ತು ೨೬೫ಕ್ಕೂ ಹೆಚ್ಚು ಕೋಮು ಪೊಲೀಸ್‌ಗಿರಿಯ ಘಟನೆಗಳು ನಡೆದಿವೆ ಎನ್ನುವುದನ್ನು ಇಲ್ಲಿನ ಅಂಕಿ ಅಂಶಗಳು ಸೂಚಿಸುತ್ತವೆ.

## ಕೋಮು ಪೊಲೀಸ್‌ಗಿರಿಯ ಘಟನೆಗಳ ಬಿಡಿಬಿಡಿ ವಿವರಗಳು ಹೀಗಿವೆ

| ವರ್ಷ | ಹುಡುಗ/ ಹುಡುಗಿ ಬೆರೆಯುವಿಕೆ | ದನ ಸಾಗಾಟ | ದನದ ಮಾಂಸ ಮಾರಾಟ | ಚರ್ಚ್‌ಗಳು/ ಕ್ರೈಸ್ತರ ಮೇಲೆ ದಾಳಿಗಳು | ಗಲಭೆ ಪರಿಸ್ಥಿತಿಗಳು | ಇತರ ಘಟನೆಗಳು | ಒಟ್ಟು |
|---|---|---|---|---|---|---|---|
| ೧೯೯೮–೨೦೦೬ | ೫ | ೭ | ೩ | ೨ | ೨ | ೦ | ೧೯ |
| ೨೦೦೭ | ೧ | ೪ | ೧ | ೧ | ೧ | ೦ | ೮ |
| ೨೦೦೮ | ೨೪ | ೩ | ೦ | ೧೭ | ೦ | ೦ | ೪೪ |
| ೨೦೦೯ | ೪೩ | ೭ | ೦ | ೩ | ೫ | ೬ | ೬೪ |
| ೨೦೧೦ | ೨೫ | ೩ | ೨ | ೧೦ | ೧ | ೧೯ | ೬೦ |
| ೨೦೧೧ | ೩೩ | ೫ | ೧ | ೯ | ೦ | ೩ | ೫೧ |
| ೨೦೧೨ ೨೮/೦೭/೧೨ ವರೆಗೆ | ೧೩ | ೫ | ೩ | ೩ | ೦ | ೯ | ೩೪ |
| ಒಟ್ಟು | ೧೪೫ | ೩೪ | ೧೦ | ೪೫ | ೯ | ೩೭ | ೩೦೦ |

ಜನವರಿ ೨೦೦೯ರಲ್ಲಿ ವ್ಯಾಪಕವಾಗಿ ವರದಿಯಾದ ಆಮ್ನೇಸಿಯಾ ಪಬ್ ಮೇಲೆ ದಾಳಿ ನಡೆದ ಲಾಗಾಯ್ತು

ಒಟ್ಟಾರೆಯಾಗಿ ಕೋಮು ಪೊಲೀಸ್‌ಗಿರಿಯ ಘಟನೆಗಳು ರೌದ್ರಾವತಾರ ಮತ್ತು ಆ ವರ್ತನೆಯಲ್ಲಿ ಹೆಚ್ಚಳ ಕಂಡಿದೆ ಎನ್ನುವುದನ್ನು ಇಲ್ಲಿನ ಕೋಷ್ಟಕವು ವಿಷದಪಡಿಸುತ್ತದೆ. ಹೀಗೆ ವರದಿಯಾದ ಒಟ್ಟು ಘಟನೆಗಳು ೨೦೦೮ರಲ್ಲಿ ೪೪ ಇದ್ದರೆ, ಮುಂದಿನ ಮೂರು ವರ್ಷಗಳಲ್ಲಿ ಅವು ತೀವ್ರ ಗತಿಯಲ್ಲಿ ಏರಿಕೆ ಕಂಡಿವೆ. ಹಾಗಾಗಿ ಪ್ರಭುತ್ವದ ನಿಷ್ಕ್ರಿಯತೆಯ ಕಾರಣವಾಗಿ ರಾಜ್ಯದಲ್ಲಿನ ಕಾವಲುಗಾರಿಕೆ ಶಕ್ತಿಗಳಿಗೆ (ವಿಜಿಲೇಂಟ್ ಎಲಿಮೆಂಟ್) ತಮ್ಮ ಮೂಗಿನ ನೇರದ ನೈತಿಕತೆಯನ್ನು ವಿಸ್ತೃತ ಜನತೆಯ ಮೇಲೆ ಹೇರುವ ಕೆಲಸವನ್ನು ಮುಂದುವರಿಸಲು ಹೆಚ್ಚಿನ ಧೈರ್ಯ ತಂದುಕೊಟ್ಟಿದೆ.

ಇಂತಹ ಘಟನೆಗಳ ಪ್ರಾತಿನಿಧಿಕ ಸ್ಥೂಲನೋಟದ ಒಂದು ಸಂಕ್ಷಿಪ್ತ ಸಮೀಕ್ಷೆಯಿಂದ ದಕ್ಷಿಣಕನ್ನಡದ ಸಂದರ್ಭದಲ್ಲಿ ಕೋಮು ಪೊಲೀಸ್‌ಗಿರಿಯು ಪಡೆದ ವಿವಿಧ ರೂಪಗಳನ್ನು ಅಂದಾಜಿಸಲು ನಮಗೆ ಸಹಾಯವಾಗುತ್ತದೆ.

## ಮೂಲ ಘಟನೆಗಳ ವಿವರಗಳು

**ವಾರ್ತಾಭಾರತಿ (೧೫.೦೮.೧೧)**
**ದಿ ಹಿಂದೂ (೧೬.೦೮.೧೧)**

ರೇವ್ ಪಾರ್ಟಿ ನಡೆಯುತ್ತಿದೆ ಎಂದು ಆರೋಪಿಸುತ್ತಾ ಬಜರಂಗ ದಳ ಸದಸ್ಯರು ರಾತ್ರಿ ಸುಮಾರು ೨ ಗಂಟೆಯ ಹೊತ್ತಿಗೆ ಉಳ್ಳಾಲದ ಸೋಮೇಶ್ವರ ಉಚ್ಚಿಲದ ಮಹಾರಾಣಿ ಫಾರ್ಮ್ ಗೆಸ್ಟ್ ಹೌಸ್ ಮೇಲೆ ದಾಳಿ ನಡೆಸಿ ಹುಟ್ಟುಹಬ್ಬ ಸಂಭ್ರಮಾಚರಣೆಗೆ ಅಲ್ಲಿ ಸೇರಿದ್ದ ಯುವಜನರ ಮೇಲೆ ಹಲ್ಲೆ ನಡೆಸಿದರು. ದಾಳಿಕೋರರು ಅವರ ಮೊಬೈಲ್‌ಗಳು ಮತ್ತು ನಗದನ್ನೂ ದರೋಡೆ ಮಾಡಿದರು. ಓರ್ವ ಯುವಕನಿಗೆ ಗಂಭೀರ ಜಖಂ ಆಯಿತು. ಇತರರಿಗೆ ಸಣ್ಣ ಪುಟ್ಟ ಜಖಂ ಆಯಿತು. ದುಷ್ಕರ್ಮಿಗಳು ಅಲ್ಲಿನ ಕಿಟಕಿಗಳು ಮತ್ತು ಪೀಠೋಪಕರಣಗಳಿಗೆ ವ್ಯಾಪಕ ಹಾನಿ ಉಂಟುಮಾಡಿದರು; ಸುಮಾರು ೨–೩ ಲಕ್ಷಗಳ ಆಸ್ತಿ ನಷ್ಟವಾಯಿತು. ಪಾರ್ಟಿಯ ತಂಡ ಬರ್ತ್‌ಡೇ ಪಾರ್ಟಿ ನಡೆಸುವ ಸಂಬಂಧ ಉಳ್ಳಾಲ ಪೊಲೀಸ್ ಠಾಣೆಯಿಂದ ಪರವಾನಗಿ ಕೂಡಾ ಪಡೆದುಕೊಂಡಿತ್ತು. ೩೦–೪೦ ಬಜರಂಗ ದಳ ಕಾರ್ಯಕರ್ತರು ಕೇಸರಿ ಶಾಲುಗಳನ್ನು ಧರಿಸಿಕೊಂಡು ಮುಖವನ್ನು ಕೇಸರಿ ಶಿರವಸ್ತ್ರಗಳಿಂದ ಮುಚ್ಚಿಕೊಂಡಿದ್ದುದನ್ನು ನಾನು ನೋಡಿದ್ದೇನೆ ಎಂದು ಓರ್ವ ಸಂತ್ರಸ್ತ ಸುಧೀರ್ (ಹೆಸರು ಬದಲಾಯಿಸಲಾಗಿದೆ) ಹೇಳಿದ್ದಾನೆ. ಸುಪ್ರೀತ್ (ಹೆಸರು ಬದಲಾಯಿಸಲಾಗಿದೆ) ಹೀಗೆ ಹೇಳಿದ್ದಾನೆ: 'ಅವರು ನಮ್ಮ ಹೆಸರು ಕೇಳಿದರು, ಸೈಯದ್ (ಹೆಸರು ಬದಲಾಯಿಸಲಾಗಿದೆ) ಎಂಬ ಒಂದು ಹೆಸರನ್ನು ಕೇಳಿದ್ದೇ ತಡ ಆತನನ್ನು ತೀವ್ರವಾಗಿ ಥಳಿಸಿದರು.

**ಕರಾವಳಿ ಅಲೆ (೨೬.೦೨.೧೧)**

ಬೇರೆ ಬೇರೆ ಸಮುದಾಯಗಳಿಗೆ ಸೇರಿದ ಹುಡುಗ ಹುಡುಗಿ ಅಂಗಡಿಯೊಂದರಲ್ಲಿ ಫ್ರುಟ್‌ಜೂಸ್ ಕುಡಿಯುತ್ತಿದನ್ನು ಬಜರಂಗದಳದ ಕಾರ್ಯಕರ್ತರು ಗಮನಿಸಿದರು. ಆ ಈರ್ವರನ್ನು ಅವರು ಥಳಿಸಿ ಪೊಲೀಸರಿಗೆ ಒಪ್ಪಿಸಿದರು. ಪೊಲೀಸರು ಅವರ ಪಾಲಕರನ್ನು ಕರೆಸಿ 'ಮುಚ್ಚಳಿಕೆ' ಬರೆಸಿಕೊಂಡು 'ಎಚ್ಚರಿಕೆ' ನೀಡಿದ ಬಳಿಕ ಅವರನ್ನು ಬಿಡುಗಡೆಗೊಳಿಸಿದರು.

**ಕರಾವಳಿ ಅಲೆ (೧೫.೦೪.೧೧)**

ವಿಭಿನ್ನ ಸಮುದಾಯಗಳಿಗೆ ಸೇರಿದ ರವಿಕಿರಣ್ (೨೪) ಮತ್ತು ಆತನ ಸ್ನೇಹಿತರು ಮೈದಾನದಲ್ಲಿ ಕ್ರಿಕೆಟ್ ಆಡುತ್ತಿದ್ದರು. ಸೀತಾರಾಮ, ಕೃಷ್ಣ ಮತ್ತು ಶಿವ ಅಲ್ಲಿ ಬಂದು, ಮೈದಾನ ಇರುವುದು ಆರ್‌ಎಸ್‌ಎಸ್ ಶಾಖೆಗೆ ಎಂದು ರವಿಕಿರಣ್‌ಗೆ ಹೇಳಿದರು. ನೀನು ಇನ್ನೊಂದು ಕೋಮಿನವರೊಂದಿಗೆ ಏಕೆ ಆಡುತ್ತಿದ್ದಿ? ಇನ್ನು ಮುಂದೆ ಹೀಗೆ ಮಾಡಬೇಡ ಎಂದು ಅವನಿಗೆ ಹೇಳಿದರು. ಹೇಳಿದ್ದನ್ನು ಕೇಳದಿದ್ದರೆ ನಿನ್ನನ್ನು ನೋಡಿಕೊಳ್ಳುತ್ತೇವೆ ಎಂದು ಹೇಳಿ ಆತನಿಗೆ ಹೊಡೆಯಹೋದರು. ಗಂಭೀರ ಜಖಂಗೊಂಡ ರವಿಕಿರಣ್‌ನನ್ನು ಸರಕಾರಿ ಆಸ್ಪತ್ರೆಗೆ ಸೇರಿಸಬೇಕಾಯಿತು.

**ವಾರ್ತಾಭಾರತಿ (೧೬.೧೧.೦೯)**

'ಎಡಪದವು ಸರಕಾರಿ ಕಾಲೇಜಿ'ನ ಐವರು ವಿದ್ಯಾರ್ಥಿಗಳನ್ನು ಹಾಸನದಲ್ಲಿ ನಡೆಯುವ ರಾಜ್ಯಮಟ್ಟದ ಹ್ಯಾಂಡ್‌ಬಾಲ್ ಟೂರ್ನ್‌ಮೆಂಟಿಗೆ ಆರಿಸಲಾಯಿತು. ಅವರಲ್ಲಿ ಮೂವರು ಮುಸ್ಲಿಂ ಹುಡುಗರು ರಿಜ್ವಾನ್, ರಶೀದ್ ಮತ್ತು ಮುಹಮ್ಮದ್ ಶೇಖ್ ಹಾಗೂ

ಈರ್ವರು ಹಿಂದೂ ಹುಡುಗಿಯರು ದೀಪಿಕಾ ಮತ್ತು ಶಾಂತಿ. ಅವರೆಲ್ಲರೂ ಗುರುಪುರದಲ್ಲಿ ಅಪರಾಹ್ನ ೩ ಗಂಟೆಗೆ ಖಾಸಗಿ ಎಕ್ಸ್‌ಪ್ರೆಸ್ ಬಸ್ಸೊಂದನ್ನು ಏರಿದರು. ಬಸ್ಸಿನಲ್ಲಿದ್ದ ಹಿಂದುತ್ವ ಕಾರ್ಯಕರ್ತನೋರ್ವ ಅವರನ್ನು ವಿಚಾರಿಸತೊಡಗಿದ. ಬಸ್ ವಾಮಂಜೂರು ತಲಪಿದಾಗ 'ಹಿಂದುತ್ವ' ಕಾರ್ಯಕರ್ತರ ದೊಡ್ಡ ಗುಂಪೊಂದು ಬಸ್ಸನ್ನು, ಅಲ್ಲಿ ಆ ಬಸ್ಸಿಗೆ ನಿಲುಗಡೆ ಇಲ್ಲವಾದರೂ ತಡೆದು ನಿಲ್ಲಿಸಿತು. ಆ ಗುಂಪು ಐವರು ವಿದ್ಯಾರ್ಥಿಗಳನ್ನು ಹೊರಗೆಳೆದು ಕಬ್ಬಿಣದ ರಾಡ್, ಚಾಕು, ದೊಣ್ಣೆ ಇತ್ಯಾದಿಗಳಿಂದ ಹುಡುಗರ ಮೇಲೆ ದಾಳಿ ನಡೆಸಿದರೆನ್ನಲಾಗಿದೆ; ಹುಡುಗಿಯರನ್ನು ಥಳಿಸಿ ಅವರಿಗೆ ಬಯ್ದರು.

**ದಿ ಹಿಂದೂ (೨೩.೦೯.೧೦)**

ಹನ್ನೆರಡು ಮಂದಿಯಿದ್ದ ಗ್ಯಾಂಗೊಂದು ಬೆಂಗಳೂರಿಗೆ ಹೋಗುವ ಬಸ್ಸನ್ನು ಹತ್ತಿ, ಹಿಂದು ಹುಡುಗನೋರ್ವನನ್ನು ಮುಸ್ಲಿಂ ಎಂದು ತಪ್ಪಾಗಿ ತಿಳಿದು, ಥಳಿಸಿತು. ವಾಸ್ತವದಲ್ಲಿ ಓರ್ವ ಮುಸ್ಲಿಂ ಹುಡುಗ ಮಣಿಪುರಿ ಹಿಂದೂ ಹುಡುಗಿಯೋರ್ವಳೊಂದಿಗೆ ಅವಳ ಲಗ್ಗೇಜಿಗೆ ನೆರವಾಗಲು ಬಂದಿದ್ದ. ಆಕೆಗೆ ನೆರವಾದ ಬಳಿಕ ಆತ ಹೊರಟುಹೋಗಿದ್ದ. ಈ ಸುದ್ದಿ ತಿಳಿದ ಗ್ಯಾಂಗು ಕರಾವಳಿ ಸರ್ಕಲ್‌ನಲ್ಲಿ ಕಾದು ಕುಳಿತು ಬಸ್ಸನ್ನು ನಿಲ್ಲಿಸಿತು. ಹುಡುಗಿಯ ಪಕ್ಕದಲ್ಲಿ ಕುಳಿತ ಹುಡುಗನ್ನು ಮುಸ್ಲಿಂ ಹುಡುಗ ಎಂದು ಭಾವಿಸಿ ಅವನನ್ನು ಚೆನ್ನಾಗಿ ಥಳಿಸಿತು. ಆ ಹುಡುಗ ಪ್ರಜ್ಞಾಹೀನನಾಗಿ ಕೆಳಗುರುಳುವವರೆಗೂ ಅವರು ಆತನನ್ನು ಥಳಿಸಿದರು. ಕದ್ರಿ ಪೊಲೀಸರು ದುಷ್ಕರ್ಮಿಗಳನ್ನು ಪತ್ತೆ ಹಚ್ಚಲು ಸಮರ್ಥರಾದರು ಮತ್ತು ಅವರನ್ನು ೨೬/೦೯/೧೦ರಂದು ಬಂಧಿಸಿದರು. ಗಣೇಶ, ಲಿಖಿತ್, ಸಂದೇಶ್, ಚೇತನ್ ಮತ್ತು ಕಿರಣ್ ಇವು ಅವರ ಹೆಸರುಗಳು; ಇವರೆಲ್ಲರೂ ಬಜರಂಗದಳಕ್ಕೆ ಸೇರಿದವರು.

**ವಾರ್ತಾಭಾರತಿ (೧೩.೦೩.೧೧)**

ಕಾಲೇಜು ವಿದ್ಯಾರ್ಥಿಗಳ ಗುಂಪೊಂದು ವಿಶ್ರಾಂತಿಗೆಂದು ಮಲ್ಪೆ ಬೀಚಿಗೆ (ಉಡುಪಿಯ ಹತ್ತಿರ) ತೆರಳಿತ್ತು. ಹಠಾತ್ತಾಗಿ ಅಲ್ಲಿ ಕಿಶೋರ್ ಬೈಲಕೆರೆ ಮತ್ತು ಜನಾ ತೊಟ್ಟಂ ಅಲ್ಲಿ ಪ್ರತ್ಯಕ್ಷರಾದರು. ಅವರು ಒಂದು ಹಿಂದುತ್ವ ಸಂಘಟನೆಗೆ ಸೇರಿದವರೆಂದು ಹೇಳಲಾಗಿದೆ. ಹುಡುಗರು ಹುಡುಗಿಯರು ಒಟ್ಟಿಗೆ ಜತೆಯಾಗಿ ಇರುವುದನ್ನು ಅವರು ಆಕ್ಷೇಪಿಸಿದರು ಮತ್ತು ಬಯ್ದು ಅರಸಲನ್ ಮತ್ತು ಇಜಾಜ್‌ರ ಮೇಲೆ ಹಲ್ಲೆ ನಡೆಸಿದರು. ಅವರು ಈ ಬಗ್ಗೆ ಮಲ್ಪೆ ಪೊಲೀಸ್ ಸ್ಟೇಶನ್‌ನಲ್ಲಿ ದೂರು ಸಲ್ಲಿಸಿದ್ದಾರೆ.

**ಕರಾವಳಿ ಅಲೆ (೨೫.೦೯.೧೧)**

ಬಜರಂಗದಳದ ಕಾರ್ಯಕರ್ತರು ಧರ್ಮಸ್ಥಳದ ಗೊಮ್ಮಟಬೆಟ್ಟದಲ್ಲಿ ಹಠಾತ್ ದಾಳಿ ನಡೆಸಿ ಮುಸ್ಲಿಂ ಯುವಕನೋರ್ವನನ್ನು ಹಿಂದೂ ಹುಡುಗಿಯ ಸಹಿತ 'ಹಿಡಿದುಕೊಂಡರು'. ಅವರೀರ್ವರನ್ನು ಸ್ಥಳೀಯ ಪೊಲೀಸ್ ಠಾಣೆಗೆ ಒಯ್ದು ಪೊಲೀಸರಿಗೆ ಒಪ್ಪಿಸಿದರು. ಅವರನ್ನು ಪ್ರಶ್ನಿಸಿದಾಗ ತಾವು ಪರಸ್ಪರ ಪ್ರೀತಿಸುತ್ತಿದ್ದು ಮದುವೆಯಾಗುವ ಉದ್ದೇಶ ಹೊಂದಿದ್ದೇವೆ ಎಂದು ಅವರು ಒಪ್ಪಿಕೊಂಡರು. ಪೊಲೀಸರು ಹುಡುಗಿಯ ಪೋಷಕರುನ್ನು ಠಾಣೆಗೆ ಕರೆಸಿ ಹುಡುಗ ಹುಡುಗಿಗೆ ಕೆಲವೊಂದು ಉಪದೇಶ ನೀಡಿ, ಅವರಿಂದ ಮುಚ್ಚಳಿಕೆ ಬರೆಸಿಕೊಂಡು ಅವರನ್ನು ಬಿಡುಗಡೆಗೊಳಿಸಿದರು ಎನ್ನಲಾಗಿದೆ.

**ಕರಾವಳಿ ಅಲೆ (೯.೧೧.೧೧)**

ತುಳಸಿ ಪೂಜಾ ಸಮಯದಲ್ಲಿ ಓರ್ವ ಮುಸ್ಲಿಂ ಯುವಕ ತನಗೆ ಪರಿಚಯವಿದ್ದ ಓರ್ವ ಹಿಂದೂ ಹುಡುಗಿಗೆ ಐಸ್‌ಕ್ರೀಂ ಮತ್ತು ಸಿಹಿತಿಂಡಿ ಕೊಟ್ಟ. ಹುಡುಗ ಮೂಡಬಿದ್ರಿಯಲ್ಲಿ ತರಕಾರಿ ಅಂಗಡಿಯೊಂದರಲ್ಲಿ ಕೆಲಸಮಾಡುತ್ತಾನೆ. ಹುಡುಗಿಯು ಸ್ಥಳೀಯ ಬ್ಯೂಟಿ ಪಾರ್ಲರೊಂದರಲ್ಲಿ ಉದ್ಯೋಗಿ. ಸಮುದಾಯಗಳ ನಡುವೆ ಇಂತಹ ಪರಸ್ಪರ ಬೆರೆಯುವಿಕೆಯನ್ನು ಹುಡುಕಾಡುವ ಕಾವಲು (ವಿಜಿಲೇಂಟ್) ಗುಂಪೊಂದು ಇದನ್ನು ಗಮನಿಸಿತು. ಅವರು ಅಂಗಡಿಯ ಮುಂದೆ ಗುಂಪುಗೂಡಿ ಯುವಕನನ್ನು ಬಯ್ದರು. ಆಕೆ ಬಕ್ರೀದ್ ಸಮಯದಲ್ಲಿ ತನಗೆ ಸಿಹಿತಿಂಡಿ ಕೊಟ್ಟಿದ್ದಳು. ನಾನು ಅದಕ್ಕೆ ಪ್ರತಿಯಾಗಿ ಈಗ ಶುಭಾಶಯ ಮರಳಿಸಿದೆ ಅಷ್ಟೇ ಎಂದು ಅವರಿಗೆ ಹೇಳಿದ. ಇಷ್ಟು ಹೊತ್ತಿಗಾಗುವಾಗ ಅಲ್ಲಿಗೆ ಪೊಲೀಸರು ಬಂದು ಪ್ರಶ್ನಿಸುವ ಉದ್ದೇಶದಿಂದ ಹುಡುಗ ಹುಡುಗಿಯನ್ನು ಪೊಲೀಸ್ ಠಾಣೆಗೆ ಕರೆದೊಯ್ದರು. ನಾವಿಬ್ಬರೂ ಸ್ನೇಹಿತರು ಹಬ್ಬಗಳ ಸಮಯದಲ್ಲಿ ನಾವು ಸಿಹಿತಿನಿಸುಗಳನ್ನು ವಿನಿಮಯಮಾಡಿಕೊಳ್ಳುತ್ತಿದ್ದೆವು ಎಂದು ಠಾಣೆಯಲ್ಲಿ ಅವರು

ಹೇಳಿದರು. ಪೊಲೀಸರು ಅವರಿಗೆ 'ಎಚ್ಚರಿಕೆ' ನೀಡಿ ಅವರನ್ನು ಹೋಗಲು ಬಿಟ್ಟರು ಎಂದು ತಿಳಿದುಬಂದಿದೆ.

| | |
|---|---|
| **ಕರಾವಳಿ ಅಲೆ (೧೩.೦೫.೧೨)** | ಅವಳಿ ಜಿಲ್ಲೆಗಳ ಬಜರಂಗ ದಳದ ಸದಸ್ಯರು ಮತ್ತು ದುರ್ಗಾವಾಹಿನಿ ಹಾಗೂ ಮಾತೃ ಮಂಡಳಗಳಂತಹ ಇತರ 'ಹಿಂದುತ್ವ' ಸಂಘಟನೆಗಳು ಕಠಾರಿವೀರ ಮತ್ತು ಸುರಸುಂದರಾಂಗಿ ಸಿನಿಮಾವನ್ನು, ಅದರಲ್ಲಿ ಹಿಂದೂ ದೇವತೆಗಳನ್ನು ಅವಹೇಳನ ಮಾಡಲಾಗಿದೆ ಎಂದು ಆರೋಪಿಸಿ ಪ್ರದರ್ಶನವನ್ನು ಆಕ್ಷೇಪಿಸಿದರು. ಸದರಿ ಸಂಘಟನೆಗಳ ಕಾರ್ಯಕರ್ತರು ಈ ಚಿತ್ರ ಪ್ರದರ್ಶಿಸುವ ಸಿನಿಮಾ ಮಂದಿರಗಳ ಮುಂದೆ ಪ್ರತಿಭಟನಾ ಪ್ರದರ್ಶನ ನಡೆಸಿದರು ಮತ್ತು ಘೋಷಣೆಗಳನ್ನು ಕೂಗಿದರು. ಕಾರ್ಯಕರ್ತರು ಬ್ಯಾನರುಗಳನ್ನು ಮತ್ತು ಕಟೌಟುಗಳನ್ನು ಹರಿದುಹಾಕಿದರು, ಬಲವಂತದಿಂದ ಚಿತ್ರಮಂದಿರದ ಮ್ಯಾನೇಜರ್ ಚಿತ್ರ ಪ್ರದರ್ಶನವನ್ನು ರದ್ದುಪಡಿಸುವಂತೆ ಮಾಡಿದರು. |
| **ಕರಾವಳಿ ಅಲೆ (೩೦.೧೨.೧೧)** | ಡಿಸೆಂಬರ್ ೨೮ರ ಹಳೆಯಂಗಡಿ ಚರ್ಚ್ ದಾಳಿ ಸಂಬಂಧ ಹಿಂದೂ ಜಾಗರಣ ವೇದಿಕೆಯ ಮೂವರು ಸದಸ್ಯರನ್ನು ಮೂಲ್ಕಿ ಪೊಲೀಸರು ಬಂಧಿಸಿದ್ದಾರೆ. ಆದರೆ ಅವರ ಹೆಸರನ್ನು ಬಹಿರಂಗಪಡಿಸಿಲ್ಲ. ಅದೇ ಹೊತ್ತಿನಲ್ಲಿ ಸ್ಥಳೀಯ ಬಿಜೆಪಿ ಸದಸ್ಯ ಸತೀಶ್ ಭಟ್ ಮತ್ತು ಹಿಂದೂ ಜಾಗರಣ ವೇದಿಕೆಯ ಸತ್ಯಜಿತ್, ಮುಲ್ಕಿ ಪೊಲೀಸ್ ಠಾಣೆಗೆ ಧಾವಿಸಿ ಅಧಿಕಾರಿಗಳನ್ನು ಭೇಟಿಯಾಗಿದ್ದಾರೆ. ಪ್ರವೀಣ್ ಎಂಬಾತನನ್ನು ೨೮ ರಂದು ರಾತ್ರಿಯೇ ಪೊಲೀಸರು ಬಂಧಿಸಿದ್ದಾರೆ ಎನ್ನಲಾಗಿದೆ. ಆದರೆ ಸ್ಥಳೀಯ ಬಿಜೆಪಿ ಮುಖಂಡರೋರ್ವರ ಫೋನ್ ಕರೆ ಬರುತ್ತಲೇ ಅತನನ್ನು ಬಿಡುಗಡೆಗೊಳಿಸಿದ್ದಾರೆ ಎನ್ನಲಾಗಿದೆ. |
| **ಕರಾವಳಿ ಅಲೆ (೯.೦೮.೧೧)** | ಸಾಕುವುದಕ್ಕಾಗಿ ಮರ್ದಾಳದ ಅಬ್ಬಾಸ್, ಕರುವೊಂದನ್ನು ಖರೀದಿಸಿ ಸ್ಕಾರ್ಪಿಯೋ ವಾಹನದಲ್ಲಿ ಅದನ್ನು ಮನೆಗೆ ಒಯ್ಯುತ್ತಿದ್ದರು. ದಾರಿಯಲ್ಲಿ ಸಂಜೆಯ ಇಫ್ತಾರ್‌ಗೆಂದು ಅವರು ಮರ್ದಾಳ ಮಸೀದಿಯಲ್ಲಿ ವಾಹನವನ್ನು ನಿಲ್ಲಿಸಿದರು. ಇದ್ದಕ್ಕಿದ್ದಂತೆ ಯಾವುದೋ ಹಿಂದುತ್ವ ಸಂಘಟನೆಯ ಸುಮಾರು ೨೦ ಮಂದಿ ಕಾರ್ಯಕರ್ತರು ಅಲ್ಲಿ ಕಾಣಿಸಿಕೊಂಡರು. ಅವರ ಬಳಿ ದೊಣ್ಣೆಗಳಿದ್ದವು. ಅವರು ಅಬ್ಬಾಸ್ ಮತ್ತು ಅತನ ಸಹಚರ ಅಂದುಞಿಯನ್ನು ಥಳಿಸತೊಡಗಿದರು. ಬಳಿಕ ಕಾರ್ಯಕರ್ತರು ಕಡಬ ಪೊಲೀಸರನ್ನು ಕರೆಸಿ ಅವರು ಅಕ್ರಮವಾಗಿ ದನ ಸಾಗಿಸುತ್ತಿದ್ದರು ಎಂದು ಹೇಳಿ ಅವರನ್ನು ಪೊಲೀಸರಿಗೆ ಒಪ್ಪಿಸಿದರು. ಅಬ್ಬಾಸ್ ಹೇಳುವ ಪ್ರಕಾರ ಸದರಿ ಗುಂಪು ಅವರೊಂದಿಗೆ ಠಾಣೆಗೆ ಬಂದು ಪೊಲೀಸರ ಸಮ್ಮುಖದಲ್ಲಿಯೇ ಥಳಿಸಿತು ಮತ್ತು ವಾಹನಕ್ಕೆ ಹಾನಿ ಉಂಟುಮಾಡಿತು. ಪೊಲೀಸರು ಅಕ್ರಮ ದನ ಸಾಗಾಟದ ಕೇಸನ್ನು ದಾಖಲಿಸಿದ್ದಾರೆ. |
| **ಕರಾವಳಿ ಅಲೆ (೨೦.೦೩.೧೨)** | ಉಪ್ಪಿನಂಗಡಿ ಪೊಲೀಸರು ಪೃಥ್ವಿ ವಾಣಿಜ್ಯ ಸಂಕೀರ್ಣದಲ್ಲಿ ಕಾರ್ಯಾಚರಿಸುವ ಸಿಟಿ ಚಿಕನ್ ಬಜಾರ್ ಮೇಲೆ ದಾಳಿ ನಡೆಸಿ ೫೦ ಕೆ.ಜಿ ದನದ ಮಾಂಸವನ್ನು ವಶಪಡಿಸಿಕೊಂಡರು. ಶಬ್ಬೀರ್ ಕೆಂಪಿಗೆ ಸೇರಿದ ಅಂಗಡಿಯಲ್ಲಿ ದನದ ಮಾಂಸವನ್ನು ಅಕ್ರಮವಾಗಿ ಮಾರಲಾಗುತ್ತಿತ್ತು ಎಂದು ಪೊಲೀಸರು ಆರೋಪಿಸಿದ್ದಾರೆ. ದನದ ಮಾಂಸವನ್ನು ಮಾರುವ ಕೆಲಸದಲ್ಲಿ ನಿರತನಾಗಿದ್ದ ಎನ್ನಲಾದ ಹುಸೇನ್‌ನನ್ನು ಪೊಲೀಸರು ಬಂಧಿಸಿದ್ದಾರೆ. ದನದ ಮಾಂಸವನ್ನು ಸರಬರಾಜು ಮಾಡಿದ್ದಕ್ಕೆ ಕೆ.ಅಬ್ಬಾಸ್ ಮೇಲೆ ಮತ್ತು ದನದ ಮಾಂಸವನ್ನು ದಾಸ್ತಾನು ಇಟ್ಟು ಮಾರುತ್ತಿದ್ದುದಕ್ಕಾಗಿ ಶಬೀರ್ ಕೆಂಪಿಯ ಮೇಲೆ ಪೊಲೀಸರು ಕೇಸುಗಳನ್ನು ದಾಖಲಿಸಿದ್ದಾರೆ. |

**೨೬೫ಕ್ಕೂ ಅಧಿಕ 'ಕೋಮು ಪೊಲೀಸ್‌ಗಿರಿ' ಪ್ರಕರಣಗಳಿಂದ ಹೆಕ್ಕಿ, ಮೇಲೆ ಕಾಣಿಸಲಾದ ಆಯ್ದ ಘಟನೆಗಳು ಈ ಮುಂದಿನ ತೀರ್ಮಾನಗಳಿಗೆ ಬರಲು ನಮಗೆ ಸಹಾಯಮಾಡುತ್ತದೆ:**

ಹಿಂದೂ ಮತ್ತು ಮುಸ್ಲಿಂ ಹುಡುಗ ಹುಡುಗಿಯರ ನಡುವಣ ಸಾಮಾಜಿಕ ಮತ್ತು ಪ್ರೇಮ ಸಂಬಂಧಗಳ ಮೇಲೆ ಕಾವಲುಗಾರಿಕೆ ಗುಂಪುಗಳು ಗಮನ ಕೇಂದ್ರೀಕರಿಸಿವೆ. ಪ್ರೇಮಿ ಯುವಕ ಯುವತಿಯರ ಮೇಲಣ ದಾಳಿಯಿಂದ ಹಿಡಿದು ಪರಸ್ಪರ ಮಾತನಾಡುವ ಅಥವಾ ಜ್ಯೂಸ್ ಹಂಚಿಕೊಳ್ಳುವ ಅಥವಾ ಸಿಹಿತಿಂಡಿಗಳನ್ನು

ವಿನಿಮಯಮಾಡಿಕೊಳ್ಳುವ ಯುವಕ ಯುವತಿಯರ ಮೇಲಿನ ದಾಳಿಯವರೆಗೆ ಈ ಪೊಲೀಸ್‌ಗಿರಿಯ ವ್ಯಾಪ್ತಿ ಮತ್ತು ಅವಕಾಶ ವ್ಯಾಪಿಸಿಕೊಂಡಿದೆ; ಇದಕ್ಕೆ ಒಂದೇ ಒಂದು ಕಾರಣವೆಂದರೆ, ಅವರು ಭಿನ್ನ ಕೋಮುಗಳಿಗೆ ಸೇರಿದವರು ಎನ್ನುವುದು. ದಕ್ಷಿಣಕನ್ನಡದಲ್ಲಿ ಕೋಮು ಪೊಲೀಸ್‌ಗಿರಿಯು ಪ್ರೇಮ ಸಂಬಂಧದ ಪರಸ್ಪರ ಬೆರೆಯುವಿಕೆಯ ಪರಿಧಿಯಿಂದಲೂ ಆಚೆ ಹೋಗುತ್ತದೆ ಮತ್ತು ಸಾಮಾಜಿಕ ಬೆರೆಯುವಿಕೆಗೂ ಅದರ ಜಾಲ ವಿಸ್ತರಿಸುತ್ತದೆ ಎಂಬುದನ್ನು ಇಲ್ಲಿ ಗಮನಿಸಬೇಕು. ಕಾಲೇಜು ಹಬ್ಬಗಳಲ್ಲಿ ಹಾಗೆಯೇ ಅಂತರ್ ಕಾಲೇಜು ಆಟೋಟ ಚಟುವಟಿಕೆಗಳಲ್ಲಿ ಭಾಗವಹಿಸುವ ವಿಭಿನ್ನ ಧಾರ್ಮಿಕ ಸಮುದಾಯಗಳಗೆ ಸೇರಿದ ವಿದ್ಯಾರ್ಥಿಗಳನ್ನು ಕರೆದೊಯ್ಯುವ ಬಸ್‌ಗಳ ಮೇಲೂ ಪದೇ ಪದೇ ದಾಳಿ ಯಾಕೆ ನಡೆಯುತ್ತಿದೆ ಎನ್ನುವುದನ್ನು ಇದು ಸಮರ್ಪಕವಾಗಿ ವಿವರಿಸುತ್ತದೆ.

ಈ ತೆರನಾದ ಕೋಮು ಪೊಲೀಸ್‌ಗಿರಿಯ ಸೋಂಕು ಮುಸ್ಲಿಂ ಸಮುದಾಯಕ್ಕೂ ತಗುಲಿದೆ. ಮುಸ್ಲಿಂ ಹುಡುಗಿಯರೊಂದಿಗೆ ಪ್ರೇಮ ಹೊಂದಿರುವ ಹಿಂದೂ ಹುಡುಗರ ಮೇಲೆ ಕೆಎಫ್‌ಡಿ ಸಂಘಟನೆಯ ಕಾರ್ಯಕರ್ತರು ಹಲ್ಲೆ ನಡೆಸುವ ಮೂಲಕ 'ಅವರ ಮಹಿಳೆಯರನ್ನು ರಕ್ಷಿಸುವ' ಕೆಲಸದಲ್ಲಿ ಅವರು ನಿರತರಾಗಿರುವುದು ವರದಿಯಾಗಿದೆ. ಕೋಮು ಪೊಲೀಸ್‌ಗಿರಿಯು ಹಿಂದುತ್ವ ಗುಂಪುಗಳಿಗೆ ಮಾತ್ರ ಸೀಮಿತವಾಗಿಲ್ಲವಾದರೂ, ನಿರಂತರ ಸಂವಿಧಾನಬಾಹಿರ ಕೃತ್ಯಗಳ ಇತಿಹಾಸವನ್ನು ರಕ್ಷಿಸಿರುವ ಮತ್ತು ಮುಚ್ಚಿಹಾಕಿರುವ ಪ್ರಭುತ್ವದ ಶಕ್ತಿಗಳೊಂದಿಗೆ ಹಿಂದುತ್ವ ಗುಂಪುಗಳು ಹೊಂದಿರುವ ಸಾಮೀಪ್ಯವು ಇಲ್ಲಿನ ಒಂದು ಪ್ರಧಾನ ವ್ಯತ್ಯಾಸ. ಹಿಂದುತ್ವ ಗುಂಪುಗಳ ಮೇಲೆ ಪ್ರಭುತ್ವದ ಶಕ್ತಿಗಳ ಕೃಪೆ ಇರುವುದರಿಂದಾಗಿ ಅವು ಖಾಸಗಿ ಹಾಗೂ ಸಾರ್ವಜನಿಕ ಎರಡೂ ಕ್ಷೇತ್ರಗಳಲ್ಲಿ ನಿಯಂತ್ರಣವನ್ನು ಸಾಧಿಸಿವೆ; ಆ ಮೂಲಕ ಅವರದೇ ಆದ ರೀತಿಯ 'ಕೋಮು ಪೊಲೀಸ್‌ಗಿರಿ'ಯನ್ನು ಹೆಚ್ಚು ಏಕಪಕ್ಷಾಧಿಕಾರವನ್ನಾಗಿ ಮಾಡಿವೆ.

ಟಿಪ್ಪಣಿಕಾರರ ಪ್ರಕಾರ, ದಕ್ಷಿಣಕನ್ನಡದಲ್ಲಿನ ಈ ನಿರಂತರ ದಾಳಿಯು ಭಿನ್ನ ಧಾರ್ಮಿಕ ಸಮುದಾಯಗಳ ಯುವಕ ಯುವತಿಯರ ನಡುವಣ ಪ್ರೇಮ ಮತ್ತು ಸಾಮಾಜಿಕ ಸಂಪರ್ಕಗಳನ್ನು ಇಲ್ಲವಾಗಿಸಲು ಅಸಮರ್ಥವಾದರೂ, ಕಡಿಮೆ ಮಾಡಲಂತೂ ಸಮರ್ಥವಾಗಿವೆ. ಕೋಮು ಪೊಲೀಸ್‌ಗಿರಿಯು ಆಪ್ತ ಆಯ್ಕೆಗಳನ್ನು ಗೌರವಿಸುವ, ಹಾಗೆಯೇ ಸಮಾಜದಲ್ಲಿ ಭಿನ್ನ ಸಮುದಾಯಗಳ ನಡುವೆ ಸಹೋದರ ಸಂಬಂಧಗಳನ್ನು ನಿರ್ಮಿಸುವ ಪೀಠಿಕಾಭಾಗದ (ಪ್ರಿಯಾಂಬಲ್) ಸಾಂವಿಧಾನಿಕ ನಂಬಿಕೆಯ ವಿರುದ್ಧ ಹೋಗುತ್ತದೆ. ಕೋಮು ಪೊಲೀಸ್‌ಗಿರಿಯು ಒಂದು ತೆರನಾದ ಕಾನೂನುಬಾಹಿರ ಅಧಿಕಾರವನ್ನು ಸಾಂಸ್ಕೃತಿಕ ಕಾವಲುಗಾರಿಕೆ ಗುಂಪುಗಳು ಚಲಾಯಿಸುವುದೇ ಆಗಿದ್ದು, ಅಕ್ರಮವಾಗಿ ವಶದಲ್ಲಿರಿಸಿಕೊಳ್ಳುವುದನ್ನು, ಕ್ರಿಮಿನಲ್ ಬೆದರಿಕೆಯನ್ನು ಅದು ಆಧರಿಸಿದೆ ಮತ್ತು ಸಂಬಂಧಪಟ್ಟ ಯುವಜನರನ್ನು ಅಪಮಾನಿಸುವುದು ಇತ್ಯಾದಿಗಳ ಮೂಲಕ ಅದು ಹಿಂಸಾಚಾರವನ್ನು ಪ್ರಯೋಗಿಸುತ್ತದೆ. ಸ್ವಯಂಘೋಷಿತ 'ನೈತಿಕ ರಕ್ಷಕರಿಂದ' ಹಿಂಸಾತ್ಮಕವಾಗಿ ಬಲವಂತಕ್ಕೊಳಗಾಗದೆ, ನಮ್ಮ ಜೀವನದ ಬಗ್ಗೆ ವೈಯಕ್ತಿಕ ಮತ್ತು ಆಪ್ತ ಆಯ್ಕೆಗಳನ್ನು ಚಲಾಯಿಸುವ ಹಕ್ಕಿಗೆ ನೀಡಲಾದ ಸಾಂವಿಧಾನಿಕ ರಕ್ಷಣೆಯನ್ನು ಕೂಡಾ ಅದು ಉಲ್ಲಂಘಿಸುತ್ತದೆ.

ಬಜರಂಗ ದಳದಂತಹ ಅನೇಕ ಸ್ವಯಂ ನೇಮಿತ ನೈತಿಕ ರಕ್ಷಕರಿಂದ ಕೋಮು ಪೊಲೀಸ್‌ಗಿರಿಗೆ ಒಳಗಾದ ಅನೇಕ ಸಂತ್ರಸ್ತ ಯುವತಿಯರು ಆತ್ಮಹತ್ಯೆಗೆ ಯತ್ನಿಸಿದ್ದಾರೆ ಎಂಬುದನ್ನು ನಾವು ಆತಂಕದಿಂದಲೇ ಗಮನಿಸಬೇಕಾಗಿದೆ. ತೀರಾ ಇತ್ತೀಚಿನ ಅಂದರೆ ೧೬.೦೭.೧೨ ರ ಘಟನೆಯೊಂದರಲ್ಲಿ ಭಿನ್ನ ಕೋಮುಗಳಿಗೆ ಸೇರಿದ ಯುವಕ ಯುವತಿ, ಏಕಾಂತ ಸ್ಥಳದಲ್ಲಿ, ತಮ್ಮದೇ ಜಗತ್ತಿನಲ್ಲಿ ಮೈಮರೆತಿದ್ದಾಗ, ಅವರನ್ನು ಪತ್ತೆಹಚ್ಚಿ ಬೆನ್ನಟ್ಟಲಾಯಿತು. ತನ್ನನ್ನು ಗುರುತಿಸಿರುವುದನ್ನು ತಿಳಿದ ಯುವತಿಯು ಆತ್ಮಹತ್ಯೆಗೆ ಯತ್ನಿಸಿದಳು (ಕರಾವಳಿ ಅಲೆ, ೧೭.೦೭.೧೨). ಇದೇ ರೀತಿಯಲ್ಲಿ ಅಶ್ವಿನಿ ಕುಲಾಲ್ ಎಂಬ ಯುವತಿ ಮುಸ್ಲಿಂ ಬಸ್ ಕಂಡಕ್ಟರ್ ಓರ್ವನೊಂದಿಗೆ ಸ್ನೇಹದಿಂದಿದ್ದಳು. ಆಕೆಯನ್ನು ಹಿಂದುತ್ವ ಕಾರ್ಯಕರ್ತರು ಪೊಲೀಸ್ ಠಾಣೆಗೆ ಒಯ್ದರು. ಅವಮಾನವನ್ನು ಸಹಿಸಲಾಗದೆ ಆಕೆ ಆತ್ಮಹತ್ಯೆ ಮಾಡಿಕೊಂಡಳು (ವಾರ್ತಾಭಾರತಿ, ೧೦.೦೨.೦೯).

ಸಾಮಾಜಿಕ ಬೆರೆಯುವಿಕೆಯ ಮೇಲಣ ಕೋಮು ಪೊಲೀಸ್‌ಗಿರಿಯನ್ನು ಇನ್ನಷ್ಟು ಮುಂದಕ್ಕೆ ಒಯ್ಯುವ ಇರಾದೆ ಸಾಂಸ್ಕೃತಿಕ ಕಾವಲುಗಾರಿಕೆ ಗುಂಪುಗಳದ್ದಾಗಿದೆ. ಮುಸ್ಲಿಂ ಹುಡುಗರೊಂದಿಗೆ ಆಟವಾಡುವ ಹಿಂದೂ

ಹುಡುಗರ ಮೇಲೂ ಈ ಗುಂಪುಗಳು ದಾಳಿಮಾಡಿವೆ; ಆ ಮೂಲಕ ಎರಡು ಸಮುದಾಯಗಳ ನಡುವೆ ಎಲ್ಲ ಸಂಪರ್ಕಗಳನ್ನು ತಗ್ಗಿಸುವುದು ಹಾಗೂ ಆ ಮೂಲಕ ಇನ್ನೊಂದು ಕೋಮಿನವರು ಶತ್ರುಗಳು ಎಂಬ ಗ್ರಹಿಕೆಯನ್ನು ಹೆಚ್ಚಿಸುವುದು ಇಲ್ಲಿನ ಅಂತಿಮ ಗುರಿ.

ಕೋಮು ಪೊಲೀಸ್‌ಗಿರಿಯು, ಸಮುದಾಯಗಳ ನಡುವಿನ ಬೆರೆಯುವಿಕೆಗೆ ಮಾತ್ರ ಸೀಮಿತವಾಗಿಲ್ಲ. ಬದಲಿಗೆ ಹಿಂದೂ ಸಮುದಾಯದೊಳಗೆ ಸೂಕ್ತ ನಡವಳಿಕೆ ಮತ್ತು ಸೂಕ್ತ ಮನರಂಜನೆಯ ಬಗೆಗೂ ಇದೆ. ಈ ದೃಷ್ಟಿಕೋನವೇ ಹುಡುಗಿಯರು ಪಬ್‌ನಲ್ಲಿ ಕುಡಿಯಬಾರದು (ಆಮ್ನೇಸಿಯಾ ಪಬ್ ದಾಳಿ) ಮತ್ತು ಕೆಲವೊಂದು ಸಿನಿಮಾಗಳನ್ನು ಬಲವಂತದಿಂದ ನಿಲ್ಲಿಸಬೇಕು ಎಂಬುದನ್ನೆಲ್ಲ ನಿರ್ದೇಶಿಸುತ್ತದೆ.

ಸಾಂಸ್ಕೃತಿಕ ಕಾವಲುಗಾರಿಕೆ ಎರಡು ಸಮುದಾಯಗಳ ನಡುವಣ ಸಾಮಾಜಿಕ ಮತ್ತು ಪ್ರೇಮ ರೂಪದ ಪರಸ್ಪರ ಬೆರೆಯುವಿಕೆಗೆ ಮಾತ್ರ ಸೀಮಿತವಾಗಿಲ್ಲ. ಅಲ್ಪಸಂಖ್ಯಾತ ಸಮುದಾಯಗಳನ್ನು ಗುರಿಯಾಗಿರಿಸಿ ದಾಳಿ ಎಸಗುವುದರಲ್ಲಿ ಕೂಡಾ ಅದು ತನ್ನ ಒರಟು ರೂಪವನ್ನು ತೋರಿಸಿದೆ. ಕೋಮು ಪೊಲೀಸ್‌ಗಿರಿಯಲ್ಲಿ ತೊಡಗಿಕೊಂಡಿರುವ ಅದೇ ಗುಂಪುಗಳು ಅಲ್ಪಸಂಖ್ಯಾತ ಸಮುದಾಯದ ಮೇಲೆ ನೇರ ದಾಳಿ ಮಾಡುವಲ್ಲಿಯೂ ಹಿಂಜರಿಕೆ ತೋರಿಲ್ಲ.

ಹೀಗೆ ಗುರಿಮಾಡುವ ಒಂದು ವಿಧಾನವೆಂದರೆ, ದಕ್ಷಿಣಕನ್ನಡದಲ್ಲಿ ಚರ್ಚ್‌ಗಳ ಮೇಲಣ ಮತ್ತು ಕ್ರೈಸ್ತರ ಸಭೆಗಳ ಮೇಲಣ ದಾಳಿ. ಒಂದು ಇಡೀ ಸಮುದಾಯದ ಧಾರ್ಮಿಕ ಅಭಿವ್ಯಕ್ತಿಯ ಮೇಲೆ ಈ ತೆರನ ಹಲ್ಲೆಯ ಅತ್ಯಂತ ಭಯಾನಕ ಏಕೈಕ ಘಟನೆಯೆಂದರೆ ೨೦೦೮ರಲ್ಲಿ ಕರ್ನಾಟಕದ ಚರ್ಚ್‌ಗಳ ಮೇಲೆ ರಾಜ್ಯಾದ್ಯಂತ ನಡೆದ ದಾಳಿ; ಈ ದಾಳಿಯ ಕೇಂದ್ರಬಿಂದು ದಕ್ಷಿಣಕನ್ನಡ ಜಿಲ್ಲೆಯಾಗಿತ್ತು. ಕ್ರೈಸ್ತ ಸಮುದಾಯವನ್ನು ಗುರಿಯಾಗಿರಿಸಿಕೊಳ್ಳುವ ಸ್ಪಷ್ಟ ಉದ್ದೇಶದಿಂದ ಸೆಪ್ಟಂಬರ್ ೧೪, ೨೦೦೮ ರ ಒಂದೇ ಒಂದು ದಿನ ೧೭ ಕ್ಕೂ ಅಧಿಕ ಚರ್ಚ್‌ಗಳಿಗೆ ಹಾನಿ ಉಂಟು ಮಾಡಲಾಗಿತ್ತಲ್ಲದೆ, ಅವನ್ನು ಅಪವಿತ್ರಗೊಳಿಸಲಾಗಿತ್ತು.

ಅಲ್ಪಸಂಖ್ಯಾತ ಸಮುದಾಯದ ಮೇಲಣ ಇನ್ನೊಂದು ವಿಧದ ದಾಳಿಯೆಂದರೆ – ದನ ಸಾಗಾಟದ ಮೇಲೆ ಸರಣಿ ದಾಳಿ. ದನದ ಮಾಂಸ ಮಾರಾಟದ ಮೇಲಣ ದಾಳಿ ಇದಕ್ಕೆ ಇನ್ನೊಂದು ಸೇರ್ಪಡೆ. ಈ ಎರಡೂ ಕೃತ್ಯಗಳು ಅಲ್ಪಸಂಖ್ಯಾತ ಸಮುದಾಯಗಳ ಆಹಾರ ಕ್ರಮದ ಮೇಲಣ ನೇರ ದಾಳಿ. ನಿರ್ದಿಷ್ಟವಾಗಿ ದನ ಸಾಗಾಟದ ಮೇಲಣ ದಾಳಿಗಳು ಹಿಂಸಾಚಾರದ ನೇರ ಕೃತ್ಯವನ್ನು ಹೇಳುತ್ತದೆ. ಜಾನುವಾರು ಸಾಗಾಟದ ವಾಹನಗಳನ್ನು ತಥಾಕಥಿತ ಕಾರ್ಯಕರ್ತರು ತಡೆದು ನಿಲ್ಲಿಸಿ ಜಾನುವಾರು ಸಾಗಾಟದಲ್ಲಿ ಒಳಗೊಂಡವರ ಮೇಲೆ ಕ್ರೂರವಾಗಿ ಹಲ್ಲೆ ನಡೆಸುವಾಗ ಪೊಲೀಸರಿಗೆ ತಿಳಿಸುವ ಸೌಜನ್ಯ ಕೂಡಾ ಇಲ್ಲ. ಗೋ–ರಕ್ಷಣೆಯ ವಿಷಯಕ್ಕೆ ಬಂದಾಗ ಹಿಂಸಾಚಾರದ ಬಳಕೆಯನ್ನು ವಿಶ್ವ ಹಿಂದೂ ಪರಿಷತ್ ಮುಖಂಡರೋರ್ವರು ಸಮರ್ಥಿಸುವುದರೊಂದಿಗೆ, ಈ ಹಿಂಸಾಚಾರ ಬಳಕೆಯ ಬಗ್ಗೆ ವಿಷಾದ ಕೂಡಾ ಅವರಲ್ಲಿದ್ದಂತೆ ಕಾಣುತ್ತಿಲ್ಲ. ಆತನ ಅಭಿಪ್ರಾಯದಲ್ಲಿ ಅಕ್ರಮ ದನ ಸಾಗಾಟವನ್ನು ನಿಲ್ಲಿಸುವುದು ಬಜರಂಗ ದಳದ ಒಂದು ಗುರಿ. ಆ ವ್ಯಕ್ತಿಯ ಪ್ರಕಾರ, ಪೊಲೀಸರು ಕ್ರಮ ಕೈಗೊಳ್ಳಲು ವಿಫಲರಾಗುತ್ತಿರುವ ಹಿನ್ನೆಲೆಯಲ್ಲಿ ಬಜರಂಗ ದಳ (ವಿಶ್ವಹಿಂದೂ ಪರಿಷತ್‌ನ, ಯುವಪಡೆಯುಳ್ಳ ಸಹಸಂಘಟನೆ) ಅನುಸರಿಸುವ ಈ ಹಿಂಸಾತ್ಮಕ ವಿಧಾನಗಳನ್ನು ವಿಶ್ವಹಿಂದೂ ಪರಿಷತ್ ಅನುಮೋದಿಸುತ್ತದೆ.

ಬಜರಂಗ ದಳದ ಕೃತ್ಯಗಳ ಸ್ಪಷ್ಟ ಕಾನೂನುಬಾಹಿರತೆಯ ಮೂಲವೆಂದರೆ, ಕರ್ನಾಟಕ ಗೋ ಹತ್ಯೆ ತಡೆ ಮತ್ತು ಜಾನುವಾರು ರಕ್ಷಣಾ ಅಧಿನಿಯಮ ೧೯೬೬. ಕರ್ನಾಟಕ ಗೋ ಹತ್ಯೆ ಅಧಿನಿಯಮ ೧೯೬೬ ಸೆಕ್ಷನ್ ೪ರ ಅಡಿಯಲ್ಲಿ ದನ ಅಥವಾ ಎಮ್ಮೆಯ ಕರುವಿನ ಹತ್ಯೆಯನ್ನು ನಿಷೇಧಿಸಲಾಗಿದೆ. ಅಲ್ಲದೆ ರಾಜ್ಯದಿಂದ ಹೊರಕ್ಕೆ ಜಾನುವಾರು ಸಾಗಾಟ–ಅದು ಹತ್ಯೆಯ ಉದ್ದೇಶಕ್ಕಾಗಿದ್ದರೆ–ಒಂದು ಅಪರಾಧ. ಚಾಲ್ತಿಯಲ್ಲಿರುವ ಕಾನೂನಿನ ಪ್ರಕಾರ, ದನದ ಮಾಂಸ ಮಾರಾಟ ಮಾಡುವ, ಇರಿಸಿಕೊಳ್ಳುವ ಅಥವಾ ಸೇವಿಸುವುದರ ಮೇಲೆ ಯಾವ ನಿರ್ಬಂಧವೂ ಇರುವುದಿಲ್ಲ. ಆದ್ದರಿಂದ ಜಾನುವಾರು ಸಾಗಾಟ ತಡೆಯುವ, ಹಾಗೆಯೇ ದನದ ಮಾಂಸ ಮಾರಾಟದ ಮೇಲೆ ದಾಳಿ ನಡೆಸುವ ಬಜರಂಗ ದಳದ ಕೃತ್ಯವು ಸ್ಪಷ್ಟವಾಗಿ ಕಾನೂನುಬಾಹಿರ.

ಈ ಕಾನೂನುಬಾಹಿರ ಕಾರ್ಯಗಳು ಬಜರಂಗ ದಳದ ಹಿಂಸಾತ್ಮಕ ಕಾವಲುಗಾರಿಕೆಯ ಜತೆಸೇರಿದಾಗ

ಸದರಿ ಕೃತ್ಯಗಳಿಗೆ ಕಾನೂನಾತ್ಮಕ ಸಮರ್ಥನೆಯೇ ಇರುವುದಿಲ್ಲ. ವಾಸ್ತವದಲ್ಲಿ ಬಜರಂಗ ದಳ ಮತ್ತು ಇತರ ಕಾವಲುಗಾರಿಕೆ ಸಂಘಟನೆಗಳು ಪ್ರಸ್ತಾವಿತ (ಮತ್ತು ಸ್ಪಷ್ಟವಾಗಿ ಅಸಾಂವಿಧಾನಿಕ) 'ಕರ್ನಾಟಕ ಜಾನುವಾರು ಹತ್ಯೆ ತಡೆ ಮತ್ತು ಸಂರಕ್ಷಣಾ ಮಸೂದೆ, ೨೦೧೦'ರ ನಿಬಂಧಗಳನ್ನು ಅಪಕ್ವ ರೀತಿಯಲ್ಲಿ ಜಾರಿಗೊಳಿಸಲು ಹೆಣಗುತ್ತಿವೆ ಎನ್ನುವುದೇ ಇಲ್ಲಿಯ ಚಿಂತೆಯ ಸಂಗತಿ. ಸದರಿ ಮಸೂದೆಯು ರಾಜ್ಯದೊಳಗಡೆಯೂ ಹತ್ಯೆಯ ಉದ್ದೇಶದ ಜಾನುವಾರು ಸಾಗಾಟವನ್ನು ನಿರ್ಬಂಧಿಸುತ್ತದೆ ಮತ್ತು ದನದ ಮಾಂಸ ಇರಿಸಿಕೊಳ್ಳುವುದು, ಮಾರಾಟ ಮಾಡುವುದು ಮತ್ತು ಸಾಗಾಟ ಮಾಡುವುದನ್ನು ಇನ್ನಷ್ಟು ಅಪರಾಧೀಕರಿಸುತ್ತದೆ. ರಾಜ್ಯಪಾಲರು ಈಗಾಗಲೇ ಇದನ್ನು ರಾಷ್ಟ್ರಪತಿಗಳಿಗೆ ಕಳುಹಿಸಿದ್ದು (ಸದರಿ ಶಾಸನವು ಇನ್ನೂ ಕಾನೂನಾಗದಿದ್ದರೂ) ವಾಸ್ತವದಲ್ಲಿ ಪೊಲೀಸರು ಮತ್ತು ಬಜರಂಗದಳದಂತಹ ಕಾವಲುಗಾರಿಕೆ ಸಂಘಟನೆಗಳ ಮೂಲಕ ಅದನ್ನು ಜಾರಿಗೊಳಿಸಲಾಗುತ್ತಿದೆ.

ಮೇಲೆ ಉಲ್ಲೇಖಿಸಿದ ನಾನಾ ಅಪರಾಧಗಳ ವಿವರಗಳಿಂದ ಕಂಡುಬರುವುದೇನೆಂದರೆ, ವಾಸ್ತವದಲ್ಲಿ ಕರ್ನಾಟಕದಲ್ಲಿ ಪ್ರಭುತ್ವವು ಒಟ್ಟಾರೆಯಾಗಿ ಕಾನೂನು ಮತ್ತು ಸುವ್ಯವಸ್ಥೆಯ ತನ್ನ ಹೊಣೆಗಾರಿಕೆಯಿಂದ ನುಣುಚಿಕೊಂಡಿದೆ. ಅಸಲಿಗೆ, ಹಿಂದೂ ಜಾಗರಣ ವೇದಿಕೆಯಿಂದ ಹಿಡಿದು, ಬಜರಂಗ ದಳದವರೆಗೆ, ಅನಾಮಿಕ ಹಿಂದುತ್ವ ಕಾರ್ಯಕರ್ತರು ಮತ್ತು ಗುಂಪುಗಳವರೆಗೆ ಹಿಂದುತ್ವ ಸಿದ್ಧಾಂತದಲ್ಲಿ ನಿಷ್ಠೆ ಹೊಂದಿರುವ ಅಸಂಖ್ಯ ಗುಂಪುಗಳು, ತಮ್ಮ ಅಸಾಂವಿಧಾನಿಕ ಕಾರ್ಯಸೂಚಿಯನ್ನು ಜಾರಿಗೊಳಿಸಲು, ಕಾನೂನನ್ನು ತಮ್ಮ ಕೈಗೆ ತೆಗೆದುಕೊಂಡಿವೆ. ಕಾನೂನುಬಾಹಿರ ಕೃತ್ಯಗಳ ವ್ಯಾಪ್ತಿಯು ಯುವಕ ಯುವತಿಯರ ಮೇಲೆ ಪೊಲೀಸ್‌ಗಿರಿ ನಡೆಸುವುದನ್ನೂ ದಾಟಿ, ಚರ್ಚ್‌ಗಳ ಮೇಲಿನ ದಾಳಿಯವರೆಗೆ, ಹಾಗೆಯೇ ಜಾನುವಾರು ಸಾಗಾಟದವರೆಗೆ ಸಾಗಿದ್ದರೂ ಆ ಎಲ್ಲ ದಾಳಿಗಳ ಹಿಂದಿನ ಚಿಂತನೆ ಮಾತ್ರ ಒಂದೇ.

ಇಲ್ಲಿನ ಕೆಲವು ಪಾತ್ರಧಾರಿಗಳು ಯಾವುದೇ ರೀತಿಯ ಸರಕಾರಿ ಕ್ರಮದ ವಿರುದ್ಧ ಸಂಪೂರ್ಣ ರಕ್ಷಣೆ ಪಡೆದುಕೊಂಡಂತೆ ಕಾಣುತ್ತದೆ ಎನ್ನುವುದನ್ನು ಇಲ್ಲಿ ಗಮನಿಸಬೇಕು. ನಿರ್ದಿಷ್ಟವಾಗಿ ಬಜರಂಗ ದಳ, ಹಾಗೆಯೇ ಹಿಂದೂ ಜಾಗರಣ ವೇದಿಕೆಯಂತಹ ಗುಂಪುಗಳು ಅಮಾಯಕ ಜನತೆಯನ್ನು ಬೆದರಿಸುತ್ತಲೇ ಇವೆಯಾದರೆ, ಸರಕಾರ (ಬೆಂಬಲ ನೀಡುವ ಪ್ರೇಕ್ಷಕನಂತಿಲ್ಲದಿದ್ದರೂ) ಮೂಕ ಪ್ರೇಕ್ಷಕನಂತೆ ನಿಂತುಕೊಂಡಿದೆ. ಇತ್ತೀಚಿನ ಹಟ್ಟುಹಬ್ಬ ಪಾರ್ಟಿಯಲ್ಲಿ ದುಷ್ಕರ್ಮಿಗಳನ್ನು ಆರಾಮವಾಗಿ ಹೊರಹೋಗಲು ಬಿಟ್ಟಿರುವ ದೃಶ್ಯವು ಗಂಭೀರ ಸರಕಾರಿ ನಿಷ್ಕ್ರಿಯತೆಯ ವಿಸ್ತೃತ ತಾತ್ಸಾರದ ಕೇವಲ ಒಂದು ಸಂಕೇತವಾಗಿದ್ದು, ಮೂಲಭೂತ ಸಾಂವಿಧಾನಿಕ ಸ್ವಾತಂತ್ರ್ಯಗಳ ಮೇಲಣ ನಿರಂತರ ದಾಳಿಯ ಹಿನ್ನೆಲೆಯಲ್ಲಿ, ಸದರಿ ಕೃತ್ಯದಲ್ಲಿ ಭಾಗಿಯಾಗಿರುವುದಕ್ಕೆ ಸಮಾನವಾದುದಾಗಿದೆ. ಈ ನೆಲದ ಸಾಮಾನ್ಯ ಕಾನೂನುಗಳ ವಿರುದ್ಧ ಮಾತ್ರವಲ್ಲ, ಸಹೋದರಭಾವ, ಸ್ವಾತಂತ್ರ್ಯ ಮತ್ತು ಸಮಾನತೆಯೆಡೆಗಿನ ಸಾಂವಿಧಾನಿಕ ಬದ್ಧತೆಯ ವಿರುದ್ಧ ಕೂಡಾ ಈ ಗುಂಪುಗಳು ನಡೆಸುತ್ತಿರುವ ಸ್ಪಷ್ಟ ಕಾನೂನುಬಾಹಿರ ಕೃತ್ಯಗಳು ಮತ್ತು ಗಂಭೀರ ಅಪರಾಧಗಳ ಬಗ್ಗೆ ಸರಕಾರ ಜಾಣಕುರುಡನ್ನು ಪ್ರದರ್ಶಿಸಿದೆ.

ಇಲ್ಲಿ ಸರಕಾರದ ಮೇಲಿರುವ ಹೊಣೆಗಾರಿಕೆಯು ಹುಟ್ಟುಹಬ್ಬ ಪಾರ್ಟಿಯ ಬಲಿಪಶುಗಳಿಗೆ ಕೇವಲ ನ್ಯಾಯ ದೊರಕಿಸಿಕೊಡುವಂತೆ ನೋಡಿಕೊಳ್ಳುವುದಕ್ಕಿಂತಲೂ ಹೆಚ್ಚು ವಿಸ್ತೃತವಾದುದಾಗಿದೆ. ಸಾಂಸ್ಕೃತಿಕ ಕಾವಲುಗಾರಿಕೆ ಗುಂಪುಗಳನ್ನು ಹದ್ದುಬಸ್ತಿಗೆ ತರುವುದು ಮತ್ತು ಇಂತಹ ಘಟನೆಗಳು ಮರುಕಳಿಸದಂತೆ ನೋಡಿಕೊಳ್ಳುವುದು ಇಲ್ಲಿನ ಹೊಣೆಗಾರಿಕೆಯಾಗಿದೆ.

# ಕೋಮು ಪೊಲೀಸ್‌ಗಿರಿಯ ಪರಿಣಾಮ: ಅಸಾಂವಿಧಾನಿಕ ಭೇದ ಭಾವಕ್ಕೊಂದು ಹೊಸ ನಾಂದಿ

(ಈ ಭಾಗವನ್ನು ಬಹುವಾಗಿ ಮಂಗಳೂರು ಪಬ್ ದಾಳಿ ಕುರಿತ ಈ ಹಿಂದಿನ ಪಿಯುಸಿಎಲ್-ಕೆ ವರದಿಯಿಂದ ಎತ್ತಿಕೊಳ್ಳಲಾಗಿದೆ. ಸದರಿ ವಿಶ್ಲೇಷಣೆಯು, ೨೦೦೯ರ ಲಾಗಾಯ್ತು ದಕ್ಷಿಣಕನ್ನಡದಲ್ಲಿ ಏನು ಆಗುತ್ತಿದೆಯೋ ಅದರಲ್ಲಿ ಒಂದೇ ತೆರನಾದ ಒಂದು ವಿನ್ಯಾಸವಿದೆ ಎಂಬುದನ್ನು ಮತ್ತೆ ಹೇಳುತ್ತದೆ)

ಕೋಮು ಪೊಲೀಸ್‌ಗಿರಿಯು ಹೇಗೆ ಯಾವುದೇ ಭಯವಿಲ್ಲದೆ, ಕ್ರಿಮಿನಲ್ ಕಾನೂನನ್ನು ಉಲ್ಲಂಘಿಸುತ್ತದೆ ಎನ್ನುವುದನ್ನು ನೋಡುವ ಅಗತ್ಯವಿದೆಯಾದರೂ, ಇದು ಸಂವಿಧಾನದ ಮೂಲ ಆಧಾರನೆಲೆಯನ್ನು ಉಲ್ಲಂಘಿಸುವ ಸಾಮಾಜಿಕ ಪ್ರತ್ಯೇಕೀಕರಣದ ಜಾರಿಯ ವಿಸ್ತೃತ ವಿದ್ಯಮಾನವಾಗುತ್ತಿದೆ ಎನ್ನುವುದು ಇನ್ನೂ ಹೆಚ್ಚಿನ ಮಹತ್ತ್ವದ್ದು. ಭೇದಭಾವದ (ಅಪಾರ್ತೀಡ್) ಚಿಂತನೆಯ ನಿರ್ದಿಷ್ಟ ಸಂಗತಿಯೆಂದರೆ, ಸದ್ಯ ಸಮಾಜದಲ್ಲಿ ಅಸ್ತಿತ್ವದಲ್ಲಿರುವ ಭೇದಭಾವದ ಚಿಂತನೆಯನ್ನು ಎತ್ತಿಕೊಂಡು ಅದನ್ನು ಕಾನೂನಾಗಿ ಪರಿವರ್ತಿಸುವುದು. ಅರ್ಥಾತ್, ಭೇದಭಾವವೆಂದರೆ ಸ್ವಯಂಪ್ರೇರಿತ ಪ್ರತ್ಯೇಕೀಕರಣ ಅಥವಾ ಸಮಾಜದ ಪ್ರಬಲ ವರ್ಗಗಳು ಹೇರಿದ ಪ್ರತ್ಯೇಕೀಕರಣವನ್ನು ಕಾನೂನು ನಿಗದಿಪಡಿಸಿದ ಪ್ರತ್ಯೇಕೀಕರಣವಾಗಿ ಪರಿವರ್ತಿಸುವ ಒಂದು ವಿದ್ಯಮಾನವಲ್ಲದೆ ಇನ್ನೇನೂ ಅಲ್ಲ. ಸಮಾಜ ಹೇರಿದ ಈ ಪ್ರತ್ಯೇಕೀಕರಣ ವ್ಯವಸ್ಥೆಯನ್ನು ಯಾರೇ ವ್ಯಕ್ತಿ ದಾಟಿದರೂ ಅವರು ಕಾನೂನು ಪ್ರಕಾರ ದಂಡನೆಗೆ ಒಳಗಾಗುತ್ತಾರೆ. ಭಾರತೀಯ ಸಂವಿಧಾನವು ಕಾನೂನು ಪ್ರೇರಿತ ಪ್ರತ್ಯೇಕೀಕರಣ ಮತ್ತು ಸಮಾಜ ವಿಧಿಸಿದ ಪ್ರತ್ಯೇಕೀಕರಣ ಹೀಗೆ ಎರಡೂ ತೆರನಾದ ಪ್ರತ್ಯೇಕೀಕರಣದ ನಿರಾಕರಣೆಯನ್ನು ಆಧರಿಸಿದೆ. ಅದು, ಸಹೋದರ ಭಾವದೊಂದಿಗೆ ಜನರು ಮುಕ್ತವಾಗಿ ಬೆರೆಯಬಹುದು ಎಂಬುದನ್ನು ಖಾತ್ರಿಪಡಿಸಬೇಕೆಂದು ವಿಧಿಸುತ್ತದೆ. ವಾಸ್ತವದಲ್ಲಿ ಸಂವಿಧಾನದ ಅನುಚ್ಛೇದ ೧೭ನ್ನು ಯಾರು ಬೇಕಾದರೂ ಓದಬಹುದು; ಅದು ಯಾವುದೇ ರೀತಿಯ ಅಸ್ಪೃಶ್ಯತೆಯ ಆಚರಣೆಯನ್ನು ಸ್ಪಷ್ಟವಾಗಿ ಶಿಕ್ಷಿಸುತ್ತದೆ; ಯಾಕೆಂದರೆ ಸಂವಿಧಾನವು ಸಹೋದರತ್ವದ ಭಾವನೆಗೆ ಕಟಿಬದ್ಧವಾಗಿದೆ.

ಡಾ.ಅಂಬೇಡ್ಕರ್ ಸಂವಿಧಾನ ಸಭೆಯ ತನ್ನ ಸಮಾಪನ ಭಾಷಣದಲ್ಲಿ ಬಹುಮುಖ್ಯ ಅಂಶವೊಂದನ್ನು ಹೇಳಿದ್ದು, ಅದು ಈ ಸಂದರ್ಭದಲ್ಲಿ ಅತ್ಯಂತ ಪ್ರಸ್ತುತವಾದುದಾಗಿದೆ:

> 'ಬರೇ ರಾಜಕೀಯ ಪ್ರಜಾತಂತ್ರಕ್ಕೆ ನಾವು ತೃಪ್ತರಾಗಕೂಡದು. ರಾಜಕೀಯ ಪ್ರಜಾತಂತ್ರದ ತಳಹದಿ ಭಾಗದಲ್ಲಿ ಸಾಮಾಜಿಕ ಪ್ರಜಾತಂತ್ರ ಇಲ್ಲದೆ ಹೋದರೆ ರಾಜಕೀಯ ಪ್ರಜಾತಂತ್ರ ದೀರ್ಘಕಾಲ ಬಾಳದು. ಸಾಮಾಜಿಕ ಪ್ರಜಾತಂತ್ರ ಎಂದರೇನು? ಸಾಮಾಜಿಕ ಪ್ರಜಾತಂತ್ರ ಎಂದರೆ ಅದೊಂದು ಜೀವನವಿಧಾನ; ಅದು ಸ್ವಾತಂತ್ರ್ಯ, ಸಮಾನತೆ ಮತ್ತು ಸಹೋದರಭಾವವನ್ನು ಜೀವನತತ್ತ್ವವಾಗಿ ಗುರುತಿಸುತ್ತದೆ. ಸ್ವಾತಂತ್ರ್ಯ, ಸಮಾನತೆ ಮತ್ತು ಸಹೋದರಭಾವದ ಈ ತತ್ತ್ವಗಳನ್ನು ತ್ರಿತ್ವವೊಂದರಲ್ಲಿನ (ಟ್ರಿನಿಟಿ) ಬಾಬತುಗಳಾಗಿ ಪರಿಗಣಿಸಕೂಡದು. ಒಂದರಿಂದ ಇನ್ನೊಂದು ವಿಚ್ಛೇದನಗೊಳ್ಳುವುದು

ಎಂದರೆ, ಪ್ರಜಾತಂತ್ರದ ಮೂಲ ಉದ್ದೇಶವನ್ನೇ ವಿಫಲಗೊಳಿಸುವುದು ಎಂಬ ಅರ್ಥದಲ್ಲಿ ಅವು ತ್ರಿತ್ವದ ಒಂದು ಒಕ್ಕೂಟವನ್ನು ರೂಪಿಸುತ್ತವೆ. ಸ್ವಾತಂತ್ರ್ಯವನ್ನು ಸಮಾನತೆಯಿಂದ ವಿಚ್ಛೇಧಿಸಲಾಗದು, ಸಮಾನತೆಯನ್ನು ಸ್ವಾತಂತ್ರ್ಯದಿಂದ ವಿಚ್ಛೇಧಿಸಲಾಗದು. ಸಮಾನತೆ ರಹಿತ ಸ್ವಾತಂತ್ರ್ಯವು ಅನೇಕರ ಮೇಲೆ ಕೆಲವರ ಶ್ರೇಷ್ಠತೆಗೆ ಕಾರಣವಾಗುತ್ತದೆ. ಸ್ವಾತಂತ್ರ್ಯ ರಹಿತ ಸಮಾನತೆಯು ವ್ಯಕ್ತಿಗತ ನೆಲೆಯ ಉಪಕ್ರಮಗಳನ್ನು ಕೊಂದು ಹಾಕುತ್ತದೆ. ಸಹೋದರಭಾವ ರಹಿತ ಸ್ವಾತಂತ್ರ್ಯ ಮತ್ತು ಸಮಾನತೆಯು ಸಹಜ ಹರಿವಿನ ಸಂಗತಿಗಳಾಗುವುದು ಸಾಧ್ಯವಿಲ್ಲ. ಅದನ್ನು ಜಾರಿಗೊಳಿಸಲು ಕಾನ್‌ಸ್ಟೇಬಲ್ ಬೇಕಾಗುತ್ತದೆ.

(ಸಂವಿಧಾನ ಸಭೆ ಚರ್ಚೆಗಳು, ನವೆಂಬರ್ ೨೫, ೧೯೪೯, ಪುಟ ೯೭೯ ಬುಕ್ ಸಂ.೫)

ಸಹೋದರತೆಯ ತತ್ತ್ವ ಎಷ್ಟು ಕಷ್ಟಕರ ಆದರೂ, ಎಷ್ಟು ಮುಖ್ಯ ಎನ್ನುವುದನ್ನು ಡಾ.ಅಂಬೇಡ್ಕರ್ ಗುರುತಿಸುತ್ತಾರೆ. ಅವರ ಅಭಿಪ್ರಾಯ ಹೀಗಿದೆ:

ಸಹೋದರಭಾವ ಎಂದರೆ ಎಲ್ಲಾ ಭಾರತೀಯರಲ್ಲಿ ಸಮಾನ ಭ್ರಾತೃತ್ವದ ಭಾವನೆ– ಭಾರತೀಯ ರನ್ನು ಒಂದು ಎಂದು ನೋಡಿದರೆ. ಸಾಮಾಜಿಕ ಜೀವನಕ್ಕೆ ಒಕ್ಕಟ್ಟು ಐಕಮತ್ಯ ಒದಗಿಸುವ ತತ್ತ್ವ ಇದುವೇ. ಇದನ್ನು ಸಾಧಿಸುವುದು ಕಷ್ಟಕರ'.

ಸಹೋದರತ್ವ ಇಲ್ಲದೆ ಸಮಾನತೆ ಮತ್ತು ಸ್ವಾತಂತ್ರ್ಯ ಇವು ಮೇಲ್ಮೈಯಲ್ಲಿ ಲೇಪಿಸಿದ ಬಣ್ಣಕ್ಕಿಂತ ಆಳವಿರುವುದು ಸಾಧ್ಯವಿಲ್ಲ' ಎಂದು ಹೇಳುವ ಮೂಲಕ ಸಹೋದರತ್ವದ ಮಹತ್ತ್ವವನ್ನು ಒತ್ತಿಹೇಳುತ್ತಾ ಹೋಗುತ್ತಾರೆ' (ಅದರಲ್ಲಿಯೇ, ಪುಟ ೯೮೦).

ಸಮುದಾಯಗಳು ಕೊಡುಕೊಳೆಯಲ್ಲಿ ತೊಡಗಬಾರದು, ಪರಸ್ಪರ ಬೆರೆಯಬಾರದು ಎಂದು ಒತ್ತಾಯಿಸುವ ಮೂಲಕ ಮತ್ತು ಸಂವಿಧಾನದ ಪೀಠಿಕಾಭಾಗವು ಭರವಸೆ ನೀಡಿರುವ 'ಸಹೋದರತ್ವ'ದ ಅರ್ಥವನ್ನು ಪಾಲಿಸಲು ಯತ್ನಿಸುವವರನ್ನು ಶಿಕ್ಷಿಸಲು ಯತ್ನಿಸುವ ಮೂಲಕ, ಕೋಮು ಪೊಲೀಸ್‌ಗಿರಿಯು ಸಂವಿಧಾನದ ಆದೇಶದ ಮೇಲೆಯೇ ನಡೆಸುವ ಒಂದು ಮೂಲಭೂತ ದಾಳಿಯಾಗಿದೆ. ಕೋಮು ಪೊಲೀಸ್‌ಗಿರಿಯು ಸಂವಿಧಾನದ ಪೀಠಿಕಾಭಾಗದಲ್ಲಿ ಹೇಳಲಾದ ಸಹೋದರತ್ವದ ಭರವಸೆಯ ಅದರ ಬೇರುಗಳಿಗೇ ಸವಾಲುಹಾಕುತ್ತದೆ. ಕೋಮು ಪೊಲೀಸ್‌ಗಿರಿಯು ಉತ್ಪಾದಿಸ ಬಯಸುವುದು ಪರಸ್ಪರ ಯಾವುದೇ ರೀತಿಯ ಸಾಮಾಜಿಕ ಬೆರೆಯುವಿಕೆ ಇಲ್ಲದ ಏಕಶಿಲೆಯಂಥ, ಸ್ವಯಂ ಆವೃತ (ಸೆಲ್ಫ್ ಎನ್‌ಕ್ಲೋಸ್‌ಡ್) ಸಮುದಾಯಗಳನ್ನು. 'ನಾವು ಭಾರತೀಯ ಪ್ರಜೆಗಳು' ಎಂಬ ಭಾವನೆಗೆ ಅದು ವಿರುದ್ಧವಾದುದಾಗಿದೆ ಮತ್ತು ಇಂಡಿಯಾವು 'ಒಂದು ದೇಶ' ಅಲ್ಲ, ಬದಲಿಗೆ ಪ್ರತ್ಯೇಕ ಜನತೆಯ ಸಮಾವೇಶ ಎಂದು ಅದು ಆಗ್ರಹಿಸುತ್ತದೆ.

ಕೋಮು ಪೊಲೀಸ್‌ಗಿರಿಯು ಮುಂದೆ, 'ಸಾಮಾಜಿಕ ಭೇದಭಾವ'ದ ರೂಪಗಳಿಗೆ ದಾರಿಮಾಡಿಕೊಡುತ್ತದೆ. ನಮ್ಮ ಪ್ರಕಾರ, 'ಸಾಮಾಜಿಕ ಭೇದಭಾವ' ಎಂದರೆ, ಪ್ರತಿಯೊಂದು ಸ್ವಯಂ ಆವೃತ ಸಮುದಾಯಕ್ಕೆ ಯಾವ ರೀತಿಯ ಅಭಿವ್ಯಕ್ತಿಗಳು ಸೂಕ್ತ ಎಂದು ನಿಗದಿಪಡಿಸುವ ಮೂಲಕ, ಸಮುದಾಯ ಗಡಿರೇಖೆಗಳನ್ನು ಕಾವಲು ಕಾಯುವುದು. ದಕ್ಷಿಣ ಆಫ್ರಿಕಾದಲ್ಲಿದ್ದಂತಹ ವರ್ಣಭೇದದ ಸಾಂಪ್ರದಾಯಿಕ ತಿಳಿವಳಿಕೆಯು, ಕಾನೂನಿನ ಮೂಲಕ ದಕ್ಷಿಣ ಆಫ್ರಿಕಾದ ಜನತೆಯನ್ನು ಪ್ರತ್ಯೇಕಿಸುವ ಸಂರಚನೆಗಳನ್ನು ಉಲ್ಲೇಖಿಸುತ್ತದೆ. ನಮ್ಮ ಅರ್ಥದಲ್ಲಿ ಸಾಮಾಜಿಕ ಭೇದಭಾವ ಎಂದರೆ ಸ್ವಯಂಘೋಷಿತ ಕಾವಲುಗಾರಿಕೆ ಗುಂಪುಗಳು ಧರ್ಮ ಮತ್ತು ಲಿಂಗತ್ವ ನೆಲೆಯಲ್ಲಿ ಸಮುದಾಯಗಳನ್ನು ಪ್ರತ್ಯೇಕಿಸುವ ಒಂದು ಪದ್ಧತಿ; ಹಾಗೆಯೇ ಪ್ರತ್ಯೇಕ ಸಮುದಾಯಗಳಿಗೆ ಸೂಕ್ತ ನಡತೆ ಮತ್ತು ನಡವಳಿಕೆಗಳನ್ನು ನಿಗದಿಪಡಿಸುವುದು.

ಪ್ರಭುತ್ವದ ಸ್ಪಷ್ಟ ಬೆಂಬಲದ ಒಂದೇ ಕಾರಣದಿಂದ ಸಾಮಾಜಿಕ ಭೇದಭಾವವು ಯಶ ಕಂಡಿದೆ; ಆದ್ದರಿಂದ ಸ್ಪಷ್ಟವಾಗಿ ಕಾನೂನುಬಾಹಿರ ಕೃತ್ಯಗಳಿಗೆ ಪೂರ್ಣ ರಕ್ಷಣೆಯನ್ನು ಹೊಂದಿರುತ್ತದೆ. ಸಾಮಾಜಿಕ ಭೇದಭಾವ ಎಂದರೆ ಬರೇ ಸಮುದಾಯಗಳನ್ನು ಪ್ರತ್ಯೇಕೀಕರಿಸುವುದು ಮಾತ್ರವಲ್ಲ, ಸಮುದಾಯವೊಂದರ ಒಳಗಡೆ ಸಂಸ್ಕೃತಿ, ಉಡುಪು ಮತ್ತು ವ್ಯಕ್ತಿಗಳ ನಡತೆಯ ಬಗೆಗೆ ಕೂಡಾ ಅಷ್ಟೇ ಸಂಬಂಧಿಸಿದೆ ಎನ್ನುವುದನ್ನು ಒತ್ತಿ ಹೇಳುವುದು ಬಹಳ ಮುಖ್ಯ. ಸಹಜವಾಗಿಯೇ ಗಡಿಗಳನ್ನು ಕಾವಲು ಕಾಯುವವರಿಗೆ ತಮ್ಮದೇ ಸಮುದಾಯಗಳವರ

ವಿರುದ್ಧ ಹಿಂಸಾಚಾರ ನಡೆಸಲು ಯಾವುದೇ ಹಿಂಜರಿಕೆ ಇರುವುದಿಲ್ಲ ಎಂಬುದನ್ನು ೨೦೦೯ ರಲ್ಲಿ ನಡೆದ ಪಬ್ ದಾಳಿ, ಹಾಗೆಯೇ ೨೦೧೨ ರಲ್ಲಿ ಮಂಗಳೂರಿನಲ್ಲಿ ಹುಟ್ಟುಹಬ್ಬದ ಪಾರ್ಟಿಯ ಮೇಲೆ ನಡೆದ ದಾಳಿಗಳಲ್ಲಿ ನಾವು ನೋಡಿಯೇ ಇದ್ದೇವಲ್ಲ.

ದುರದೃಷ್ಟದ ಸಂಗತಿಯೆಂದರೆ, ಸ್ವಾತಂತ್ರ್ಯದ ೬೦ ವರ್ಷಗಳ ಬಳಿಕ ಸಂವಿಧಾನ ನಿರ್ಮಾತೃಗಳ ಮುಂಗಾಣ್ಕೆಯನ್ನು, ಭಾರತೀಯ ಸಂವಿಧಾನತೆಯ ಹೃದಯವನ್ನೇ ಭೇದಿಸಲು ಪಣತೊಟ್ಟಿರುವ ಸಂಘಟನೆಗಳು ಸಂಪೂರ್ಣವಾಗಿ ಧಿಕ್ಕರಿಸಲು ಬಯಸಿವೆ. ಭಾರತೀಯ ಜನಸಮುದಾಯವು 'ತಮ್ಮನ್ನು ತಾವು ಸಮರ್ಪಿಸಿಕೊಂಡಿರುವ' ಮತ್ತು ಈಗ ಅಪಾಯ ಎದುರಿಸುತ್ತಿರುವ ಕೆಲವು ಮುಖ್ಯ ಹಕ್ಕುಗಳು ಹೀಗಿವೆ:

## ೧. ಸಾಮಾಜಿಕ ಮತ್ತು ಅನ್ಯೋನ್ಯ ಸಂಬಂಧದ ಆಯ್ಕೆಗಳನ್ನು ಗೌರವಿಸುವ ಹಕ್ಕು (ವಿಧಿ ೨೧)

ಭಾರತೀಯ ಸಂವಿಧಾನದ ಅಡಿಯಲ್ಲಿ ಬರುವ 'ಬದುಕುವ ಹಕ್ಕು' ಘನತೆಯಿಂದ ಬದುಕುವ ಹಕ್ಕನ್ನು ಒಳಗೊಂಡಿದೆ ಎಂದು ವ್ಯಾಖ್ಯಾನಿಸಲಾಗಿದೆ. ಘನತೆಯಿಂದ ಬದುಕುವ ಹಕ್ಕು, ಯಾರೊಂದಿಗೆ ಸಂಬಂಧ ಸ್ಥಾಪಿಸಿಕೊಳ್ಳಬೇಕು ಎಂಬ ಆಯ್ಕೆಗೆ ಸಾಂವಿಧಾನಿಕ ರಕ್ಷಣೆಯನ್ನು ನೀಡುತ್ತದೆ. ಹಾಗಾಗಿ ಯಾರೊಂದಿಗೆ ಬಸ್ಸಿನಲ್ಲಿ ಕುಳಿತುಕೊಳ್ಳಬೇಕು, ಅಥವಾ ಯಾರೊಂದಿಗೆ ಊಟಕ್ಕೆ ಹೋಗಬೇಕು ಎಂಬಂತಹ ನಿತ್ಯವೂ ಜನರು ಮಾಡುವ ಆಯ್ಕೆಗಳು ಖಾಸಗಿ ನಿರ್ಧಾರಗಳ ವ್ಯಾಪ್ತಿಯಲ್ಲಿ ಬರುತ್ತದೆ. ಆದ್ದರಿಂದ ನಿತ್ಯದ ಬದುಕನ್ನು ವ್ಯಕ್ತಿಗಳು ಹೇಗೆ ಬದುಕಬೇಕು ಎಂದು ಅಪ್ಪಣೆ ಕೊಡಿಸಲು ಯತ್ನಿಸುವುದು ವ್ಯಕ್ತಿಯ ಸ್ವಾತಂತ್ರ್ಯದ ಮೇಲಣ ಗಂಭೀರ ಅತಿಕ್ರಮಣ. ಹಾಗೆಯೇ, ಯಾರೊಂದಿಗೆ ಅನ್ಯೋನ್ಯ ಸಂಬಂಧ ಇರಿಸಿಕೊಳ್ಳಬೇಕು, ಹಾಗೆಯೇ ಯಾರನ್ನು ಮದುವೆಯಾಗಬೇಕು ಎಂಬ ಆಯ್ಕೆಗಳು ಖಾಸಗಿ ನಿರ್ಧಾರ ಕೈಗೊಳ್ಳುವಿಕೆಯ ವಲಯದ ಭಾಗವಾಗಿದೆ. ಜಾತಿ ಮತ್ತು ಸಮುದಾಯದ ನೀತಿಸಂಹಿತೆ ಏನೇ ಇರಲಿ, ಈ ಖಾಸಗಿ ಆಯ್ಕೆಗಳನ್ನು ಗೌರವಿಸುವ, ಭಾರತೀಯ ಸಾಂವಿಧಾನಿಕ ವಾಗ್ದಾನವು ವಿಶೇಷ ವಿವಾಹ ಅಧಿನಿಯಮದಲ್ಲಿ ಅತ್ಯುತ್ತಮವಾಗಿ ಬಿಂಬಿತವಾಗಿದೆ; ಪರಸ್ಪರ ಮದುವೆಯಾಗುವ, ಭಿನ್ನ ಮತಧರ್ಮಗಳಿಗೆ ಸೇರಿದ ಇಬ್ಬರು ಭಾರತೀಯರ ಹಕ್ಕನ್ನು ಅದು ಮಾನ್ಯಮಾಡುತ್ತದೆ.

ಈ ಸ್ವಾತಂತ್ರ್ಯವನ್ನು ರಕ್ಷಿಸುವ ಪ್ರಭುತ್ವದ ಕರ್ತವ್ಯವು, ಸೋದರತ್ವ ಪೀಠಿಕಾಭಾಗದ ವಾಗ್ದಾನದ ಮೂಲಕ ಇನ್ನಷ್ಟು ತೂಕ ಪಡೆದಿರುವ ಸಾಂವಿಧಾನಿಕ ನಿಗದಿಯಿಂದ ಕಡಿಮೆಯಾದುದೇನಲ್ಲ. ಮದುವೆಯಾಗುವ ಆಯ್ಕೆ ಅಥವಾ ಯಾವುದೇ ಮತಧರ್ಮ ಅಥವಾ ಜಾತಿಯ ಹಂಗಿಲ್ಲದೆ ಅನ್ಯೋನ್ಯ ಸಂಬಂಧಗಳನ್ನು ಹೊಂದುವ ಅಥವಾ ತಮ್ಮ ಆಯ್ಕೆಯ ಯಾರೊಂದಿಗೆ ಬೇಕಾದರೂ ಸಾಮಾಜಿಕವಾಗಿ ಸಂಬಂಧ ಇರಿಸಿಕೊಳ್ಳುವ ಖಾಸಗಿ ಆಯ್ಕೆಗಳ ಸ್ವಾತಂತ್ರ್ಯವನ್ನು ಚಲಾಯಿಸುವುದು ಇಂಡಿಯಾದ ನಾನಾ ಸಮುದಾಯಗಳ ನಡುವೆ ಸಹೋದರತ್ವ ಸಂಬಂಧಗಳನ್ನು ಸಂವರ್ಧಿಸುವ ಒಂದು ಕ್ರಿಯಾಶೀಲ ವಿಧಾನ.

## ೨. ಅಭಿವ್ಯಕ್ತಿ ಮತ್ತು ಸಭೆಸೇರುವ ಸ್ವಾತಂತ್ರ್ಯದ ಹಕ್ಕು [ವಿಧಿ ೧೯(೧)(ಎ) ಮತ್ತು ೧೯ (೧)(ಬಿ)]

ವಿಧಿ ೧೯(೧)(ಎ) ಯ ಅಡಿಯ ಅಭಿವ್ಯಕ್ತಿ ಸ್ವಾತಂತ್ರ್ಯದಲ್ಲಿ ಮಾತು, ನಡತೆ, ಉಡುಪು ಅಥವಾ ದೈಹಿಕ ಗುಣಲಕ್ಷಣಗಳ ಮೂಲಕ ಅಸ್ಮಿತೆಯನ್ನು ಅಥವಾ ವ್ಯಕ್ತಿತನವನ್ನು ಅಭಿವ್ಯಕ್ತಿಸುವ ಹಕ್ಕು ಸೇರಿದೆ. ಏನನ್ನು ಉಡಬೇಕು ಎಂದು ಮಹಿಳೆಯರಿಗೆ ಬಲವಂತವಾಗಿ ನಿರ್ದೇಶನ ನೀಡುವ ಯಾವುದೇ ತೆರನ ಯತ್ನ ಅಥವಾ ಮಧ್ಯಪ್ರವೇಶವು 'ನಾವು ನಾವಾಗಿರುವ' ವ್ಯಕ್ತಿಗತ ಸ್ವಾತಂತ್ರ್ಯದ ಕೇಂದ್ರ ಭಾಗದ ಮೇಲೆಯೇ ನಡೆಸುವ ಅತಿಕ್ರಮಣವೆನಿಸುತ್ತದೆ.

ಶಸ್ತ್ರಾಸ್ತ್ರ ರಹಿತರಾಗಿ, ಶಾಂತಿಯುತವಾಗಿ ಸಭೆಸೇರುವ ಹಕ್ಕು ವಿಧಿ.೧೯(೧)(ಬಿ). ಮನರಂಜನೆಯ ಉದ್ದೇಶದಿಂದ, ಲಿಂಗ ಮತ್ತು ಮತಧರ್ಮದ ಗಡಿಗಳನ್ನು ಮೀರಿ ಒಂದೆಡೆ ಸೇರುವುದಕ್ಕಿಂತ ಹೆಚ್ಚಿನದೇನೂ ಅಲ್ಲದ ಉದ್ದೇಶವನ್ನು ಹೊಂದಿರುವ, ಖಾಸಗಿ ಸಭೆಗಳಿಗೂ ಈ ಸಾಂವಿಧಾನಿಕ ಸ್ವಾತಂತ್ರ್ಯವನ್ನು ಉಲ್ಲೇಖಿಸಬೇಕಾಗಿ ಬಂದಿರುವುದು ದುರಂತದ ಸಂಗತಿಯೇ ಸರಿ. ಸಹಜವಾಗಿಯೇ ಶಾಂತಿಯುತ ವಿರಾಮವೇಳೆಯ ಚಟುವಟಿಕೆಗಳ

ಶೀರ್ಷಿಕೆಯ ಅಡಿಯಲ್ಲಿ ಬರುವಂಥ ಸಂಗತಿಗಳೂ ದಾಳಿಗೆ ಒಳಪಟ್ಟಾಗ, ವಿರಾಮವೇಳೆಯ ಚಟುವಟಿಕೆಗಳಲ್ಲಿ ಭಾಗವಹಿಸುವ ಹಕ್ಕು ಮಾತ್ರ ಗಂಡಾಂತರದಲ್ಲಿರುವುದಲ್ಲ. ಇನ್ನೂ ಮುಖ್ಯವಾಗಿ ಶಸ್ತ್ರಾಸ್ತ್ರ ರಹಿತವಾಗಿ ಶಾಂತಿಯುತವಾಗಿ ಸಭೆಸೇರುವ ಸಾಂವಿಧಾನಿಕ ಹಕ್ಕು ಕೂಡಾ ಗಂಡಾಂತರದಲ್ಲಿದೆ ಎನ್ನುವುದನ್ನು ಅರ್ಥಮಾಡಿಕೊಳ್ಳುವುದು ಮುಖ್ಯ.

ಪ್ರಭುತ್ವದ ನಿಷ್ಕ್ರಿಯತೆಯ ಸಮ್ಮುಖದಲ್ಲಿ, ಹಿಂಸಾತ್ಮಕ ಕಾವಲುಗಾರಿಕೆ ಕೃತ್ಯಗಳ ಮೂಲಕ ವಿಧಿ ೧೯ ರ ಅಡಿಯ ಈ ಎರಡು ಸ್ವಾತಂತ್ರ್ಯಗಳ ಮೇಲೆ ನಡೆಯುವ ಅತಿಕ್ರಮಣವು, ನಿಜವಾಗಿಯೂ ಭಾರತೀಯ ಸಂವಿಧಾನವು ಎಲ್ಲ ಪ್ರಜೆಗಳಿಗೆ ಒದಗಿಸಿರುವ ಈ ಹಕ್ಕುಗಳ ಖಾತರಿಯ ಮೇಲಣ ದಾಳಿಯಾಗಿದೆ.

### ೩. ಸಮಾನತೆ ಮತ್ತು ತಾರತಮ್ಯರಹಿತತೆಯ ಹಕ್ಕು (ವಿಧಿ ೧೪ ಮತ್ತು ವಿಧಿ ೧೫)

ಮತಧರ್ಮ ಅಥವಾ ಲಿಂಗತ್ವದ ಏಕೈಕ ಆಧಾರದಲ್ಲಿ ಯಾರನ್ನೂ ಹಿಂಸಾಚಾರಕ್ಕೆ ಈಡುಮಾಡುವಂತಿಲ್ಲ, ಒಳಪಡಿಸುವಂತಿಲ್ಲ ಎನ್ನುವುದು ಸಮಾನತೆ ಮತ್ತು ತಾರತಮ್ಯರಹಿತತೆಯ ಹಕ್ಕಿನ ಕನಿಷ್ಠಪಕ್ಷ ಆಶಯ. ಅಷ್ಟೇ ಸಮನಾಗಿ ಅದರ ಇನ್ನೊಂದು ಆಶಯವೆಂದರೆ, ಬಸ್‌ಗಳು, ಕಾಲೇಜುಗಳು, ಉಪಾಹಾರ ಗೃಹಗಳು ಅಥವಾ ಪಬ್‌ಗಳಂತಹ ಸಾರ್ವಜನಿಕ ಸೌಲಭ್ಯಗಳನ್ನು ಪಡೆಯುವ ವಿಚಾರದಲ್ಲಿ ಅವರನ್ನು ಗುರಿಮಾಡಲು ವ್ಯಕ್ತಿಯ ಮತಧರ್ಮ ಅಥವಾ ಲಿಂಗತ್ವವು ಆಧಾರವಾಗುವುದಿಲ್ಲ. ಸಾರ್ವಜನಿಕ ಜಾಗವೇ ಬೆದರಿಕೆಯ ತಾಣವಾದಾಗ, ವ್ಯಕ್ತಿಗಳನ್ನು ಹಿಂಸಾಚಾರಕ್ಕೆ ಒಳಪಡಿಸಲು ಅಥವಾ ಹಲ್ಲೆಗೊಳಗಾಗುವ ನಿರಂತರ ಭಯಕ್ಕೆ ಒಳಪಡಿಸಲು ಎಲ್ಲಿ ಮತಧಾರ್ಮಿಕ ಅಸ್ಮಿತೆ ಮತ್ತು ಲಿಂಗತ್ವವೇ ಆಧಾರವಾಗುತ್ತದೆಯೋ ಅಲ್ಲಿ ಈ ಖಾತರಿಯ ಮೂಲಭೂತ ಸ್ವರೂಪವೇ ಸಂಪೂರ್ಣವಾಗಿ ಉಲ್ಲಂಘನೆಯಾಗುತ್ತದೆ.

### ೪. ಆತ್ಮಸಾಕ್ಷಿಯ ಸ್ವಾತಂತ್ರ್ಯದ ಹಕ್ಕು ಮತ್ತು ಮತಧರ್ಮವನ್ನು ಒಪ್ಪಿಕೊಳ್ಳುವ, ಆಚರಿಸುವ ಮತ್ತು ಪ್ರಚುರಪಡಿಸುವ ಸ್ವಾತಂತ್ರ್ಯದ ಹಕ್ಕು (ವಿಧಿ ೨೫)

ಮತಧರ್ಮವನ್ನು ಆಚರಿಸುವ ನಮ್ಮ ಹಕ್ಕಿನಲ್ಲಿ, ನಮ್ಮ ಮತಧಾರ್ಮಿಕ ವಿಶ್ವದೃಷ್ಟಿ ಮತ್ತು ನಂಬಿಕೆಯ ಅತ್ಯಗತ್ಯ ಭಾಗವಾಗಿ ನಾವು ನೋಡುವ ಬಟ್ಟೆಗಳನ್ನು ಧರಿಸುವ ಹಕ್ಕು ಒಳಗೊಂಡಿದೆ. ಮುಸ್ಲಿಮ್ ಆಗಿರಲು ಬುರ್ಖಾ ಧರಿಸುವುದು ಎಷ್ಟರಮಟ್ಟಿಗೆ ಅಗತ್ಯ ಎಂಬ ವಿಚಾರದಲ್ಲಿ ಆಂತರಿಕ ಚರ್ಚೆ ಇದ್ದೇ ಇದೆಯಾದರೂ, ಬುರ್ಖಾ ತೊಟ್ಟ ಮಹಿಳೆಯರು ಶೈಕ್ಷಣಿಕ ಸಂಸ್ಥೆಗಳನ್ನು ಪ್ರವೇಶಿಸದಂತೆ ಬಾಹ್ಯ ಶಕ್ತಿಗಳು ವಿಧಿಸುವ ನಿರ್ಬಂಧವು ವಿಧಿ ೨೫ರ ಅಡಿಯಲ್ಲಿ – ಅಂದರೆ ಮತಧರ್ಮ ಆಚರಿಸುವ ಹಕ್ಕು – ಸಾಂವಿಧಾನಿಕ ಖಾತರಿಯ ಮೇಲೆ ನಡೆಸುವ ಗಂಭೀರ ಅತಿಕ್ರಮಣವೆನಿಸಿಕೊಳ್ಳುತ್ತದೆ. ಚರ್ಚ್‌ಗಳ ಮೇಲಿನ ದಾಳಿ, ಹಾಗೆಯೇ ಖಾಸಗಿ ಸ್ಥಳದಲ್ಲಿ ಪ್ರಾರ್ಥನೆ ಸಲ್ಲಿಸುವ ಕ್ರೈಸ್ತರ ಮೇಲೆಯೂ ನಡೆಸುವ ದಾಳಿಯು ವಿಧಿ ೨೫ ರ ಉಲ್ಲಂಘನೆ ಎನಿಸಿಕೊಳ್ಳುತ್ತದೆ.

ಉಲ್ಲಂಘನೆಯಾಗುತ್ತಿರುವ ಸಂಭಾವ್ಯ ಹಕ್ಕುಗಳ, ಈ ಹಿಂದೆ ಉಲ್ಲೇಖಿಸಿದ ಸಮೀಕ್ಷೆಯು, ಒಂದು ವಿದ್ಯಮಾನವಾಗಿ ಕೋಮು ಪೊಲೀಸ್‌ಗಿರಿಯು, ಯಾರೇ ವ್ಯಕ್ತಿಯ ಮೂಲಭೂತ ಹಕ್ಕುಗಳ ಉಲ್ಲಂಘನೆ ಮಾತ್ರವಲ್ಲ, ಬದಲಿಗೆ ವಾಸ್ತವದಲ್ಲಿ ಇಂದು ಇಂಡಿಯಾದ ಪ್ರಜೆ ಆಗಿರುವುದೆಂದರೆ ಏನು ಎಂಬ ಕೇಂದ್ರ ವಿಚಾರದ ಮೇಲೆಯೇ ನಡೆಸುವ ದಾಳಿಯಾಗಿದೆ ಎಂಬುದನ್ನು ನೆನಪಿಸುತ್ತದೆ. ತನ್ನ ಎಲ್ಲ ಪ್ರಜೆಗಳಿಗೂ ಹಕ್ಕುಗಳು ಮತ್ತು ಸ್ವಾತಂತ್ರ್ಯಗಳನ್ನು ಖಾತರಿಪಡಿಸುವ ಒಂದು ಸಾಂವಿಧಾನಿಕ ಪ್ರಜಾತಂತ್ರವಾಗಿ ಇಂಡಿಯಾದ ಚಿಂತನೆಯ ಮೇಲೆಯೇ ಅದೊಂದು ಯೋಜನಾಬದ್ಧ ದಾಳಿ. ಅದು ಇಂಡಿಯಾವನ್ನು ಪರಸ್ಪರ ಶತ್ರುಗಳೆಂದು ಮಾತ್ರ ಸಂಬಂಧಿಸಿಕೊಳ್ಳುವಂತೆ ಜನರನ್ನು ಬಲವಂತ ಪಡಿಸುವ, ಪರಸ್ಪರ ಕದನದಲ್ಲಿ ತೊಡಗಿರುವ ಜನತೆಯ ಮಟ್ಟಕ್ಕೆ ಕುಗ್ಗಿಸಲು ಯತ್ನಿಸುತ್ತದೆ. ಸುತ್ತ ಕೋಟೆ ಕಟ್ಟಿಕೊಂಡಿರುವ, ಪ್ರತ್ಯೇಕ ಮತ್ತು ಗಾಳಿಯೂ ನುಸಿಯದಂತೆ ಮಾಡಿರುವ ಬೆಸುಗೆಯ ರೀತಿಯ ಸಮುದಾಯಗಳ ಸರಣಿ ಎನಿಸಿಕೊಳ್ಳುವ ಇಂಡಿಯಾದ ಈ ಇಮೇಜನ್ನು ಪ್ರಶ್ನಿಸುವ – ಪ್ರೀತಿ ಮತ್ತು ವಾತ್ಸಲ್ಯದ ಅಥವಾ ನಮ್ಮವರೆನ್ನುವ ಭಾವನೆ ಮತ್ತು ಭ್ರಾತೃತ್ವದ ಕ್ರಿಯೆಗಳ ಮೂಲಕವಿರಬಹುದು – ಯಾವುದೇ ಯತ್ನವನ್ನು ಬೆದರಿಕೆ, ಹಿಂಸಾಚಾರ ಮತ್ತು ಬಲವಂತಗಳ ಮೂಲಕ ಉತ್ತರಿಸಲಾಗುತ್ತದೆ.

# ಸಾಂವಿಧಾನಿಕ ಸ್ವಾತಂತ್ರ್ಯಗಳ ಮೇಲಣ ನಿರಂತರ ಹಲ್ಲೆಗೆ ದಕ್ಷಿಣಕನ್ನಡವನ್ನು ಏಕೆ ಈಡುಮಾಡಲಾಗುತ್ತಿದೆ?

ಇಲ್ಲಿ ಯಾರೇ ಆದರೂ ತಮ್ಮಲ್ಲೇ ಕೇಳಿಕೊಳ್ಳುವ ಒಂದು ಮೂಲಭೂತ ಪ್ರಶ್ನೆಯೆಂದರೆ, ಮೇಲೆ ವಿವರಿಸಿದ ನಿರಂತರ ಹಲ್ಲೆಗಳು ಯಾಕೆ ಸಂಭವಿಸುತ್ತಿವೆ ಎನ್ನುವುದು. ಕೆಲವು ಅಂಶಗಳ ಸಂಯೋಗದಲ್ಲಿ ಇದಕ್ಕೆ ಉತ್ತರ ಇರಬಹುದು. ಅದರ ಪರಿಶುದ್ಧ ಮಟ್ಟದಲ್ಲಿ ಅಲ್ಪಸಂಖ್ಯಾತರನ್ನು ಗುರಿಯಾಗಿಸುವ ತರ್ಕ ಮತ್ತು ಉದ್ದೇಶಗಳು ಬಹುಸಂಖ್ಯಾತಾತ್ಮಕ ದೃಷ್ಟಿಕೋನದಿಂದ ಬರುತ್ತದೆ; ಅದು ಅಲ್ಪಸಂಖ್ಯಾತರನ್ನು ಭಾರತದ ಹೊರಗಿನವರು ಎಂದು ಪರಿಗಣಿಸುತ್ತದೆ ಮತ್ತು ಬಹಸಂಖ್ಯಾತರಿಗೂ 'ಸರಿಯಾದ ನಡೆವಳಿಕೆ' ಯನ್ನು ನಿಗದಿಪಡಿಸುವುದರಲ್ಲಿ ವಿಶ್ವಾಸ ಇರಿಸುತ್ತದೆ. ಹಿಂದುತ್ವದ ನೆರಳಿನಲ್ಲಿ ಆಶ್ರಯ ಪಡೆಯುವ ಕಾನೂನುಬಾಹಿರ ಕೃತ್ಯಗಳಲ್ಲಿ ತೊಡಗಿರುವ ದುಷ್ಕರ್ಮಿಗಳ ಮನೋಭಾವವೂ ಇದರೊಂದಿಗೆ ಸೇರಿಕೊಳ್ಳುತ್ತದೆ. ಅಂತಿಮವಾಗಿ ಪ್ರಭುತ್ವ ನೀಡುವ ರಕ್ಷಣೆಯ ಅಭಯ ಹೇಗೂ ಇದ್ದು, ಅದು ಈ ಸಿದ್ಧಾಂತ ಮತ್ತು ಅಪರಾಧತ್ವದ ಅಪಾಯಕಾರಿ ಮಿಶ್ರಣವನ್ನು ಬೆಳೆಯಲು, ಅರಳಿಕೊಳ್ಳಲು ಅನುವುಮಾಡಿಕೊಡುತ್ತದೆ.

ಅಲ್ಪಸಂಖ್ಯಾತ ಧಾರ್ಮಿಕ ಸಮುದಾಯಗಳ ವಿರುದ್ಧ ನಿರ್ದೇಶಿಸಲಾದ ಒಂದು ರೀತಿಯ ವೈರತ್ವವೇ ಇದರ ಹಿಂದಿನ ಆಳ ಅಭಿಪ್ರೇರಣೆಯಾಗಿದೆ. ಈ ಹಲ್ಲೆಗಳ ಹಿಂದಿನ ಸೈದ್ಧಾಂತಿಕ ಕಾರಣವನ್ನು ಅರ್ಥ ಮಾಡಿಕೊಳ್ಳ ಬೇಕಾದರೆ ನಾವು ಹಿಂದುತ್ವದ ಮೂಲ ಸಿದ್ಧಾಂತಿಗಳಾದ ಸಾವರ್ಕರ್ ಮತ್ತು ಗೋಲ್ವಾಲ್ಕರ್‌ರಲ್ಲಿಗೆ ಮರಳಿಹೋಗಬೇಕು. 'ಹಿಂದುತ್ವ ಎಂದರೇನು' ಎಂಬ ತನ್ನ ಪ್ರಬಂಧದಲ್ಲಿ ಸಾವರ್ಕರ್ ಹೀಗೆ ಘೋಷಿಸುತ್ತಾರೆ:

> ಯಾರು ಜನಾಂಗದಿಂದ, ರಕ್ತದಿಂದ, ಸಂಸ್ಕೃತಿಯಿಂದ, ರಾಷ್ಟ್ರೀಯತೆಯಿಂದ ಹಿಂದುತ್ವದ ಎಲ್ಲ ಆವಶ್ಯಕ ಅಂಶಗಳನ್ನು ಹೊಂದಿರುತ್ತಾರೋ ಮತ್ತು ಯಾರನ್ನು ಹಿಂಸೆಯ ಕೈಗಳ ಮೂಲಕ ನಮ್ಮ ಹಿರೀಕರ ಮನೆಗಳಿಂದ ಬಲವಂತವಾಗಿ ಕಸಿದುಕೊಳ್ಳಲಾಗಿದೆಯೋ, ಅಂತಹ ನೀವು ನಮ್ಮ ಸಾಮಾನ್ಯ ತಾಯಿಗೆ ಸಂಪೂರ್ಣ ಹಾರ್ದಿಕ ಪ್ರೀತಿಯನ್ನು ನೀಡಬೇಕು ಮತ್ತು ಪಿತೃ ಭೂಮಿಯಾಗಿ ಮಾತ್ರವಲ್ಲ, ಪುಣ್ಯಭೂಮಿಯಾಗಿಯೂ ಮನ್ನಿಸಬೇಕು; ಆಗ ಹಿಂದೂ ತೆಕ್ಕೆಗೆ ಬರಲು ನಿಮಗೆ ಪೂರ್ಣ ಸ್ವಾಗತವಿದೆ.

## ಗೋಲ್ವಾಲ್ಕರ್ ಹೇಳಿಕೆ:

> ಜನಾಂಗ ಮತ್ತು ಅವರ ಸಂಸ್ಕೃತಿಯ ಪರಿಶುದ್ಧತೆಯನ್ನು ಕಾಯ್ದುಕೊಳ್ಳಲು, ಜರ್ಮನಿಯು ಸೆಮಿಟಿಕ್ ಜನಾಂಗಗಳನ್ನು, ಅರ್ಥಾತ್ ಯಹೂದಿಯರನ್ನು ದೇಶದಿಂದ ಹೊರಗೋಡಿಸಿ ಜಗತ್ತಿಗೆ ಆಘಾತ ನೀಡಿತು. ಗರಿಷ್ಠ ಮಟ್ಟದ ಜನಾಂಗೀಯ ಹೆಮ್ಮೆ ಇಲ್ಲಿ ವ್ಯಕ್ತಗೊಂಡಿದೆ. ಮೂಲದಲ್ಲಿಯೇ ವ್ಯತ್ಯಾಸಗಳನ್ನು ಹೊಂದಿರುವ ಜನಾಂಗಗಳು ಮತ್ತು ಸಂಸ್ಕೃತಿಗಳ ಪಾಲಿಗೆ ಒಂದು ಏಕೀಕೃತ ಇಡಿಯೊಳಗೆ ಐಕ್ಯಗೊಳ್ಳುವುದು ಎಷ್ಟು ಅಸಾಧ್ಯ ಎನ್ನುವುದನ್ನು ಜರ್ಮನಿಯು ತೋರಿಸಿಕೊಟ್ಟಿದೆ – ಇದು ಹಿಂದೂಸ್ತಾನದಲ್ಲಿರುವ ನಮಗೆ, ಕಲಿತುಕೊಳ್ಳಲು, ಲಾಭಪಡೆದುಕೊಳ್ಳಲು ಒಂದು ಉತ್ತಮ ಪಾಠವಾಗಿದೆ.

ಹಿಂದೂಸ್ಥಾನದಲ್ಲಿರುವ ವಿದೇಶೀ ಜನಾಂಗಗಳು ಒಂದೋ ಹಿಂದೂ ಸಂಸ್ಕೃತಿ ಮತ್ತು ಭಾಷೆಯನ್ನು ಅಳವಡಿಸಿಕೊಳ್ಳಬೇಕು, ಹಿಂದೂ ಧರ್ಮವನ್ನು ಆರಾಧಿಸಬೇಕು, ಹಿಂದೂ ಜನಾಂಗ ಮತ್ತು ಸಂಸ್ಕೃತಿಯ

ವೈಭವೀಕರಣವನ್ನಲ್ಲದೆ ಇನ್ನಾವುದೇ ಚಿಂತನೆಗಳಿಗೆ ಮಣೆಹಾಕಕೂಡದು [..] ಅಥವಾ ಸಂಪೂರ್ಣವಾಗಿ ಹಿಂದೂ ರಾಷ್ಟ್ರಕ್ಕೆ ಗುಲಾಮರಾಗಿ ಯಾವುದಕ್ಕೂ ಕೇಳಿಕೆ ಮಂಡಿಸದೆ, ಯಾವುದೇ ವಿಶೇಷ ಸವಲತ್ತುಗಳಿಗೆ ಅರ್ಹವಾಗದೆ, ಯಾವುದೇ ಆದ್ಯತಾ ನಡೆಸಿಕೊಳ್ಳುವಿಕೆಗಳು (ನಾಗರಿಕಹಕ್ಕುಗಳು ಕೂಡಾ) ಇಲ್ಲದೆ ದೇಶದಲ್ಲಿರಬಹುದು.

ಗೋಲ್ವಾಲ್ಕರ್ ತನ್ನ ಪುಸ್ತಕ 'ಬಂಚ್ ಆಫ್ ಥಾಟ್ಸ್' ನಲ್ಲಿ 'ಇಂಟರ್ನಲ್ ಎನಿಮೀಸ್' ಶೀರ್ಷಿಕೆಯುಳ್ಳ ಅಧ್ಯಾಯದಲ್ಲಿ ನಿರ್ದಿಷ್ಟವಾಗಿ ಮುಸ್ಲಿಮರು, ಕ್ರೈಸ್ತರು ಮತ್ತು ಕಮ್ಯೂನಿಸ್ಟರನ್ನು ಆಂತರಿಕ ಶತ್ರುಗಳೆಂದು ಕರೆಯುತ್ತಾರೆ. 'ಎಲ್ಲೋ ಒಂದು ಮಸೀದಿ ಅಥವಾ ಒಂದು ಮುಸ್ಲಿಂ ಮೊಹಲ್ಲಾ ಇರಲಿ, ಅದು ತಮ್ಮ ಸ್ವತಂತ್ರ ಭೂಭಾಗ ಎಂದು ಮುಸ್ಲಿಮರು ಅಂದುಕೊಳ್ಳುತ್ತಾರೆ' ಎಂದು ಹೇಳುತ್ತಾ, ಮುಸ್ಲಿಮರ ಪೌರತ್ವವನ್ನು ಮತ್ತೆ ಮತ್ತೆ ಪ್ರಶ್ನಿಸುತ್ತಾರೆ. ಕ್ರೈಸ್ತರ ವಿಷಯದಲ್ಲಿಯೂ ಅವರ ನಿಷ್ಠೆಯನ್ನು ಪ್ರಶ್ನಿಸುತ್ತಾರೆ ಮತ್ತು ಕ್ರೈಸ್ತಮತವನ್ನು ಪಸರಿಸುವ ಅಂತಾರಾಷ್ಟ್ರೀಯ ಚಳುವಳಿಯ ಏಜಂಟ್‌ಗಳು ಎಂದು ಅವರನ್ನು ದೂರುತ್ತಾರೆ.

ಈ ಎರಡು ಹಿಂದುತ್ವ ಸಿದ್ಧಾಂತಿಗಳ ಕೃತಿಗಳನ್ನು ಪರಾಂಬರಿಸಿದಾಗ ಸ್ಪಷ್ಟವಾಗುವ ಸಂಗತಿಯೆಂದರೆ, ಕ್ರೈಸ್ತರು ಮತ್ತು ಮುಸ್ಲಿಮರ ಪುಣ್ಯಭೂಮಿಗಳು ದೇಶದ ಹೊರಗಿರುವುದರಿಂದ ಅವರು ಹೊರಗಿನವರು ಎಂಬ ಭಾವನೆಯನ್ನು ಅವರು ಹರಡಿದರು. ಹಿಂದೂಗಳು ಮಾತ್ರ ಇಂಡಿಯಾದ ನಿಜವಾದ ಪ್ರಜೆಗಳು. ಯಾಕೆಂದರೆ ಅವರ ಪಿತೃಭೂಮಿ ಮತ್ತು ಮಾತೃಭೂಮಿ ಎರಡೂ ಇಂಡಿಯಾದಲ್ಲಿಯೇ ಇದೆ. ಈ ಎರಡೂ ಸಮುದಾಯಗಳು ಹೊರಗಿನವರಾಗಿರುವುದರಿಂದ ಅವರು ಯಾವುದೇ ಹಕ್ಕಗಳನ್ನು ಪಡೆಯಲು ಅರ್ಹರಲ್ಲ ಮತ್ತು ಅವರನ್ನು ಎರಡನೆಯ ದರ್ಜೆಯ ಪ್ರಜೆಗಳನ್ನಾಗಿ ನಡೆಸಿಕೊಳ್ಳಬೇಕು.

ಹಿಂದುತ್ವ ಸಿದ್ಧಾಂತವು ಕೇವಲ ಅಲ್ಪಸಂಖ್ಯಾತರನ್ನು ನಿಯಂತ್ರಿಸಲು ಮಾತ್ರವೇ ಪರಿಣಾಮಕಾರಿಯಾಗಿದೆ ಎಂಬ ಭಾವನೆ ಕೂಡ ಸಮಂಜಸವಲ್ಲ. ಹಿಂದುತ್ವದ ಗುರಿ, ಅಲ್ಪಸಂಖ್ಯಾತರ ಮೇಲಿನ ಹಲ್ಲೆಗಳನ್ನು ಮೀರಿದ್ದಾಗಿದ್ದು, ಬಹುಸಂಖ್ಯಾತರ ಮೇಲಿನ 'ಹಕ್ಕು ವ್ಯವಸ್ಥೆ'ಯನ್ನು ಪ್ರತಿಪಾದಿಸುತ್ತದೆ. ಅಂದರೆ, ಹೆಣ್ಣು ಮತ್ತು ಗಂಡು ಒಟ್ಟಾಗಿ ಸಂಧಿಸುವ, ಹೆಣ್ಣು ಮದ್ಯ ಸೇವಿಸುವ ಅಥವಾ ಅಂತಹ ಸ್ಥಳಗಳಾದ ಪಬ್ ಮತ್ತು ಬರ್ತ್‌ಡೇ ಪಾರ್ಟಿಗಳ ಮೇಲೆ ದಾಳಿ ನಡೆಸುವುದು ತಮ್ಮ ಒಂದು ಕಾನೂನಾತ್ಮಕ ಹಕ್ಕು ಎಂಬಂತೆ ಪರಿಭಾವಿಸುವುದೇ ಆಗಿದೆ. ಹಾಗಾಗಿ ಯಾವುದು ತಮ್ಮ ಕಾನೂನಾತ್ಮಕ ಹಕ್ಕು ಎಂದು ಹಿಂದುತ್ವ ಸಿದ್ಧಾಂತ ಪರಿಭಾವಿಸಿ ಮತ್ತೊಂದು ಸಮುದಾಯದ ಮೇಲೆರಗುತ್ತಿದೆಯೋ ಆ ಸಮುದಾಯ ಕೇವಲ ಹಿಂದುಯೇತರ ಸಮುದಾಯ ಮಾತ್ರವಲ್ಲ. ಹಿಂದು ಸಮುದಾಯದ ಹೆಣ್ಣು, ಪ್ರಶ್ನಿಸುವ ದಲಿತ ಕೂಡ ದಾಳಿಗೆ ಅರ್ಹರೇ ಆಗಿಬಿಟ್ಟಿದ್ದಾರೆ. ಒಂದು ವ್ಯಕ್ತಿಯಾಗಿ ಸ್ವ-ಇಚ್ಛೆಯ ನಡತೆ, ಅಭಿವ್ಯಕ್ತಿ ಅಥವಾ ತನ್ನ ಹಕ್ಕುಗಳಂತೆ ನಡೆದುಕೊಳ್ಳುವ ಹೆಣ್ಣು, ಹಿಂದು ಶ್ರೇಣೀಕೃತ ವ್ಯವಸ್ಥೆಯನ್ನು ಪ್ರಶ್ನಿಸುವ ದಲಿತ, ತನ್ನ ವಿಭಿನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವ ಕಮ್ಯೂನಿಸ್ಟ್ ಅಥವಾ 'ಕಲ್ಪಿತ ಜಾತ್ಯಾತೀತವಾದಿ'ಗಳು ಹಿಂದುತ್ವದ ದಾಳಿಗೆ ಅರ್ಹರಾಗಿದ್ದಾರೆ.

ಈ ಸಿದ್ಧಾಂತವು ಒಂದು ವ್ಯವಸ್ಥಿತ ಪರಿಣಾಮಕಾರಿ ಸಾಂಸ್ಥಿಕ ರೂಪದಲ್ಲಿಲ್ಲದಿದ್ದರೆ, ಈ ಇಡೀ ಸಿದ್ಧಾಂತವೇ ದುರ್ಬಲವಾಗಿರುತ್ತಿತ್ತು. ಈ ಸಿದ್ಧಾಂತದ ಮಾತೃಸಂಸ್ಥೆಯಾದ 'ರಾಷ್ಟ್ರೀಯ ಸ್ವಯಂ ಸೇವಕ ಸಂಸ್ಥೆ'(ಆರ್‌ಎಸ್‌ಎಸ್), ೧೯೨೦ರಲ್ಲಿ ಆರಂಭವಾದಾಗಿನಿಂದ ತನ್ನ ಮೂಲ ಪ್ರತಿಪಾದಕರಾದ ಸಾವರ್‌ಕರ್ ಮತ್ತು ಗೋಲ್ವಾಲ್ಕರ್‌ರ ಅಣತಿಯಂತೆ ತನ್ನ ಆಳ-ಹರಹುವನ್ನು ವಿಸ್ತರಿಕೊಳ್ಳುತ್ತಲೇ ಬಂದಿದೆ. ಬಹುಮುಖ್ಯವಾಗಿ ಆರ್‌ಎಸ್‌ಎಸ್‌ನ ಅಂಗಸಂಸ್ಥೆಗಳಾದ ವಿಎಚ್‌ಪಿ, ಬಜರಂಗದಳ ಅಥವಾ ಹಿಂದು ಜಾಗರಣಾ ವೇದಿಕೆಗಳು, ಎಲ್ಲಾ ರೀತಿಯ ಹಿಂಸಾತ್ಮಕ ಪ್ರಕ್ರಿಯೆಗಳ ಮೂಲಕ ಹಿಂದುತ್ವ ಸಿದ್ಧಾಂತವನ್ನು ಅನುಷ್ಠಾನಕ್ಕೆ ತರುವ ಆದ್ಯ ಸಂಸ್ಥೆಗಳಾಗಿಬಿಟ್ಟಿವೆ.

ಬಾಬ್ರಿ ಮಸೀದಿ ಧ್ವಂಸದ ತನಿಖೆಗೆ ನೇಮಿಸಲ್ಪಟ್ಟ, ಲಿಬೆರ್ಹಾನ್ ಸಮಿತಿಯು ಮೇಲೆ ಹೆಸರಿಸಿದ ಸಂಸ್ಥೆಗಳ ಕೈವಾಡವನ್ನು ವಿಷದಪಡಿಸುತ್ತದೆ. ನ್ಯಾಯಮೂರ್ತಿ ಲಿಬೆರ್ಹಾನ್‌ರು ಹೇಳುವಂತೆ:

> ಆರ್‌ಎಸ್‌ಎಸ್, ಶಿವಸೇನೆ, ಬಜರಂಗದಳ, ಬಿಜೆಪಿ ಮುಂತಾದ ಸಂಸ್ಥೆಗಳ, ಮತ್ತವುಗಳ ಅವಿನಾಭಾವ ಸಂಬಂಧಗಳನ್ನು ವಿವರಣಾತ್ಮಕವಾಗಿ ನನ್ನ ವರದಿಯಲ್ಲಿ ವಿವರಿಸಲಾಗಿದೆ...ಈ ಎಲ್ಲಾ ಸಂಸ್ಥೆಗಳು ಒಟ್ಟಾರೆಯಾಗಿ ಅಪರಿಮಿತ ಮತ್ತು ಭಯಾನಕ ಶಕ್ತಿ, ಚಾಣಾಕ್ಷ ಬುದ್ಧಿಯಿಂದ ಕೂಡಿದ್ದು, ಜನತೆಯನ್ನು ಮಂತ್ರಮುಗ್ಧರನ್ನಾಗಿಸುವ ಮತ್ತು ಯಾವಾಗ ಬೇಕಾದರೂ ಗುಂಪೊಂದರ ಸಾಮರ್ಥ್ಯವನ್ನೇ ಅಡಗಿಸುವಷ್ಟು ಬಲಿಷ್ಠವಾಗಿವೆ. ಆರ್‌ಎಸ್‌ಎಸ್, ವಿಎಚ್‌ಪಿ, ಬಜರಂಗದಳ ಮತ್ತು ನಿರಂತರವಾಗಿ ಮಾರ್ಪಾಡಾಗುವ ಸಂಸ್ಥೆಗಳಾದ 'ಹಿಂದು ಮಹಾಸಭಾ', 'ಜನಸಂಘ'ದಂತವುಗಳು ನೀಡಿರುವ ನಾಯಕತ್ವ, ತನ್ನ ಮೂಲ ಸಿದ್ಧಾಂತ ಪ್ರತಿಪಾದಕರ ಅನುಮಾನಗಳನ್ನು ಸದಾ ಅನುಷ್ಠಾನಕ್ಕೆ ತರುವಂತಹ ಲಜ್ಜೆಗೆಟ್ಟ ಕೃತ್ಯಗಳಲ್ಲಿ ಭಾಗಿಯಾಗಿವೆ. ಈ ಕೃತ್ಯಗಳ ಅಂತಿಮ ಪರಿಣಾಮ ಮೂಲ ಗುಂಪಿನ ಚಿಂತಕರಿಗೆ ಬಹುಮುಖ್ಯವಾಗಿರುತ್ತದೆ.

ಅಲ್ಲದೇ ವಿವಾದಾತ್ಮಕ ಕಟ್ಟಡದ ಧ್ವಂಸ, ಇವರುಗಳು ಜಾತ್ಯಾತೀತತೆ ಮತ್ತು ಬಹುಸಂಸ್ಕೃತಿಯ ಸಮಾಜಗಳ ಮೇಲೆ ನಡೆಸುತ್ತಿರುವ ಆಕ್ರಮಣಗಳ ಒಂದಂಶದ ಗೆಲುವಿನ ಕದನವಷ್ಟೇ...(ಪುಟ: ೧೬೦.೧೦).

ಹಿಂದುತ್ವದ ತರ್ಕ ಮತ್ತು ಹಿಂಸಾತ್ಮಕ ಕೃತ್ಯಗಳು ಮತ್ತದರ ಸಾಂಸ್ಥಿಕ ಅಭಿವ್ಯಕ್ತಿ ಬಹಿರಂಗವಾದ ಚೌಕಟ್ಟಿನಲ್ಲಿ ಇಲ್ಲದಿರುವುದು ಕೂಡ ನಮ್ಮ ಸ್ವಯಂ ಗ್ರಹಿಕೆಗೆ ಮನವರಿಕೆಯಾಗಿದೆ. ಬರ್ತ್‌ಡೇ ಹಲ್ಲೆಯ ಘಟನೆಯಲ್ಲಿ ಯುವತಿಯರ ಮೇಲಿನ ಲೈಂಗಿಕ ದೌರ್ಜನ್ಯ ಮತ್ತು ಯುವಕರಿಂದ ಚಿನ್ನವನ್ನು ದೋಚಿದಂತಹ ಕೃತ್ಯಗಳನ್ನು ಹಿಂದುತ್ವವೂ ಕೂಡ ಸ್ಪಷ್ಟವಾಗಿ ಪೋಷಿಸುವುದಿಲ್ಲ. ಕಳ್ಳತನ ಮತ್ತು ಲೈಂಗಿಕ ಸಂತೃಪ್ತಿಯೂ ಕೂಡ(ಬರ್ತ್‌ಡೇ ಪಾರ್ಟಿಯ ಆಕ್ರಮಣ)ಅವಶ್ಯಕವಾದ ಕಾರಣಗಳಾಗಿದ್ದರೂ, ಒಟ್ಟಾರೆ ಹಲ್ಲೆಯ ಕಾರಣವನ್ನು ಸ್ಪಷ್ಟವಾಗಿ ವಿವರಿಸುವುದಿಲ್ಲ. ಆದ್ದರಿಂದ ಯಾರಿಗಾದರೂ ವೇದ್ಯವಾಗುವಂತಹ ಅಂಶವೇನೆಂದರೆ, ಹಿಂದುತ್ವದ ನೆರಳಿನಲ್ಲಿ ಪೋಷಿಸಲ್ಪಟ್ಟ ವಿಕ್ಷಿಪ್ತ ಪಾತಕ ಮನಸ್ಥಿತಿಯ ಅಮಾನುಷ ವರ್ತನೆಗಳ ಮತ್ತದರ ಸಹಮತದ ಬೆಳವಣಿಗೆ. ಕಣ್ಣಿಗೆ ಕಾಣುವಂತಹ ಸತ್ಯವೇನೆಂದರೆ, ಹಿಂದುತ್ವ ರಾಜಕೀಯದ ಅನುಷ್ಠಾನ, ಹಿಂದುತ್ವ ವ್ಯವಸ್ಥೆಯ ಉಚ್ಚ ಮನಸ್ಸುಗಳಿಂದ ಪೋಷಿಸಲಾದ ನೀಚ ವ್ಯಕ್ತಿಗಳಿಂದ ಮಾತ್ರವೇ ಸಾಧ್ಯವಾಗುವಂತಹುದೆಂಬ ಅಂಶ. ಪಾತಕ ಕೃತ್ಯ ಮತ್ತು ಹಿಂಸೆಯು ಹಿಂದೂ ಸಮಷ್ಠಿ ಸೇವೆಗೆ ಸಹಕರಿಸುವುದರಿಂದ ಇವೆರಡೂ ಅಸಹನೀಯವೇನಲ್ಲವೆಂಬುದೇ ಹಿಂದುತ್ವದ ರಾಜನೀತಿ. ಈ ತರ್ಕದೃಷ್ಟಿಯಿಂದಲೇ ಸಂಘ ಪರಿವಾರದ ಎಲ್ಲಾ ಸಂಸ್ಥೆಗಳ ದೌರ್ಜನ್ಯ, ವಿಶೇಷವಾಗಿ ಹಿಂದು ಜಾಗರಣಾ ವೇದಿಕೆಯ ಬರ್ತ್‌ಡೇ ಪಾರ್ಟಿಯ ಮೇಲಿನ ದಾಳಿ ಬೆಂಬಲಿತವಾಗಿರುವುದು.

ಕೊನೆಯದಾಗಿ, ಈ ಅಮಾನುಷ ನಿರ್ಬಂಧಕ ಸಿದ್ಧಾಂತ ಮತ್ತು ಶಿಕ್ಷಾರ್ಹ ವರ್ತನೆಗಳು ವೃದ್ಧಿಯಾಗುತ್ತಿರುವುದು ರಾಜ್ಯಂಗದ ನೇರ ಬೆಂಬಲವಿಲ್ಲದೇ ಇಲ್ಲದಿದ್ದರೂ, ಅದರ ಮೌನದಿಂದಲೇ. ಬಹುಸಂಸ್ಕೃತಿಯ ಈ ಸಮಾಜದಲ್ಲಿ ವಿಷ ಬಿತ್ತುವ ಕಾರ್ಯ ಎಗ್ಗಿಲ್ಲದೇ ನಡೆಯುತ್ತಿರುವುದು, ಕೋಮು ದೌರ್ಜನ್ಯದಂತಹ ಕೃತ್ಯಗಳಲ್ಲಿ ಪೋಲಿಸರ ಉಪೇಕ್ಷೆ ಮತ್ತು ಸಂಘ ಪರಿವಾರದ ವಿರುದ್ಧ ಪರಿಣಾಮಕಾರಿ ಕ್ರಮವನ್ನು ತೆಗೆದುಕೊಳ್ಳಲು ನಿರಾಕರಿಸುವಂತಹ ವರ್ತನೆಯಿಂದ ಎಂಬುದು ಸ್ಪಷ್ಟವಾಗಿ ಗೋಚರಿಸುವ ಸತ್ಯವಾಗಿದೆ. ಪೋಲಿಸರ ಈ ಉಪೇಕ್ಷೆಯೇ ದಕ್ಷಿಣ ಕನ್ನಡ ಜಿಲ್ಲೆಯ ಆಡಳಿತವನ್ನೇ ತನ್ನ ಪರಧಿಯಲ್ಲಿಟ್ಟುಕೊಳ್ಳಲು ಹಿಂದುತ್ವದ ಶಕ್ತಿಗಳಿಗೆ ಅಧಿಕಾರ ನೀಡಿದೆ.

# ಬೇಡಿಕೆಗಳು

**ಅ) ರಾಜ್ಯ ಸರ್ಕಾರಕ್ಕೆ**

೧. ಮಂಗಳೂರು ಗ್ರಾಮೀಣ ಪೋಲಿಸ್ ಠಾಣೆಯಲ್ಲಿ ದಾಖಲಾಗಿರುವ ಹುಟ್ಟುಹಬ್ಬದ ಪಾರ್ಟಿಯ ಮೇಲಣ ದಾಳಿಯ ಎಫ್‌ಐಆರ್. ಸಂಖ್ಯೆ ೨೭೯/೦೨ ವಿಚಾರಣೆಯನ್ನು ಕೈಗೆತ್ತಿಕೊಂಡು ಸಾಧ್ಯವಾದಷ್ಟು ಶೀಘ್ರವಾಗಿ ಬಗಹರಿಸಬೇಕು.

೨. ದಕ್ಷಿಣ ಕನ್ನಡದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕುಸಿದಿರುವುದನ್ನು ಒಪ್ಪಿ, ಅಧೋಗತಿ ತಲುಪಿರುವ ಕಾನೂನನ್ನು ಬಲಪಡಿಸಬೇಕು.

೩. ಅಧಿಕೃತ ಕರ್ನಾಟಕ ಸರ್ಕಾರದ ಬದಲು ಪರ್ಯಾಯ ಆಡಳಿತ ಇಲ್ಲದಂತೆ ಎಚ್ಚರವಹಿಸಬೇಕು ಮತ್ತು ಮುಖ್ಯವಾಗಿ ಕೋಮು ಪೋಲಿಸ್‌ಗಿರಿ-ಕೋಮು ಹಿಂಸೆಯಲ್ಲಿ ತೊಡಗಿರುವ ಬಜರಂಗದಳ, ಹಿಂದು ಜಾಗರಣಾ ವೇದಿಕೆ, ಹಿಂದು ಜಾಗರಣಾ ಸಮಿತಿ, ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್, ಶ್ರೀರಾಮ ಸೇನಾ ಮತ್ತಿತರ ಕೋಮು ಸಂಘಟನೆಗಳ ವಿರುದ್ಧ ಇಂಡಿಯನ್ ಪೀನಲ್ ಕೋಡ್‌ನಂತೆ ಕ್ರಮ ಜರುಗಿಸಬೇಕು.

೪. ಮೇಲೆ ಹೆಸರಿಸಿದ ಅಥವಾ ಇನ್ನಾವುದೇ ಗುಂಪುಗಳು ದಕ್ಷಿಣ ಕನ್ನಡ ಜಿಲ್ಲೆಯ ಜನತೆಯ ಮೇಲೆ ತಮ್ಮ 'ನೈತಿಕ ನಿಯಮ'ವನ್ನು ಹೇರುವುದನ್ನು ತಪ್ಪಿಸಿ, ಸಂವಿಧಾನದ ಆಶಯಗಳನ್ನು ಕಾಪಾಡುವಂತೆ ಮಾಡಬೇಕು.

೫. ಕೋಮು ದೌರ್ಜನ್ಯಗಳನ್ನು ತಡೆಯಲು ಕೇಂದ್ರ ಸರ್ಕಾರದ ಗೃಹ ಖಾತೆ ಸಚಿವಾಲಯ ರೂಪಿಸಿರುವ 'ಕೋಮು ಸೌಹಾರ್ದತೆಯ ಮಾರ್ಗಸೂಚಿ'ಯಂತೆ ಹೊಸ ಮಾರ್ಗಸೂಚಿಯನ್ನು ರಚಿಸಬೇಕು.

**ರಾಜ್ಯದ ಮಾರ್ಗಸೂಚಿಯಲ್ಲಿ ಕನಿಷ್ಠ ಕೆಳಕಂಡ ಅಂಶಗಳಿರಬೇಕು:**

- ಯಾವೊಬ್ಬ ವ್ಯಕ್ತಿ ಅಥವಾ ಗುಂಪು, ನೈತಿಕ ನಿಯಮದ ಉಲ್ಲಂಘನೆ ಆರೋಪದಲ್ಲಿ ಮತ್ತೊಬ್ಬರ ಮೇಲೆ ದೌರ್ಜನ್ಯ ಎಸಗಿದರೆ ಅಥವಾ ಬಂಧಿಸಿದರೆ, ಅಂತಹವರನ್ನು ತಕ್ಷಣವೇ ಸಾರ್ವಜನಿಕ ಶಾಂತಿಯನ್ನು ಉಪೇಕ್ಷಿಸಿದಂತಾಗಿ, ಮರುಕ್ಷಣವೇ ಇಂಡಿಯನ್ ಪೀನಲ್ ಕೋಡ್‌ನ ಅಧಿನಿಯಮದಂತೆ ಬಂಧಿಸಬೇಕು.
- ಕೋಮು ಪೋಲಿಸ್‌ಗಿರಿ ಹೆಸರಿನಲ್ಲಿ ದೌರ್ಜನ್ಯವೆಸಗುವವರ ವಿರುದ್ಧ, ಅಪರಾಧ ಪ್ರಕರಣಗಳಾದ ಬೆದರಿಕೆ, ದುರುದೇಶಪೂರಿತ ಅಪರಾಧ, ಸಾಮಾನ್ಯ ದೌರ್ಜನ್ಯ ಮತ್ತು ಲೈಂಗಿಕ ದೌರ್ಜನ್ಯದಂತಹ ಪ್ರಕರಣಗಳಡಿ ಎಫ್‌ಐಆರ್ ದಾಖಲಿಸಿಕೊಳ್ಳುವಂತೆ ಸುತ್ತೋಲೆ ಹೊರಡಿಸಬೇಕು.

- ಜಿಲ್ಲೆಯಾದ್ಯಂತ ನಡೆಯುತ್ತಿರುವ ಕೋಮು ಸಂಬಂಧಿತ ಪ್ರಕರಣಗಳನ್ನು ಪರಿಶೀಲಿಸುವ ಸಮಿತಿಯೊಂದನ್ನು ಸ್ಥಾಪಿಸಿ, ಅಪರಾಧಿಗಳ ವಿರುದ್ಧ ಕ್ರಮ ಜರುಗಿಸುವಂತೆ ನೋಡಿಕೊಳ್ಳಬೇಕು.
- ಕೋಮು ಸೌಹಾರ್ದವನ್ನು ಕದಡುವ ಅಥವಾ ಮಹಿಳೆಯರ ಮೇಲೆ ಹಿಂಸೆಯನ್ನು ಪ್ರಚೋದಿಸುವ ಘೋಷಿತ ಗುರಿಗಳನ್ನು ಹೊಂದಿದ ಸಂಸ್ಥೆಗಳ ಚಟುವಟಿಕೆಗಳತ್ತ ನಿರಂತರವಾಗಿ ಎಚ್ಚರಿಕೆಯಿಂದ ಲಕ್ಷ್ಯವಿರಿಸುತ್ತಾ, ಅಗತ್ಯ ಬಿದ್ದಾಗ ಅವರ ಕಾರ್ಯಗಳನ್ನು ವಿಮರ್ಶಿಸಬೇಕು. ಅಲ್ಲದೇ ಅಂತಹ ಚಟುವಟಿಕೆಗಳನ್ನು ದಾಖಲಿಸಿಕೊಳ್ಳುತ್ತಿರಬೇಕು. ಕಾನೂನುಬಾಹಿರ ಚಟುವಟಿಕೆಯಲ್ಲಿ ಭಾಗಿಯಾದ ವ್ಯಕ್ತಿ–ಸಂಸ್ಥೆಗಳ ವಿರುದ್ಧ ಕಾನೂನಾತ್ಮಕ ಕ್ರಮವನ್ನು ಜರುಗಿಸಬೇಕು.
- ನಿರ್ದಿಷ್ಟವಾಗಿ ಹೇಳಬೇಕೆಂದರೆ, ಕಾನೂನನ್ನು ತಮ್ಮ ಕೈಗೆತ್ತಿಕೊಂಡು ಸ್ವಯಂಕೃತ್ಯದಲ್ಲಿ ತೊಡಗಿಕೊಂಡಿರುವ ಬಜರಂಗದಳ, ಶ್ರೀರಾಮ ಸೇನಾ ಮತ್ತು ಹಿಂದೂ ಜಾಗರಣಾ ವೇದಿಕೆಯಂತಹ ಸಂಸ್ಥೆಗಳ ಕಾರ್ಯಚಟುವಟಿಕೆಯನ್ನು ಸೂಕ್ಷ್ಮವಾಗಿ ಪರೀಕ್ಷಿಸಬೇಕು ಮತ್ತು ಭವಿಷ್ಯದ ದುಕೃತ್ಯಗಳನ್ನು ಗಂಭೀರವಾಗಿ ಪರಿಗಣಿಸುವುದಾಗಿ ಎಚ್ಚರಿಕೆಯನ್ನು ನೀಡಬೇಕು.
- ಜಿಲ್ಲಾ ಅಥವಾ ಪೋಲಿಸ್ ಠಾಣೆಯ ಹಂತದಲ್ಲಿ ನಿಯಮಿತ ಕಾಲದಲ್ಲಿ ಕೋಮು ಸಂಬಂಧಿತ ವಿಷಯಗಳ ಪರೀಕ್ಷೆ ನಡೆಯುತ್ತಿರಲೇಬೇಕು.
- ರಾಜ್ಯ ಸರ್ಕಾರವು, ಮೇಲೆ ಹೆಸರಿಸಿದಂತಹ ಸಂಸ್ಥೆಗಳ ಕೋಮು ಆಧಾರಿತ ಚಟುವಟಿಕೆಗಳ ಬಗ್ಗೆ ಮುನ್ನೆಚ್ಚರಿಕೆಯ ಕ್ರಮಗಳನ್ನು ಕೈಗೊಳ್ಳಲು ತನ್ನದೇ ಆದ ಸುದ್ದಿಸಂಗ್ರಹ ಜಾಲವನ್ನು ಸ್ಥಾಪಿಸಿಕೊಳ್ಳಬೇಕು.

## ಆ) ಜಿಲ್ಲಾಡಾಳಿತಕ್ಕೆ

೧. ದಕ್ಷಿಣ ಕನ್ನಡದಲ್ಲಿ ಕೋಮು ಸೌಹಾರ್ದತೆಯನ್ನು ಕದಡುವ ಎಲ್ಲ ಶಕ್ತಿಗಳ ವಿರುದ್ಧ ಪರಿಣಾಮಕಾರಿಯಾಗಿ ಕ್ರಮ ಜರುಗಿಸಬೇಕು.
೨. ನಿರ್ದಿಷ್ಟವಾಗಿ, ಈಗಾಗಲೇ ದುಷ್ಕೃತ್ಯವನ್ನು ಎಸಗಿರುವವರನ್ನು ಮತ್ತು ಸಾಂಸ್ಕೃತಿಕ ಪೋಲಿಸ್‌ಗಿರಿ ಹೆಸರಿನಲ್ಲಿ ಕಾನೂನು ಬಾಹಿರ ಕೃತ್ಯಗಳನ್ನು ಎಸಗುವುದಾಗಿ ಎಚ್ಚರಿಕೆಯನ್ನು ನೀಡಿರುವವರನ್ನೂ ಸೇರಿದಂತೆ ಕಠಿಣ ಕ್ರಮ ಜರುಗಿಸಿ ಸನ್ನಡತೆಯಿಂದ ನಡೆದುಕೊಳ್ಳುವಂತೆ ಮಾಡಬೇಕು.
೩. ಸಾಂಸ್ಕೃತಿಕ ಕಾವಲಿನ ಹೆಸರಿನಲ್ಲಿ ಪದೇ ಪದೇ ದುಷ್ಕೃತ್ಯವೆಸಗಿರುವವರನ್ನು ಮತ್ತೆಂದೂ ಪುನಾರಾವರ್ತಿಸದಂತೆ ಹುಟ್ಟಡಗಿಸಬೇಕು.
೪. 'ನೈತಿಕ ಹೇರುವಿಕೆ'ಯಂತಹ ಕೃತ್ಯಗಳಲ್ಲಿ ಭಾಗಿಯಾಗಿರುವವರನ್ನು ಪೋಲಿಸರಿಗೆ ಒಪ್ಪಿಸುವುದು ಕಾನೂನಾತ್ಮಕವೆಂದು ಸಾರ್ವಜನಿಕರಿಗೆ ಅರಿವು ಮೂಡಿಸಲು, ಶೈಕ್ಷಣಿಕ ಅಭಿಯಾನವನ್ನು ಕೈಗೊಳ್ಳಬೇಕು ಮತ್ತು ಪೋಲಿಸರು ಅಂತಹ ದೋಷಿಗಳ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ಜರುಗಿಸಬೇಕು.
೫. ಕೋಮು ಪ್ರಚೋದಿತ ಘಟನೆಗಳು ನಡೆದಾಗ, ಜಿಲ್ಲಾಧಿಕಾರಿಗಳು ಘಟನೆ ನಡೆದ ಸ್ಥಳಕ್ಕೆ ಭೇಟಿ ನೀಡಿ, ಸ್ಥಳ ಪರಿಶೀಲನೆ ಮಾಡಬೇಕು ಮತ್ತು ದುಷ್ಕೃತ್ಯ ಎಸಗಿಸದವರ ವಿರುದ್ಧ ಸರಿಯಾದ ಕ್ರಮ ಜರುಗಿಸಲಾಗಿದೆಯೇ ಎಂದು ಖಾತ್ರಿಪಡಿಸಿಕೊಳ್ಳಬೇಕು
೬. ಜಿಲ್ಲಾಧಿಕಾರಿಗಳು ಅಲ್ಪಸಂಖ್ಯಾತ ಸಮುದಾಯಗಳ ಸದಸ್ಯರ ವಿಶ್ವಾಸಗಳಿಸಲು ಅವಶ್ಯ ಯೋಜನೆಗಳನ್ನು ಕೈಗೊಂಡು, ಅವರುಗಳ ಸಮಸ್ಯೆ–ಅಹವಾಲುಗಳನ್ನು ಸ್ವೀಕರಿಸಲು ಮತ್ತು ಪರಿಹರಿಸಲು ನಿರ್ದಿಷ್ಟ ಸಮಯವನ್ನು ಗೊತ್ತುಪಡಿಸಬೇಕು.
೭. ಮಹಿಳೆಯರ ಮೇಲಿನ ಹಿಂಸೆಗಳನ್ನು ತಡೆಯಲು ಕಠಿಣ ಕ್ರಮಗಳನ್ನು ರೂಪಿಸುವ ಪ್ರಕ್ರಿಯೆಯನ್ನು ಜಿಲ್ಲಾಧಿಕಾರಿಗಳು ಆರಂಭಿಸಬೇಕು.

## ಇ. ಜಿಲ್ಲಾ ಪೋಲಿಸ್ ಆಡಳಿತಕ್ಕೆ

೧. ಹುಟ್ಟುಹಬ್ಬದ ಪಾರ್ಟಿಯ ಮೇಲೆ ದಾಳಿ ಎಸಗಲು ನೆರವು ಮತ್ತು ಸಹಾಯ ಮಾಡಿದ ಇನ್ಸ್‌ಪೆಕ್ಟರ್ ರವೀಶ್ ನಾಯಕ್ ವಿರುದ್ಧ ಹೆಚ್ಚುವರಿ ಆಪಾದನಾ ಪಟ್ಟಿ ದಾಖಲಿಸಿಕೊಳ್ಳಬೇಕು.
೨. ಹುಟ್ಟುಹಬ್ಬದ ಪಾರ್ಟಿಯ ದಾಳಿಯನ್ನು ತಡೆಯುವ ನಿಟ್ಟಿನಲ್ಲಿ ಸೂಕ್ತ ಕ್ರಮ ಕೈಗೊಳ್ಳಲು ಮತ್ತು ತಕ್ಷಣಕ್ಕೆ ಪ್ರತಿಕ್ರಿಯಿಸಲು ನಿರಾಕರಿಸಿದ ಮತ್ತು ಒಟ್ಟಾರೆಯಾಗಿ ಇಡೀ ಘಟನೆಯ ಕುತಂತ್ರಿಗಳ ವಿರುದ್ಧ ಕ್ರಮ ಕೈಗೊಳ್ಳದ ಇನ್ಸ್‌ಪೆಕ್ಟರ್ ರವೀಶ್ ನಾಯಕ್ ಮತ್ತು ಇತರೆ ಪೋಲಿಸರ ವಿರುದ್ಧ ಪೋಲಿಸ್ ವಿಭಾಗದ ಮಟ್ಟದಲ್ಲಿ ಕ್ರಮ ಜರುಗಿಸಬೇಕು.
೩. ಪತ್ರಕರ್ತರ ವಿರುದ್ಧದ ಚಾರ್ಜ್‌ಶೀಟ್, ವಿಚಾರಣೆಯನ್ನು ಕೂಡಲೇ ಹಿಂತೆಗೆದುಕೊಳ್ಳಬೇಕು.
೪. ಅಪರಾಧದಲ್ಲಿ ತೊಡಗಿಕೊಳ್ಳುವವರ ವಿರುದ್ಧ ಶಿಸ್ತಿನ ಕ್ರಮ ಜರುಗಿಸಲು ಮೇಲೆ ಸೂಚಿಸಿರುವ ಮಾರ್ಗಸೂಚಿಗಳನ್ನು ಅನುಷ್ಠಾನಕ್ಕೆ ತರಬೇಕು
೫. ಸಾಂವಿಧಾನಿಕ ಆಡಳಿತವನ್ನು ಗೌರವಿಸುವ ಬಗೆಗೆ ವಿಶೇಷವಾಗಿ ಮಹಿಳೆ ಮತ್ತು ಅಲ್ಪಸಂಖ್ಯಾತರ ಬಗ್ಗೆ ಸೂಕ್ಷ್ಮ ಮತ್ತು ಸಂವೇದನೆಯಿಂದ ವರ್ತಿಸುವಂತೆ ಪೋಲಿಸರಿಗೆ ತಕ್ಕ ತರಬೇತಿ ನೀಡಬೇಕು.

## ಈ. ಪ್ರೆಸ್ ಕೌನ್ಸಿಲ್ ಆಫ್ ಇಂಡಿಯಾ/ನ್ಯಾಷನಲ್ ಬ್ರಾಡ್‌ಕ್ಯಾಸ್ಟಿಂಗ್ ಸ್ಟಾಂಡರ್ಡ್ಸ್ ಅಥಾರಿಟಿಗೆ

೧. ಕೋಮು ಸಂಬಂಧಿತ ಘಟನೆಗಳ ವರದಿಗಳು ವಸ್ತುನಿಷ್ಠವಾಗಿದ್ದು, ಪೂರ್ವ ನಿರ್ಧಾರಿತವಲ್ಲದ ಮತ್ತು ಅನ್ಯಾಯಕ್ಕೊಳಗಾದವರ ಪರ ಕಾಳಜಿಯಿಂದ ಕೂಡಿರಬೇಕೆಂಬ ಮಾರ್ಗಸೂಚಿಯೊಂದನ್ನು ಹೊರಡಿಸಬೇಕು.
೨. ವಿದ್ಯುನ್ಮಾನ ಮಾಧ್ಯಮಗಳಲ್ಲಿ ಕೋಮು ಸಂಬಂಧಿತ ಘಟನೆಗಳನ್ನು ಬಿತ್ತರಿಸುವಾಗ, ಅಂತಹ ಘಟನೆಯ ಬಲಿಪಶುಗಳ ಚಾರಿತ್ರ್ಯವನ್ನು ತುಚ್ಛಗೊಳಿಸುವ ಅಥವಾ ಅವಮಾನಕರವಾಗಿ ಚಿತ್ರಿಸುವುದರ ಬಗೆಗೆ ಎಚ್ಚರಿಕೆ ನೀಡಬೇಕು.
೩. ಕೋಮು ಆಧಾರಿತ ಹಲ್ಲೆಗಳ ವರದಿಗಳನ್ನು ತಿರುಚಿ ಮತ್ತು ಪೂರ್ವಾಗ್ರಹ ಪೀಡಿತವಾಗಿ ಬಿಂಬಿಸಿರುವ, ಮುದ್ರಣ/ವಿದ್ಯುನ್ಮಾನ ಮಾಧ್ಯಮದ ವರದಿಗಾರರ ವಿರುದ್ಧ ಸರಿಯಾದ ಕ್ರಮ ಕೈಗೊಳ್ಳಬೇಕು.